ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

(ಮೀನುಗಾರಿಕೆ, ಬಂದರು, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗಳು)

† ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ್).—ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಒಂದು ಇಲಾಖೆಯ ಬೇಡಿಕೆಗಳಿಗೆ ನನ್ನ ವಿರೋಧವನ್ನು ಸೂಚಿಸುತ್ತಾ ಕೆಲವು ವಿಚಾರಗಳನ್ನು ಈ ಸದನದ ಮುಂದಿಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮತ್ತು ರಾಷ್ಟ್ರಪತಿ ಆಡಳಿತದಲ್ಲಿ ಇವರ ಪಕ್ಷದ ಮುಖಂಡರು ಕೊಟ್ಟ ಹೇಳಿಕೆಯಿಂದ ಈ ಒಂದು ಇಲಾಖೆಯ ಗೌರವ ಕಡಿಮೆಯಾಗಿದೆ ಎಂದು ನಾನು ಹೇಳಬೇಕಾಗುತ್ತದೆ. ರಾಜ್ಯದ ಜನರ ಮನಸ್ಸಿನಲ್ಲಿ ಒಂದು ಅನುಮಾನ ಹುಟ್ಟಿದೆ. ಅದೇನೆಂದರೆ, ಹೆಚ್.ಯು.ಡಿ. ಇಲಾಖೆಯಲ್ಲಿ ಕೇವಲ ಸ್ಕ್ಯಾಂಡಲ್ಸ್ ಇವೆ, ಬೇರೆ ಕೆಲಸವೇ ಇಲ್ಲವೆಂಬ ಅಭಿಪ್ರಾಯ ರಾಷ್ಟ್ರಪತಿ ಆಡಳಿತದಲ್ಲಿ ಮತ್ತು ಇವರು ಅಧಿಕಾರದಲ್ಲಿ ಬಂದನಂತರ ಹುಟ್ಟಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಇದರಲ್ಲಿ ಯಾವುದೇ ತರಹದ ಅರ್ಥವಿಲ್ಲ. ಅಧಿಕಾರಿಗಳು ಸಹ ಈ ಇಲಾಖೆಯಲ್ಲಿ ಧೈರ್ಯದಿಂದ ಕೆಲಸ ಮಾಡುವ ಶಕ್ತಿ ಉಳಿದಿಲ್ಲ. ಅಷ್ಟೇ ಅಲ್ಲ, ನಮ್ಮ ರಾಜ್ಯದ ಇತಿಹಾಸದಲ್ಲಿ ಈ ಪ್ರಕಾರ ಈ ಒಂದು ಇಲಾಖೆಯ ಒಂದು ವಿಭಜನೆ ಯಾವಾಗಲೂ ಆಗಿಲ್ಲ. ಇವತ್ತು ಮಾನ್ಯ ಸಚಿವರು ಇಲ್ಲೇ ಕುಳಿತಿದ್ದಾರೆ. ಆದರೆ ಹಿಂದೆ ನಿಮ್ಮ ಅಧೀನದಲ್ಲಿ ಇದ್ದಂತಹ ಅರ್ಬನಲ್ ಸೀಲಿಂಗ್ ಇಲ್ಲ, ಬೆಂಗಳೂರು ವಾಟರ್ ಸಪ್ಲೈ ಇಲ್ಲ, ಬಿ.ಡಿ.ಎ. ಇಲ್ಲ, ಬೆಂಗಳೂರು ಕಾರ್ಪೊರೇಷನ್ ಇಲ್ಲ, ಈ ಪ್ರಕಾರ ಛಿನ್ನ ವಿಛಿನ್ನವಾಗಿ ಈ ಇಲಾಖೆಯನ್ನು ಮಾಡಿ ಪುನಃ ಈ ಇಲಾಖೆಯ ಗೌರವವನ್ನು ಕಡಿಮೆ ಮಾಡಿದ್ದಾರೆ. ನಿಮ್ಮ ಕಾಲದಲ್ಲಿ ಸಹ ಬಿಡಿಎಗೆ ಬೇರೆ ಒಬ್ಬರು ಮಂತ್ರಿ ಮಾಡಿದ್ದಿರಿ ಅನ್ನಬಹುದು ನಿಜ. ಆದರೆ ಬೆಂಗಳೂರು ವಾಟರ್ ಸಪ್ಲೈ, ಕಾರ್ಪೊರೇಷನ್, ಅರ್ಬನ್ ಸೀಲಿಂಗ್ ಇವೆಲ್ಲ ಒಬ್ಬರೇ ಸಚಿವರ ಕಡೆ ಇದ್ದವು. ಆದರೆ ಈಗ ಏನು ಕಾಣುತ್ತದೆಂದರೆ ಮುಖ್ಯ ಮಂತ್ರಿಗಳ ಮನಸ್ಸಿನಲ್ಲಿ ಭಯ ಇದೆ. ನರಸಿಂಹ ಮೂರ್ತಿಯವರಿಗೆ ಕೊಟ್ಟರೆ ತಪ್ಪು ಮಾಡಬಹುದೆಂದು ಭಯಪಡುತ್ತಾರೆ.

ಮಾನ್ಯ ಸದಸ್ಯರು.—ಇದು ರಾಜಕೀಯ ಭಾಷಣವಾಯಿತು.

ಶ್ರೀ ಆರ್. ವಿ. ದೇಶಪಾಂಡೆ.—ಸ್ವಲ್ಪ ಶಾಂತಿಯಿಂದ ಕೇಳಿ. ಇದು ರಾಜಕೀಯ ಭಾಷಣ ಅಲ್ಲ. ದಯಮಾಡಿ ಹಿಂದೆ ಏನೋ ಆಗಿದೆ ಎಂದು ತಪ್ಪು ತಿಳಿದುಕೊಳ್ಳಬಾರದು. ಅರ್ಬನ್ ಸೀಲಿಂಗ್ ಅನ್ನು ಬೇರೆಯವರಿಗೆ ಕೊಟ್ಟರೆ ಏನೋ ಮಾಡಬಹುದೆಂದು ಭಯ ಅವರಿಗೆ ಈಗ ಅಲ್ಲಿನ ನೌಕರರಿಗೆ ಸಂಬಳ ಇಲ್ಲವಾಗಿದೆ. ಸಂಬಳ ಕೊಡುವುದಕ್ಕೆ ಇಲಾಖೆಯಲ್ಲಿ ಹಣ ಇಲ್ಲವೆಂದು ಹೇಳಿದ್ದಾರೆ. ಆದುದರಿಂದ ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ಈ ಇಲಾಖೆಯಲ್ಲಿ ಒಂದು ಕೋ-ಆರ್ಡಿನೇಷನ್ ಇರುವಂತೆ ವ್ಯವಸ್ಥೆ ಮಾಡಬೇಕಾಗುತ್ತದೆ. ಈಗ ಅದು ಇಲ್ಲ. ಮುಖ್ಯ ಮಂತ್ರಿಗಳಿಗೆ ಬಿಡಿಎ. ಬೆಂಗಳೂರು ವಾಟರ್ ಸಪ್ಲೈ ಎಲ್ಲವನ್ನೂ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಬೇರೆ ಒಬ್ಬರು ಮಂತ್ರಿಗಳು ಇದ್ದರೆ ಅವರಿಗೆ ಹೆಚ್ಚಿನ ಜವಾಬ್ದಾರಿ ಕೊಟ್ಟು ಅವರ ಕೈಯಲ್ಲಿ ಈ ಇಲಾಖೆಯನ್ನು ಕೊಟ್ಟರೆ ಅವರು ಚುರುಕಿನಿಂದ ಕೆಲಸ ಆಗಬಹುದೆಂದು ನನ್ನ ಪ್ರಾಮಾಣಿಕ ಅಭಿಪ್ರಾಯ. ಇವತ್ತು ಈ ಒಂದು ಇಲಾಖೆಯಲ್ಲಿ, ರಾಷ್ಟ್ರಪತಿ ಆಡಳಿತದಲ್ಲಿ ನೂರು ಹಳ್ಳಿಗಳಲ್ಲಿ ಇಂಥಿಂಥ ಸ್ಕ್ಯಾಂಡಲ್ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಈ ಇಲಾಖೆಯ ವೈಟ್ ಪೇಪರ್ ಅನ್ನು ತೆಗೆಯಿರಿ. ಎಲ್ಲೆಲ್ಲಿ ಏನೇನು ಮಾಡಿದ್ದಾರೆ, ಯಾರ್ಯಾರು ತಪ್ಪು ಮಾಡಿದ್ದಾರೆ, ತಪ್ಪು ಮಾಡಿದ್ದರೆ ಹೆಚ್ಚಿಗೆ ಎಲ್ಲಿ ಬರಬಹುದು ಅರ್ಬನ್ ಸೀಲಿಂಗ್ ಅಷ್ಟೇ ಬರುತ್ತದೆ; ೧೯೭೭ರ ನಂತರ ಎಷ್ಟೋ ಸರ್ಕಾರಗಳು ಬಂದಿವೆ, ಎಷ್ಟೋ ಮಂತ್ರಿಗಳು ಆಗಿದ್ದಾರೆ, ಮುಖ್ಯ ಮಂತ್ರಿಗಳು ಆಗಿದ್ದಾರೆ. ೧೯೭೭ ರಿಂದ ಇಲ್ಲಿಯವರೆಗೆ ಎಷ್ಟೋ ಕಾನೂನುಗಳು ಬಂದಿವೆ. ಎಷ್ಟೋ ಸರ್ಕಾರಗಳು ಬಂದಿವೆ, ಎಷ್ಟೋ ಜನ ಮಂತ್ರಿಗಳು ಆಗಿದ್ದಾರೆ, ಮುಖ್ಯ ಮಂತ್ರಿಗಳು ಆಗಿದ್ದಾರೆ. ಅದೇ ರೀತಿ ೧೯೭೭ ರಿಂದ ಇಲ್ಲಿಯವರೆಗೆ ಏನೇನು ಕಾರ್ಯಸಾಧನೆ ಆಗಿದೆ ಎಂಬುದನ್ನು ಈ ಮನೆಯ ಮುಂದಿಡಿ. ಸತ್ಯಾಂಶ ಹೊರಬರಲಿ. ಇವತ್ತು ಕೆಲವು ವಿಚಾರಗಳ ಬಗ್ಗೆ ಪ್ರಸ್ತಾಪಿಸುವುದಕ್ಕಾಗುವುದಿಲ್ಲ. ಎನ್‌ಆರ್‌ಐ. ಮತ್ತೊಂದರ ಬಗ್ಗೆ ಪ್ರಸ್ತಾಪಿಸಬೇಕೆಂದರೆ ಅದು ಜುಡಿಶಿಯಲ್ ಮುಂದೆ ಇದೆ. ಆದ್ದರಿಂದ ಆ ಬಗ್ಗೆ ಕಾಮೆಂಟು ಮಾಡುವುದಿಲ್ಲ. ಇವತ್ತಲ್ಲ ನಾಳೆ ಸತ್ಯ ಏನೆಂದು ಗೊತ್ತಾಗುತ್ತದೆ. ಇವತ್ತು ಈ ಇಲಾಖೆಯ ವರದಿಯನ್ನು ನೋಡಿದಾಗ ಕರ್ನಾಟಕ ಹೌಸಿಂಗ್ ಬೋರ್ಡ್‌ನಿಂದ ಶುರು ಮಾಡಿದ್ದಾರೆ. ಈಗ ನಾನು

ಅದಕ್ಕೆ ಬರುತ್ತೇನೆ. ನನ್ನ ಮಿತ್ರರಾದ ಶ್ರೀ ಪ್ರಭಾಕರ್ ರಾಣೆಯವರು ಈಗಾಗಲೇ ಏನು ಪ್ರಸ್ತಾಪ ಮಾಡಿದರು ಅದು ನೂರಕ್ಕೆ ನೂರು ಸತ್ಯ. ನಿಜವಾಗಿ ಆ ದಿನ ನಾನು ಕಾರವಾರ್‌ನಲ್ಲಿ ಇದ್ದೆ. ಇದೇ ಪ್ರಕಾರ ಮನೆ ಕಟ್ಟಿದರೆ ನಾವು ಡೆಡ್ ಬಾಡಿ ಅಷ್ಟೇ ನೋಡಬೇಕು. ಇವೊತ್ತು ಕರ್ನಾಟಕ ಹೌಸಿಂಗ್ ಬೋರ್ಡ್ ೧೯೬೨ರಲ್ಲಿ ಸ್ಥಾಪನೆ ಆಗಿದೆ. ಇವೊತ್ತು ೩೧-೦೩-೧೯೮೦ರ ವರೆಗೆ ಕಟ್ಟಿದ ಮನೆಗಳು ೮೩,೪೮೭ ಮತ್ತು ಇವರ ಪ್ರೋಗ್ರಾಮ್ ಪ್ರಕಾರ ೭೯-೮೦ಕ್ಕೆ ೩೦೭, ಅಚೀವ್‌ಮೆಂಟ್ ೩೦೪. ಇದು ಪ್ರೆಸಿಡೆಂಟ್ ರೂಲ್‌ನಲ್ಲಿ ಆಗಿದ್ದು, ನಮ್ಮ ಕಾಲದಲ್ಲಿ ಅಲ್ಲ. ನಾನು ಏನು ಹೇಳುತ್ತಿದ್ದೇನೆ ಅಂದರೆ, ಈ ಅಚೀವ್‌ಮೆಂಟ್ ಏನು ಆಗಿದೆ, ಇದರಲ್ಲಿ ಮಾನ್ಯ ಸಚಿವರು ಏನು ನೋಡಬೇಕು ಎಂದರೆ ಕ್ವಾಲಿಟಿ ಕನ್‌ಸ್ಟ್ರಕ್ಷನ್ ಏನು ಆಗಿದೆ ಎಂದು. ನಾನು ಸಹ ಇಲಾಖೆಯ ಮಂತ್ರಿ ಆಗಿದ್ದೆ ; ನನಗೆ ಗೊತ್ತು. ಈ ಮನೆಗಳ ಕ್ವಾಲಿಟಿ ಏನು, ಇದರ ಬಗ್ಗೆ ಯಾರೂ ಅಭ್ಯಾಸ ಮಾಡುತ್ತಾ ಇಲ್ಲ, ಅದರ ಪೈಕಿ ಎಷ್ಟು ಮನೆಗಳು ಅಲಾಟ್ ಆಗಿದೆ, ಅದು ಬಹಳ ಮಹತ್ವ. ಇವೊತ್ತು ಅಲಾಟ್‌ಮೆಂಟ್ ಇಲ್ಲದೆ, ಸಾವಿರಾರು ಮನೆಗಳು ಹಾಗೆ ಬಿದ್ದಿವೆ. ಅಲಾಟ್‌ಮೆಂಟ್ ಮಾಡಿದ್ರೇ ಅವರು ತೆಗೆದುಕೊಳ್ಳುವುದಿಲ್ಲ. ಈ ಪ್ರಕಾರದ ಮನೆಗಳು ಇವೆ. ಆದರಿಂದ ಇವೊತ್ತು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ೨೫ ವರ್ಷದಲ್ಲಿ ೮೩ ಸಾವಿರ ಮನೆಗಳನ್ನು ಕಟ್ಟಿದ್ದೀರಲ್ಲ, ನಾನು ಒಪ್ಪಿಕೊಳ್ಳುತ್ತೇನೆ. ತಾವು ಅಧಿಕಾರಕ್ಕೆ ಬಂದು ಆರು ತಿಂಗಳಾಯಿತು, ತಮಗೆ ಸಾಕಷ್ಟು ಅವಕಾಶ ಕೊಡಬೇಕಾಗುತ್ತದೆ. ಆರು ತಿಂಗಳಲ್ಲಿ ನೀವು ಹಾಗೆ ಮಾಡಲಿಲ್ಲ, ಹೀಗೆ ಮಾಡಲಿಲ್ಲ ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ತಾವು ಮನೆ ಕಟ್ಟಲು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಲ್ಲ, ಆ ಮನೆ ಕಟ್ಟುವುದು ಸರಿ ಸಮಯದಲ್ಲಿ ಆಗಬೇಕಾಗಿದೆ, ಕ್ವಾಲಿಟಿ ಮನೆ ಆಗಬೇಕಾಗುತ್ತದೆ. ಇವೊತ್ತು ಏನು ಆಗುತ್ತಿದೆ. ಮನೆಗೆ ಅರ್ಜಿ ಕರೆಯುತ್ತೀರಿ. ಮನೆ ಸಿಕ್ಕುವುದು ಆರು ವರ್ಷದ ನಂತರ ಇದರಿಂದ ಪ್ರೈಸ್ ಎಸ್ಕಲೇಟ್ ಆಗಿ ೧೦ ಸಾವಿರ ರೂಪಾಯಿ ಇದ್ದುದ್ದು ೫೦ ಸಾವಿರ ಆಗುತ್ತದೆ. ಹೌಸಿಂಗ್ ಬೋರ್ಡ್‌ನವರು ಏನು ಹೇಳುತ್ತಾರೆ, ಬೆನಿಫಿಷಿಯರೀಸ್‌ಗೆ ನಾವು ಹಣ ಕೊಡಬೇಕು ಎಂದು. ಅದು ಸರಿಯಲ್ಲ. ಒಂದು ಇದರ ಬಗ್ಗೆ ತಾವು ಕಾನೂನು ಮಾಡಿ. ಯಾವ ಒಂದು ಹಣಕ್ಕೆ ಮನೆ ಕೊಡಲು ತಾವು ಒಪ್ಪಿಕೊಳ್ಳುತ್ತೀರಿ, ಅಷ್ಟೇ ಹಣಕ್ಕೆ ಮನೆ ಬೆನಿಫಿಷಿಯರೀಸ್‌ಗೆ ಸಿಕ್ಕಬೇಕು ಅಥವಾ ೫ ಪರ್ಸೆಂಟ್, ೧೦ ಪರ್ಸೆಂಟ್ ಎಕ್ಸ್‌ಗ್ರೇಷಿಯಾ ಹೆಚ್ಚು ತೆಗೆದುಕೊಳ್ಳಬಹುದು. ಇಲ್ಲ ಅಂದರೆ ಇವೊತ್ತು ಯಾರಿಗೂ ಮನೆ ಸಿಕ್ಕುವುದಿಲ್ಲ. ಯಾರು ಹೌಸಿಂಗ್ ಬೋರ್ಡ್‌ನಿಂದ ಮನೆ ತೆಗೆದುಕೊಳ್ಳುವುದು. either Scheduled Castes/Scheduled Tribes, economically weaker Sections or middle class ಈ ಜನರ ಮೇಲೆ ದೊಡ್ಡ ಅನ್ಯಾಯ ಆಗುತ್ತದೆ. ಇವೊತ್ತು ತಾವು ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೀರಿ, ೧೨ ಸಾವಿರ ಮನೆ ಕಟ್ಟುತ್ತೇನೆ ಎಂದು, ಮಾನ್ಯ ಸಚಿವರು ಉತ್ತರ ಕೊಡುವಾಗ ಈ ಕಾರ್ಯಕ್ರಮದ ಬಗ್ಗೆ ಹೇಳಬೇಕಾಗುತ್ತದೆ. ಈ ದಿವಸ ೧೨ ಸಾವಿರ ಮನೆ ಕಟ್ಟುತ್ತೇವೆ ಎಂದು ಹೇಳಿದ್ದೀರಿ. ಈಗಾಗಲೇ ಏಪ್ರಿಲ್, ಮೇ, ಜೂನ್ ತಿಂಗಳು ಮುಗಿಯಿತು. ಈ ಮೂರು ತಿಂಗಳಲ್ಲಿ ಏನೇನು ಪ್ಲಾನ್ ಮಾಡಿದ್ದೀರಿ. ಎಲ್ಲೆಲ್ಲಿ ಲ್ಯಾಂಡ್‌ಗಳನ್ನು ಐಡೆಂಟಿಫೈ ಮಾಡಿದ್ದೀರಿ. ಎಲ್ಲೆಲ್ಲಿ ೧೨ ಸಾವಿರ ಮನೆಗಳನ್ನು ಕಟ್ಟುತ್ತೀರಿ, ಇದಕ್ಕೆ ಹಣ ಎಲ್ಲಿ ಇದೆ. Where is the money in the Budget ? ಅದರ ಸಲುವಾಗಿ ಕೇವಲ ಘೋಷಣೆ ಮಾಡುವುದು ಬೇಡ. ಈಗ ಏನು ಇರುವುದು. ನಿಜವಾಗಿ ನಾಲ್ಕು ಸಾವಿರ ಅಥವಾ ಐದು ಸಾವಿರ ಮನೆ ಕಟ್ಟಿ, ಒಳ್ಳೆಯ ಮನೆ ಕಟ್ಟಿ ಮತ್ತು ಜನರಿಗೆ ಹಂಚಿ. ಇವೊತ್ತು ಈಗಾಗಲೇ ನಾನು ಹೇಳಿದ ಹಾಗೆ ಹೌಸಿಂಗ್ ಬೋರ್ಡ್‌ನವರಿಗೆ ಇರುವ ಸಮಸ್ಯೆ ಎಂದರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು. ಯಲಹಂಕದಲ್ಲಿ ಲ್ಯಾಂಡ್ಸ್ ಇರಬಹುದು ಅದು ಬಿಟ್ಟರೆ ರಾಜ್ಯದಲ್ಲಿ ಬೇರೆ ಲ್ಯಾಂಡ್ಸ್ ಇಲ್ಲ. ಲ್ಯಾಂಡ್ ಅಕ್ವಿಸಿಷನ್ ಮಾಡಬೇಕಾದರೆ ಸಾಕಷ್ಟು ಸಮಸ್ಯೆಗಳು ಇವೆ. ಅದರ ಸಲುವಾಗಿ ಇಂತಹ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳುವುದಕ್ಕೆ ಮುಂಚೆ ನೀವು ಲ್ಯಾಂಡ್ ಆಕ್ವೈರ್ ಮಾಡಿಕೊಂಡು ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಆದರೆ ತಮ್ಮ ಹತ್ತಿರ ಲ್ಯಾಂಡ್ ಇಲ್ಲ. ಆದರೂ ೧೨ ಸಾವಿರ ಮನೆ ಕೊಡುತ್ತೇವೆಂದು ಹೇಳಿದ್ದೀರಿ. ಈ ರಿಪೋರ್ಟ್ ನೋಡಿದ್ದೇನೆ. ಯಲಹಂಕದಲ್ಲಿ ೪೦೦ ಎಕರೆ ಲ್ಯಾಂಡ್ ಇದೆ ಎಂದು ಹೇಳಿದ್ದೀರಿ A major portion of the land is available in Yelhanka. How it is possible to construct 12000 houses this year ? Where is the budget provision ? ಇವೊತ್ತು ಈ ಒಂದು ಅಕ್ವಿಸಿಷನ್ ಏನು ಆಗಿವೆ ಎಂದರೆ ನೀವು ಆದಷ್ಟು ವಾಲಂಟರಿ ಅಕ್ವಿಸಿಷನ್‌ಗೆ ಪ್ರೋತ್ಸಾಹ ಕೊಡಬೇಕು. ಬಿ.ಡಿ.ಎ.ನಲ್ಲಿ ನಾನು ಇಂಟೂ ಮಾಡಿದ್ದೇನೆ. ವಾಲಂಟರಿ ಅಕ್ವಿಸಿಷನ್ ಸ್ಕೀಮ್‌ನಲ್ಲಿ ಇನ್‌ಸೆಂಟೀವ್ ಕೊಟ್ಟು ಯಾ[illegible] ಭೂಮಿಯನ್ನು ಇಂತಹ ಮನೆಗಳನ್ನು ಕಟ್ಟಲಿಕ್ಕೆ ಕೊಡುತ್ತಾರೆ. ಅವರಿಗೆ ಇನ್‌ಸೆಂ[illegible]

ಒಂದು ಪ್ಲಾಟ್ ಕೊಡುವುದು ಅಥವಾ ಅರ್ಬನ್ ಸೀಲಿಂಗ್ ಆಕ್ಟ್ ಇದ್ದರೆ ಸೀಲಿಂಗ್ ಲಿಮಿಟ್‌ನಷ್ಟು ಲ್ಯಾಂಡ್ ಕೊಡುವುದು; ಈ ಪ್ರಕಾರ You can to introduce incentive scheme under Urban Land Ceiling if you do this then ಬಹಳ ದೊಡ್ಡ ಪ್ರಮಾಣದಲ್ಲಿ ಲ್ಯಾಂಡ್ ಅಕ್ವೈರ್ ಮಾಡಲಿಕ್ಕೆ ಸಾಧ್ಯ ಆಗಬಹುದು.

ಇಲ್ಲ ಅಂದರೆ ಅದು ಬಹಳ ತೊಂದರೆಯಾಗಬಹುದು, ತಮ್ಮ ಟಾರ್ಗೆಟ್ ಮುಟ್ಟಲಿಕ್ಕೆ ಅಸಾಧ್ಯ ಆಗಬಹುದು. ನಾನು ಈ ಇಲಾಖೆಯಲ್ಲಿ ೭-೮ ತಿಂಗಳು ಮಂತ್ರಿಯಾಗಿದ್ದೆ. ನಾನು ನೋಡಿದ್ದೇನೆ, ನನ್ನ ಅನುಭವದಿಂದ ಹೇಳುತ್ತಾ ಇದ್ದೇನೆ. ಇವತ್ತು ಏನಾಗಿದೆಯೆಂದರೆ ಎಲ್ಲೋ ಮನೆ ಕಟ್ಟಿದರೂ ಸಹ ಹಿಂದೆ ೧೦ ಸಾವಿರ ರೂಪಾಯಿ ಮನೆ ಕಾಸ್ಟ್ ಇದ್ದರೆ ಇವತ್ತು ೨೦-೩೦ ಸಾವಿರ ಆಗುತ್ತದೆ. ಇದು ಕಾಮನ್‌ಮ್ಯಾನ್ ಮೇಲೆ ಅಫೆಕ್ಟ್ ಆಗುತ್ತದೆ ಇದರಿಂದ ಹೌಸಿಂಗ್ ಬೋರ್ಡ್‌ಗೂ ಏನೂ ಆಗುತ್ತಾ ಇಲ್ಲ. ಇದೇ ಪ್ರಕಾರ ಪ್ರೈವೇಟ್ ಬಿಲ್ಡರ್ಸ್ ಮಾಡಿದರೆ ನಾವು ಏನು ಮಾಡುತ್ತೇವೆ? ಪ್ರೈವೇಟ್ ಬಿಲ್ಡರ್ಸ್‌ಗೆ ನಾವು ಅಲೋ ಮಾಡುತ್ತೇವೆಯೇ ಈ ಪ್ರಕಾರ ಮಾಡಲಿಕ್ಕೆ. ಆದರೆ ಇವತ್ತು ಹೌಸಿಂಗ್ ಬೋರ್ಡ್ ಏನೇ ಮಾಡಿದರೂ ನಡೆಯುತ್ತದೆ ಅದರ ಸಲುವಾಗಿ ಈಗಾಗಲೆ ತಮಗೆ ಸೂಚನೆ ಕೊಟ್ಟ ಪ್ರಕಾರ ಹೌಸಿಂಗ್ ಬೋರ್ಡ್‌ನಲ್ಲಿ ಒಂದು ಡಿಸಿಷನ್ ತೆಗೆದುಕೊಳ್ಳಿ. ಒಂದು ಯೂನಿಟ್ ಕಾಸ್ಟ್ ಎಷ್ಟು ಆಗುತ್ತದೆ, ಅಷ್ಟೇ ಹಣಕ್ಕೆ ನಾವು ಮನೆ ಕೊಡುತ್ತೇವೆ ಎನ್ನುವುದನ್ನು ಯೋಚನೆ ಮಾಡಿ, ತೀರ್ಮಾನ ತೆಗೆದುಕೊಳ್ಳಿ. ಆಗ ನಮಗೆ ಗೌರವ ಬರುತ್ತದೆ, ಸರ್ಕಾರಕ್ಕೂ ಗೌರವ ಬರುತ್ತದೆ, ಜನರೂ ನಿಮಗೆ ಆಶೀರ್ವಾದ ಮಾಡುತ್ತಾರೆ. ಇವತ್ತು ಈ ಮನೆ ಕಟ್ಟಲಿಕ್ಕೆ ಸಾಕಷ್ಟು ಅವಕಾಶ ಇದೆ, ತಾವು ಹುಡ್ಕೋದಿಂದ ಹಣ ತರಬಹುದು, ಎಲ್.ಐ.ಸಿ. ಯಿಂದ ಹಣ ತರಬಹುದು. ತಾವು ಸೆಲ್ಫ್ ಫೈನಾನ್ಸಿಂಗ್ ಸ್ಕೀಂಗೆ ಹೆಚ್ಚಿನ ಮಹತ್ವ ಕೊಡಿ, ಇದರಿಂದ ಜನರೇ ಹಣದಿಂದ ಮನೆ ಕಟ್ಟಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ತಾವು ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಇಲಾಖೆಯಲ್ಲಿ ಈಗ ಏನಾಗಿದೆಯೆಂದರೆ, ಅದು ಹೌಸಿಂಗ್ ತಪ್ಪಲ್ಲ. ಹುಡ್ಕೋ ಸಂಸ್ಥೆಯವರು ಒಂದು ಕಂಡೀಷನ್ ಹಾಕಿದ್ದಾರೆ. ಏನೆಂದರೆ ಆರ್ಕಿಟೆಕ್ಟ್‌ನಿಂದ ಈ ಪ್ಲಾನ್ ತಯಾರಾಗಬೇಕು ಎಂದು ಕಂಡೀಷನ್ ಹಾಕಿದ್ದಾರೆ. ಆರ್ಕಿಟೆಕ್ಟ್‌ನಿಂದ ಪ್ಲಾನ್ ತಯಾರಾಗಬಾರದು ಎಂದು ಹೇಳುವುದಿಲ್ಲ. ಆದರೆ ಯಾವ ಆರ್ಕಿಟೆಕ್ಟ್ ಪ್ಲಾನ್ ತಯಾರು ಮಾಡುತ್ತಾನೆ ಆತನು ಆ ಭಾಗದ ಪರಿಸ್ಥಿತಿಯನ್ನು ವಿಚಾರ ಮಾಡಬೇಕು. ಕಾರವಾರದಲ್ಲಿ ಕನ್‌ಸ್ಟ್ರಕ್ಷನ್ ಕಾಸ್ಟ್ ಏನಿದೆ, ಅಲ್ಲಿ ಯಾವ ಪ್ರಕಾರ ಮನೆ ಕಟ್ಟಬೇಕಾಗುತ್ತದೆ, ಮಳೆ ಪ್ರಮಾಣ ಎಷ್ಟಿದೆ, ಇವೆಲ್ಲಾ ನೋಡಿ ಆರ್ಕಿಟೆಕ್ಟ್ ಪ್ಲಾನ್ ಮಾಡಿದರೆ ಸರಿ. ಆದರೆ ನಿಮ್ಮ ಆರ್ಕಿಟೆಕ್ಟ್ ಏನಿದ್ದಾರೆ, ಅವರೆಲ್ಲರೂ ಬೆಂಗಳೂರಿನಲ್ಲಿದ್ದಾರೆ. ಬೆಂಗಳೂರಿನಲ್ಲಿ ಆರ್ಕಿಟೆಕ್ಟ್ ಪ್ಲಾನ್ ನಕ್ಷೆ ತಯಾರು ಮಾಡುತ್ತಾರೆ. ನಾನು ಮಂತ್ರಿ ಇದ್ದಾಗ ಅದನ್ನು ವಿರೋಧ ಮಾಡಿದ್ದೇನೆ. ನಮ್ಮಲ್ಲಿ ಇಂಜಿನಿಯರ್ಸ್ ಇದ್ದಾರೆ, ಹೌಸಿಂಗ್ ಬೋರ್ಡ್‌ನಲ್ಲಿ ಚೀಫ್ ಇಂಜಿನಿಯರ್ ಇದ್ದಾರೆ, ಎಕ್ಸಿಕ್ಯೂಟೀವ್ ಇಂಜಿನಿಯರ್ ಇದ್ದಾರೆ. ನಾನು ಆರ್ಕಿಟೆಕ್ಟ್‌ಗೆ ಎಗೆನೆಸ್ಟ್ ಇಲ್ಲ. ಹುಡ್ಕೋ ಸಂಸ್ಥೆಯವರು ಇವರ ಉಪಯೋಗ ತೆಗೆದುಕೊಳ್ಳಬೇಕು ಇವರ ಕಡೆಯಿಂದ ಪ್ಲಾನ್ ತಯಾರು ಮಾಡಿಕೊಳ್ಳಬೇಕೆಂದು ಹೇಳುತ್ತಾ ಇದ್ದಾರೆ ಎಂದು ಹೇಳಿದರು. ಆರ್ಕಿಟೆಕ್ಟ್ ಇದ್ದರೂ ಸಹ ಆ ಭಾಗದ ಲೋಕಲ್ ಕಂಡೀಷನ್ಸ್ ನೋಡಿ ಮನೆ ಕಟ್ಟಿದರೆ ಇಂತಹ ಪರಿಸ್ಥಿತಿ ಉದ್ಭವ ಆಗುವುದಿಲ್ಲ, ಇಲ್ಲದೇ ಹೋದರೆ ರಾಯಚೂರಿನಲ್ಲಿ ನಡೆದ ಪರಿಸ್ಥಿತಿಯೇ ಎಲ್ಲಾ ಕಡೆ ಆಗುತ್ತದೆ. ಇವತ್ತು ಮತ್ತೊಂದು ವಿಚಾರವನ್ನು ತಮಗೆ ಹೇಳುವುದೇನೆಂದರೆ, ಈ ಹೌಸಿಂಗ್ ಬೋರ್ಡ್‌ನ ಎಷ್ಟೋ ಮನೆಗಳು ಇನ್ನೂ ಖಾಲಿ ಇವೆ, ಎಷ್ಟೋ ಸೈಟ್ಸ್ ಇವೆ, ಅವನ್ನು ಆದಷ್ಟು ಬೇಗ ಅಲಾಟ್ ಮಾಡಿ. ನಾನು ಈ ಇಲಾಖೆಯ ಮಂತ್ರಿ ಇದ್ದಾಗ ಒಂದು ಕಾರ್ಯಕ್ರಮ ಕೊಟ್ಟಿದ್ದೆ ಪ್ರತಿ ತಿಂಗಳೂ ಯಾವ ಪ್ರಕಾರ ಸೈಟ್ಸ್ ಹರಾಜು ಆಗಬೇಕು ಎಂದು. ಏಕೆಂದರೆ, ಇದರಿಂದ ಹೌಸಿಂಗ್ ಬೋರ್ಡ್‌ಗೆ ರಿಸೋರ್ಸಸ್ ಡೆವಲಪ್ ಆಗುತ್ತದೆ ಮತ್ತು ಜನಗಳಿಗೂ ಅನುಕೂಲವಾಗುತ್ತದೆ. ಮತ್ತೆ ಈ ಇಲಾಖೆಯಲ್ಲಿ ಡೀಸೆಂಟ್ರಲೈಸೇಷನ್ ಆಗಬೇಕಾಗಿದೆ. ಇಲ್ಲದಿದ್ದರೆ ಒಂದು ಸಣ್ಣ ಮನೆ ಹಲಿಯಾಳ ದಂಥ ಊರಿನಲ್ಲಿ ಅಲಾಟ್ ಮಾಡಬೇಕಾದರೆ ಬೆಂಗಳೂರಿಗೆ ಫೈಲ್ ಬರಬೇಕು, ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಅಧಿಕಾರ ಇಲ್ಲ, ಎಸ್.ಇ. ಗೆ ಅಧಿಕಾರ ಇಲ್ಲ. ಅದರ ಸಲುವಾಗಿ ಈ ಇಲಾಖೆಯಲ್ಲೂ ಸಹ ಡೀಸೆಂಟ್ರಲೈಸೇಷನ್ ತರಬೇಕಾಗುತ್ತದೆ. ಕೆಲವು ಪ್ಲಾನ್ ಎಸ್ಟಿಮೇಟ್ಸ್ ಅಪ್ರೂವ್ ಮಾಡುವ ಅಧಿಕಾರ ಕೆಲವು ಲೆವೆಲ್‌ತನಕ ಕೊಡಬೇಕಾಗುತ್ತದೆ. ಎಲ್ಲಾ ಕೆಲಸವನ್ನು ಅಲ್ಲಿರುವ ಎಂ.ಡಿ. ಮಾಡಬೇಕಾದರೆ ಅಥವಾ ಬೋರ್ಡ್ ಮಾಡಬೇಕಾದರೆ ಅದರ ಪರಿಣಾಮ ಏನಾಗುತ್ತದೆ ಎನ್ನುವುದು ತಮಗೆ ಗೊತ್ತು, ಡಿಲೇ ಅಗುತ್ತದೆ, ಕಾಸ್ಟ್ ಜಾಸ್ತಿ ಆಗುತ್ತದೆ, ಜನಸಾಮಾನ್ಯರ ಮೇಲೆ ಅದರ ಹೊರೆ ಬೀಳುತ್ತದೆ. ಅದರ ಸಲುವಾಗಿ ಈ ಇಲಾಖೆಯಲ್ಲಿ ಎಲ್ಲೆಲ್ಲಿ ಡೀಸೆಂಟ್ರಲೈಸ್ ಮಾಡಲಿಕ್ಕೆ ಸಾಧ್ಯ

ಅಲ್ಲೆಲ್ಲಾ ಡೀಸೆಂಟ್ರಲೈಸ್ ಮಾಡಲಿಕ್ಕೂ ತಾವು ಪ್ರಯತ್ನ ಮಾಡಬೇಕು. ಅದೇ ಪ್ರಕಾರ ಈ ಇಲಾಖೆಯಲ್ಲಿ ಕೋಆರ್ಡಿನೇಷನ್ ಇಲ್ಲ. ಇವತ್ತು ಅವರು ಯಲಹಂಕದ ಹತ್ತಿರ ಒಂದು ಕಾಲೋನಿ ಕಟ್ಟಬೇಕಾದರೆ ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನವರ ಸಹಾಯ ತೆಗೆದುಕೊಳ್ಳಬೇಕು. ಕಾರವಾರದಲ್ಲಿ ಮನೆ ಕಟ್ಟಬೇಕೆಂದರೆ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಅವರ ಸಹಾಯ ತೆಗೆದುಕೊಳ್ಳಬೇಕು.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಒಂದು ಕಡೆ ಕರ್ನಾಟಕ ಅರ್ಬನ್ ವಾಟರ್ ಸಪ್ಲೈನವರು ಸಹಕಾರ ಕೊಡುವುದಿಲ್ಲ. ಮತ್ತೊಂದು ಕಡೆ ಕೆ.ಇ.ಬಿ. ಯವರು ಸಹಕಾರ ಕೊಡುವುದಿಲ್ಲ. ಇದರಿಂದ ಡಿಲೇ ಆಗುತ್ತಿದೆ. ಅದಕ್ಕಾಗಿ ನಾನು ಒಂದು ಸಲಹೆ ಕೊಡುವುದೇನೆಂದರೆ ಹೈಲೆವೆಲ್ ಅಧಿಕಾರಿಗಳ ಒಂದು ಸಮಿತಿಯನ್ನು ಮಾಡಿ, ಈ ಎಲ್ಲ ಇಲಾಖೆಗಳ ಕೋಆರ್ಡಿನೇಷನ್ ಬರುವಂತೆ ಮಾಡಬೇಕಾಗುತ್ತದೆ. ನೀವು ಅಲ್ಲಿ ಕೂತು ಈ ಸಮಸ್ಯೆಗಳನ್ನು ಬಗೆಹರಿಸಬೇಕಾಗುತ್ತದೆ. ಲೋ ಲೆವೆಲ್ ಅಧಿಕಾರಿಗಳು ಯಾರೂ ಕೇಳುವುದಿಲ್ಲ. ಕೆ.ಇ.ಬಿ. ಯವರು ಪವರ್ ಕೊಡಿ ಅಂದರೆ ಕೊಡುವುದಿಲ್ಲ. ಆದ್ದರಿಂದ ಈ ಇಲಾಖೆಗಳ ಮಧ್ಯೆ ಕೋಆರ್ಡಿನೇಷನ್ ಬಹಳ ಅವಶ್ಯಕತೆ ಇದೆ. ಮೊನ್ನೆ ಕೆಲವು ಜನರು ತಮ್ಮನ್ನು ಬಂದು ಭೇಟಿಯಾಗಿರಬಹುದು. ಜಾರಕಬಂಡೆ ಕಾವಲ್‌ನಲ್ಲಿ ಸೋಫ್ ಫ್ಯಾಕ್ಟರಿ ಹಿಂಭಾಗದಲ್ಲಿ ಹೌಸಿಂಗ್ ಬೋರ್ಡ್‌ನವರು ೨೦೦-೩೦೦ ಜನರಿಗೆ ನಿವೇಶನ ಕೊಟ್ಟಿದ್ದಾರೆ, ಮತ್ತೆ ಕೆಲವು ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಲೋಕೋಪಯೋಗಿ ಇಲಾಖೆಯ ಮೂಲಕ ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ಹ್ಯಾಂಡ್ ಓವರ್ ಮಾಡಿದ್ದಾರೆ. ಇದರಿಂದಾಗಿ ಅಲ್ಲಿ ಸುಮಾರು ೨೦೦-೩೦೦ ಜನರಿಗೆ ಏನು ನಿವೇಶನಗಳನ್ನು ಕೂಡ ಕೊಡಲಾಗಿದೆ, ಆ ಜನರಿಗೆ ಇವತ್ತು ಅಲ್ಲಿ ಪೋಲೀಸಿನವರು ಮನೆಗಳನ್ನು ಕಟ್ಟುವುದಕ್ಕೆ ಬಿಡುತ್ತಿಲ್ಲ. ಇದು ನಮ್ಮ ಜಾಗ ಎಂದು ಹೇಳುತ್ತಿದ್ದಾರೆ. ಹೋಂ ಡಿಪಾರ್ಟ್‌ಮೆಂಟ್‌ನವರು ನಾವು ಲೋಕೋಪಯೋಗಿ ಇಲಾಖೆಯಿಂದ ಖರೀದಿ ಮಾಡಿದ್ದೇವೆ. ಮನೆ ಜೊತೆಗೆ ಜಾಗವನ್ನೂ ಖರೀದಿ ಮಾಡಿದ್ದೇವೆಂದು ಹೇಳಿದ್ದಾರೆ. ಕಳೆದ ೭-೮ ತಿಂಗಳಿಂದ ಈ ಸಮಸ್ಯೆ ಇದೆ. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದು ಈ ಸಮಸ್ಯೆಯನ್ನು ಬೇಗ ಬಗೆಹರಿಸಿ. ಮತ್ತೆ ಸೈಟುಗಳನ್ನು ಪಡೆಯುವುದಕ್ಕೆ ಇರತಕ್ಕ ಅರ್ಹತೆಯಾದರೂ ಏನು? ಸೈಟ್ ಪಡೆಯಲು ಇನ್‌ಕಂ ಲಿಮಿಟ್ ೨೦೦೦ ರೂಪಾಯಿ ಇದೆ. ಇವತ್ತು ಕೂಲಿ ಮಾಡುವವನಿಗೆ ಮಿನಿಮಮ್ ೧೨-೧೩ ರೂಪಾಯಿ ಇದೆ. ನೀವು ಇನ್‌ಕಂ ಲಿಮಿಟ್ ೨೦೦೦ ಹಾಕಿದರೆ, ಯಾರಿಗೂ ಮನೆ ನಿವೇಶನ ಸಿಗುವುದಿಲ್ಲ. ಆದ್ದರಿಂದ ಇದನ್ನು ೨೦೦೦ ದಿಂದ ೫೦೦೦ಕ್ಕೆ ಏರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇದರಿಂದ ಎಸ್.ಸಿ. ಮತ್ತು ಎಸ್‌ಟಿ ಹಾಗೂ ವೀಕರ್ ಸೆಕ್ಷನ್‌ಗೆ ಅನುಕೂಲವಾಗುತ್ತದೆ. ಅದೇ ಪ್ರಕಾರ ಇವತ್ತು ಲ್ಯಾಂಡ್ ಅಕ್ವೈರ್ ಮಾಡುವ ವಿಷಯದಲ್ಲಿಯೂ ಅನಾನುಕೂಲಗಳು ಇವೆ. ನಿವೇಶನ ಕೊಡತಕ್ಕ ಕೆಲಸವನ್ನು ಜಿಲ್ಲಾಪರಿಷತ್ತು, ಮಂಡಲ ಪಂಚಾಯ್ತಿಗಳಿಗೆ ವಹಿಸಲಾಗಿದೆ. ಲ್ಯಾಂಡ್ ಅಕ್ವಿಜಿಷನ್‌ಗೆ ಸಂಬಂಧಪಟ್ಟ ಎಷ್ಟೋ ಕೇಸುಗಳಲ್ಲಿ ಕೋರ್ಟ್ ಡಿಕ್ರಿ ಕೂಡ ಆಗಿದೆ. ಕೆಲವು ಹೈಕೋರ್ಟ್‌ತನಕ ಕೂಡ ಹೋಗಿದೆ. ನಿವೇಶನ ಹಂಚಿಕೆಗೆ ಸಂಬಂಧಪಟ್ಟಂತೆ ಸಾಕಷ್ಟು ಪ್ರಾವಿಷನ್ ಮುಂಗಡ ಪತ್ರದಲ್ಲಿ ಮಾಡಬೇಕಾಗುತ್ತದೆ. ಇದರಿಂದ ಲ್ಯಾಂಡ್ ಅಕ್ವೈರ್ ಮಾಡಲು ಅನುಕೂಲವಾಗುತ್ತದೆ. ಇಲ್ಲದೇ ಹೋದರೆ, ಒಂದು ಸೈಟು ಕೂಡ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಜನತಾ ಮನೆಗಳ ಬಗ್ಗೆ ತಾವು ಇಲ್ಲಿ ಕೂತಾಗ ಬಹಳ ಮಾತನಾಡಿದ್ದೀರಿ. ಇವತ್ತು ಜನತಾ ಮನೆಗಳ ಸಾಲಕ್ಕೆ ಸಂಬಂಧಪಟ್ಟಂತೆ ಕಂತು ಕಟ್ಟಿಲ್ಲವೆಂದು ಗಲಾಟೆ ಮಾಡುತ್ತಿದ್ದೀರಿ. ನಮ್ಮ ಜಿಲ್ಲೆಯಲ್ಲಿ ನಿಮ್ಮ ಪಕ್ಷದ ಶಾಸಕರೇ ಡಿ.ಸಿ. ಯವರನ್ನು ವಿನಂತಿಸಿ, ಬಡವರ ಮನೆಗಳನ್ನು ಹರಾಜು ಹಾಕಬೇಡಿ ಎಂದು ಹೇಳಿದ್ದಾರೆ. ಬಡವರ ಪಾತ್ರೆ ಪದಾರ್ಥಗಳನ್ನು ಹರಾಜು ಹಾಕಿದ್ದಾರೆ. ಅಧಿಕಾರಿಗಳು ಬಹಳ ಅನ್ಯಾಯ ಮಾಡುತ್ತಿದ್ದಾರೆ. ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತನ್ನಿ. ಒಮ್ಮೆ ತಾವು ಡಿಫೆಂಡ್ ಮಾಡಿಕೊಂಡಿದ್ದಿರಿ. ಇವತ್ತು ಜನತಾ ಮನೆಗಳನ್ನು ಲಾಕ್ ಮಾಡಿ, ಸಾಮಾನು ಸರಂಜಾಮುಗಳನ್ನು ತೆಗೆದುಕೊಂಡು ಬಂದಿದ್ದಾರೆ. ಬಡವರ ಮನೆಗಳ ಸಾಲವನ್ನು ಫೋರ್ಸ್‌ಫುಲ್ ಆಗಿ ರಿಕವರಿ ಮಾಡಿದರೆ ನಿಮಗೆ ಶಾಪವಾಗುತ್ತದೆ. ದೊಡ್ಡ ದೊಡ್ಡ ಜನರ ಮೇಲೆ ಕಾನೂನು ಕ್ರಮ ಬೇಕಾದರೆ ಜರುಗಿಸಿ, ಎಕ್ಸೈಜ್ ಕಂಟ್ರಾಕ್ಟ್‌ದಾರರು ಇದ್ದಾರೆ, ಅವರ ಮೇಲೆ ತೆಗೆದುಕೊಳ್ಳಿ, ನಾವೂ ಸಹ ನಿಮಗೆ ಸಪೋರ್ಟ್ ಮಾಡುತ್ತೇವೆ. ಆದರೆ ೫೦-೧೦೦-೨೦೦ ರೂಪಾಯಿ ಬಾಕಿ ಕೊಡುವವರ ಮೇಲೆ ಕ್ರಮ ತೆಗೆದುಕೊಳ್ಳಬೇಡಿ.

೩-೨೦ ಪಿ. ಎಂ.

ಮತ್ತೊಂದು ವಿಚಾರ ಅಂದರೆ, ಅರ್ಬನ್ ಏರಿಯಾಸ್‌ನಲ್ಲಿ ಸೈಟ್ ಡಿಸ್ಟ್ರಿಬ್ಯೂಷನ್ ಪ್ರೋಗ್ರಾಮ್ ಇದೆ. ಡಿಮ್ಯಾಂಡ್ ಇರುವುದು ೧ ಲಕ್ಷದ ೪೮ ಸಾವಿರ ಜನರಿಗೆ ಇವೊತ್ತು ಅರ್ಬನ್ ಏರಿಯಾಸ್‌ನಲ್ಲಿ ನಿವೇಶನ ಬೇಕಾಗಿದೆ. ಅದರಲ್ಲಿ ಇವೊತ್ತಿನವರೆಗೆ ೧೯೮೯-೯೦ರ ತನಕ ಕೊಟ್ಟಿದ್ದು ೫೬.೬೦೨. ಈ ವರ್ಷ ೧೯೮೯-೯೦ರ ಪ್ರೋಗಾಮ್ ೨,೫೦೦ ಸೈಟು ಕೊಡುವ ಪ್ರೋಗ್ರಾಮ್ ಇತ್ತು. ಆದರೆ, ೧೯೮೯-೯೦ರಲ್ಲಿ ಒಂದು ಸೈಟು ಸಹ ಕೊಟ್ಟಿಲ್ಲ. ಅರ್ಬನ್ ಏರಿಯಾಸ್‌ನಲ್ಲಿ ಒಂದು ಸೈಟು ಸಹ ಕೊಟ್ಟಿಲ್ಲ. ಆದರ ಸಲುವಾಗಿ ಸಮಸ್ಯೆಗಳು ಇರಬಹುದು. ನಿವೇಶನಕ್ಕೆ ಜಾಗ ಇಲ್ಲ ಎಂದು ನೀವು ಹೇಳಬಹುದು ಆದರೆ ನೀವು ಏನು ೧೯೮೯-೯೦ರಲ್ಲಿ ಏನು ಕಮಿಟ್‌ಮೆಂಟ್ ಮಾಡಿದ್ದೀರಿ ಅದನ್ನು ಈಡೇರಿಸಿದ್ದೀರಾ? ತಾವು ಅಧಿಕಾರಕ್ಕೆ ಬಂದು ಮೂರು ನಾಲ್ಕು ತಿಂಗಳು ಅಷ್ಟೇ ಆಗಿರುವುದು, ನಮಗೆ ಗೊತ್ತು, ಆದರೆ ರಾಷ್ಟ್ರಪತಿ ಆಡಳಿತದಲ್ಲಿ ಏನು ನಡೆದಿದೆ ಅದೂ ಸಹ ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿಯೂ ಸಹ ಇನ್‌ಕಮ್ ಲಿಮಿಟ್ ಇದೆ. ೨,೪೦೦ ರೂಪಾಯಿತನಕ ಒಂದು ಇನ್‌ಕಮ್ ಲಿಮಿಟ್ ಇದೆ, ಮತ್ತು ೪,೮೦೦ ರೂಪಾಯಿತನಕ ಒಂದು ಇನ್‌ಕಮ್ ಲಿಮಿಟ್ ಇದೆ. ಇದನ್ನು ಹೆಚ್ಚು ಮಾಡಿದರೆ ಮಾತ್ರ ತಾವು ಹೆಚ್ಚಿನ ಜನರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಾಗಬಹುದು. ಇನ್ನು ಮತ್ತೊಂದು ಮನೆ ಕಟ್ಟುವಂಥ ಕಾರ್ಯಕ್ರಮದ ಬಗ್ಗೆ ಹೇಳಿದ್ದೀರಿ, ಈ ಭಾಗ್ಯ ಮಂದಿರ ಸ್ಕೀಮಿನಲ್ಲಿ ಇವೊತ್ತು ನಾವು ಏನು ಮಾಡಿದ್ದೇವೆ ಯೂನಿಟ್ ಕಾಸ್ಟ್ ೮ ಸಾವಿರ ಮಾಡಿದ್ದೇವೆ. ೬ ಸಾವಿರ ಸಾಲ. ಒಂದು ಸಾವಿರ ಬೆನಿಫಿಷಿಯರೀಸ್ ಕಾಂಟ್ರಿಬ್ಯೂಷನ್ ಮತ್ತು ಒಂದು ಸಾವಿರ ರೂಪಾಯಿ ಸಬ್ಸಿಡಿ ಆದರೆ ಈ ವರ್ಷದ ನಿಮ್ಮ ಟಾರ್‌ಗೆಟ್ ಪ್ರಕಾರ ಬಜೆಟ್ ಸ್ಪೀಚ್‌ನಲ್ಲಿ ೬ ಸಾವಿರ ಮನೆಗಳನ್ನು ನಾವು ಹಂಚುತ್ತೇವೆಂದು ಹೇಳಿದ್ದೀರಿ. ನನ್ನ ದೃಷ್ಟಿಯಲ್ಲಿ ಇದು ಸಾಧ್ಯವಾಗುವುದಿಲ್ಲ. ಇದಕ್ಕೆ ಲೋನ್ ಕಾಂಪೋನೆಂಟ್ ಹೆಚ್ಚಾಗಿ ಎಷ್ಟು ಬೆನಿಫಿಷಿಯರೀಸ್‌ಗೆ ಸಿಕ್ಕಬೇಕು ಅಷ್ಟು ಸಿಕ್ಕಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ. ಇವರ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕು. ಇನ್ನು ಜನತಾ ಮನೆಗಳಿಗೆ ಎರಡೂವರೆ ಸಾವಿರ ರೂಪಾಯಿವರೆಗೆ ಏನು ಸಬ್ಸಿಡಿ ಇದೆ. ಆ ಲೆವೆಲ್‌ವರೆಗಾದರೂ ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಈ ನಿವೇಶನ ಹಂಚಿಕೆಗಳ ಬಗ್ಗೆಯಾಗಲಿ, ಮನೆ ಹಂಚಿಕೆಗಳ ಬಗ್ಗೆಯಾಗಲಿ, ಕೇವಲ ಅಧಿಕಾರಿಗಳು ಕೊಟ್ಟ ಫಿಗರ್ಸ್ ಮೇಲೆ ಹೋಗಬೇಡಿ ಏಕೆಂದರೆ ನನಗೆ ಇದರ ಅನುಭವ ಬಹಳ ಇದೆ. ಇದರ ಬಗ್ಗೆ ವೆರಿಫಿಕೇಷನ್ ಆಗಬೇಕಾಗುತ್ತದೆ. ೫ ಸಾವಿರ ಮನೆ ಕೊಟ್ಟಿದ್ದೇವೆ ಎಂದು ನೀವು ಇಲ್ಲಿ ಹೇಳುತ್ತೀರಿ, ಆದರೆ ಅಲ್ಲಿ ಎರಡೂವರೆ ಸಾವಿರ ಮನೆಗಳನ್ನು ಕೊಟ್ಟಿರುವುದಿಲ್ಲ. ಆದ್ದರಿಂದ, ಫಿಸಿಕಲ್ ವೆರಿಫಿಕೇಷನ್ ಆಗಬೇಕು. ಆಗ ನಾವು ಬಡವರಿಗೆ ಹೆಚ್ಚಿನ ಕೆಲಸ ಮಾಡಿದ್ದೇವೆ ಎಂದು ನಿಮಗೂ ಸಮಾಧಾನ ಆಗುತ್ತದೆ. ಇದನ್ನು ಮಾಡಿದರೆ ಅಧಿಕಾರಿಗಳಲ್ಲಿ ಸಹ ಒಂದು ರೀತಿಯ ಭಯ ಇರುತ್ತದೆ. ಆದ್ದರಿಂದ ಇದರ ಬಗ್ಗೆ ಸಚಿವರು ವೆರಿಫೈ ಮಾಡಬೇಕು. ಇಲ್ಲದೇ ಹೋದರೆ ನೀವು ಒಂದೂವರೆ ಲಕ್ಷ ಜನರಿಗೆ ಕೊಟ್ಟಿದ್ದೇವೆಂದು ಹೇಳುತ್ತಿರುತ್ತೀರಿ, ನಾವು ಅಷ್ಟು ಜನರಿಗೆ ಕೊಟ್ಟಿಲ್ಲ ಎಂದು ಹೇಳುತ್ತಿರುತ್ತೇವೆ, ಇದರ ಮೇಲೆ ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನಿಮ್ಮ ರಿಪೋರ್ಟ್ ಪ್ರಕಾರ ೨ ಲಕ್ಷದ ೯೮ ಸಾವಿರ ಬಡ ಜನರಿಗೆ ನಿವೇಷನ ಹಂಚಬೇಕಾಗಿದೆ. ಈ ಒಂದು ಟಾರ್‌ಗೆಟ್ ತಾವು ಅಚೀವ್ ಮಾಡಬೇಕಾದರೆ ೧೦-೧೨ ವರ್ಷದಲ್ಲಿ ಮಾಡಲಿಕ್ಕೆ ಆಗುವುದಿಲ್ಲ, ಪ್ರಿಯಾರಿಟಿ ಮೇಲೆ ಬರುವ ಎರಡು ಮೂರು ವರ್ಷಗಳಲ್ಲಿ ಮುಗಿಸಬೇಕಾಗುತ್ತದೆ. ಅದರ ಸಲುವಾಗಿ ಒಂದು ಆದ್ಯತೆ ಮೇಲೆ ಕಾರ್ಯಕ್ರಮ ಹಾಕಿಕೊಳ್ಳ ಬೇಕಾಗುತ್ತದೆ. ಇನ್ನು ನಗರಸಭೆ ಮತ್ತು ಪುರಸಭೆ ವಿಚಾರದಲ್ಲಿ ನಾನು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಇವೊತ್ತು ಮುನಿಸಿಪಾಲಿಟಿಗಳಿಗೆ ಮೈನ್ಸ್ ಸೋರ್ಸ್ ಆಫ್ ಇನಕಮ್ ಅಂದರೆ ಪ್ರಾಪರ್ಟಿ ಟ್ಯಾಕ್ಸ್. ಇದನ್ನು ಬಿಟ್ಟರೆ, For all other things they are depending upon the Government. ವೆಹಿಕಲ್ಸ್ ಟ್ಯಾಕ್ಸ್ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಆಕ್ಟ್ರಾಯಿ ಕಾಂಪನ್‌ಸೇಷನ್ ಸರಿಯಾದ ಸಮಯದಲ್ಲಿ ರಿಲೀಸ್ ಆದರೆ ಅಲ್ಲಿ ಕೆಲಸ, ಇಲ್ಲದೇ ಹೋದರೆ ಸಂಬಳ ಕೊಡಲಿಕ್ಕೆ ಸಹ ಹಣ ಇರುವುದಿಲ್ಲ. ನಮ್ಮ ಸರ್ಕಾರ ಇದ್ದಾಗ ಡೆವಲಪ್‌ಮೆಂಟ್ ಗ್ರಾಂಟ್ಸ್ ಆಗಲಿ. ವೆಹಿಕಲ್ಸ್ ಟ್ಯಾಕ್ಸ್ ಆಗಲಿ, ಎಂಟರ್ ಟೈನ್‌ಮೆಂಟ್ ಟ್ಯಾಕ್ಸ್ ಆಗಲಿ. ನಾವು ಬಹಳ ದೊಡ್ಡ ಪ್ರಮಾಣದಲ್ಲಿ ನಗರ ಸಭೆಗಳಿಗೆ ಇದರಿಂದ ಹೆಚ್ಚಿನ ಲಾಭವಾಗಬೇಕು, ಹೆಚ್ಚಿನ ಫಂಡ್ಸ್ ಫ್ಲೋ ಆಗಬೇಕು ಮತ್ತು ನಗರದಲ್ಲಿ ಅಭಿವೃದ್ಧಿ ಕೆಲಸ ಆಗಬೇಕೆಂದು ಹಣ ಬಿಡುಗಡೆ ಮಾಡಿದ್ದೇವೆ, ಆದ್ದರಿಂದ ತಾವು ಇದನ್ನು ವಿಚಾರ ಮಾಡಬೇಕಾಗುತ್ತದೆ. ಪ್ರಾಪರ್ಟಿ ಟ್ಯಾಕ್ಸ್ ಕಳೆದ ವರ್ಷ ೨೫ ಕೋಟಿ ರೂಪಾಯಿ ಡಿಮ್ಯಾಂಡ್ಸ್ ಇದ್ದರೆ ೧೯ ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ, ಅಂದರೆ ೯ ಕೋಟಿ ರೂಪಾಯಿ ಲಾಸ್ಟ್ ಇಯರ್ ಅರಿಯರ್ಸ್ ಈ ಪ್ರಕಾರ ಆದರೆ ನಗರಸಭೆ ನಡೆಸುವುದು ಬಹಳ

ಕಠಿಣ ಆಗಬಹುದು. ಆದ್ದರಿಂದ ನಗರಸಭೆಗಳು ಹೆಚ್ಚಿನ ಗಮನವನ್ನು ಇದರ ಕಡೆಗೆ ಕೊಡಬೇಕಾಗುತ್ತದೆ. ನಗರಸಭೆಗಳಿಗೆ ಹಣ ಬರುವುದು ಈ ಒಂದು ಸೋರ್ಸ್‌ನಿಂದ ಮಾತ್ರ. ಬೇರೆ ಸೋರ್ಸ್ ಅದಕ್ಕೆ ಇಲ್ಲ. ಮುನಿಸಿಪಾಲಿಟಿಗಳ ಇನ್‌ಕಂ ಅನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವೇ, ಹೇಗೆ ಮಾಡಬೇಕು ಎಂಬುದರ ಬಗ್ಗೆ ಪರಿಶೀಲನೆ ಮಾಡಬೇಕು. ಕೆಲವು ಮುನಿಸಿಪಾಲಿಟಿಗಳು ನಾವು ಷಾಪಿಂಗ್ ಕಾಂಪ್ಲೆಕ್ಸ್ ಕಟ್ಟಲು ಅವಕಾಶ ಮಾಡಿಕೊಡಿ ಎಂದು ಕೇಳಿದರೆ, ಅದಕ್ಕೆ ಸರಕಾರದಿಂದ ಪ್ರೋತ್ಸಾಹ ಸಿಗುವುದಿಲ್ಲ, ಅವರು ಹೇಳುತ್ತಾರೆ ಸರ್ಕಾರ ಗ್ಯಾರಂಟಿ ಇರುವುದಿಲ್ಲ ಎಂದು, ಹಿಂದೆ ನಮ್ಮ ಸರಕಾರವಿದ್ದಾಗ ಕಾರವಾರದಲ್ಲಿ ಷಾಪಿಂಗ್ ಕಾಂಪ್ಲೆಕ್ಸ್ ಕಟ್ಟಲು ನಮಗೆ ಅವಕಾಶ ಕೊಡಿ ಎಂದು ಅಲ್ಲಿನ ನಗರಸಭೆಯವರು ಕೇಳಿದಾಗ, ಅದಕ್ಕೆ ಅವಕಾಶ ಕೊಡಲು ಸುಮಾರು ಮೂರು ವರ್ಷವಾಯಿತು. ಅಫಿಷಿಯಲ್ ಲೆವೆಲ್‌ನಲ್ಲಿ ತಡವಾಯಿತು. ಸರಕಾರ ನಾವು ಏಕೆ ಇವರಿಗೆ ಗ್ಯಾರಂಟಿ ಕೊಡಬೇಕು ಎಂದು ಹೇಳುವುದಾದರೆ, ನಗರಸಭೆ, ಪುರಸಭೆಗಳ ಇನ್‌ಕಂ ಹೇಗೆ ಹೆಚ್ಚಾಗುತ್ತದೆ. ಸರಕಾರ ಕೂಡ ಇದಕ್ಕೆ ಸಂಪೂರ್ಣವಾದಂತಹ ಸಹಕಾರವನ್ನು ಕೊಡಬೇಕಾಗುತ್ತದೆ. ಹುಡ್ಕೋ ಎಲ್ ಐಸಿ, ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದರೆ ಸರಕಾರ ಅದಕ್ಕೆ ಗ್ಯಾರಂಟಿ ನೀಡುವುದಕ್ಕೆ ಸಿದ್ಧವಾಗಬೇಕು. ಹೀಗಾದರೆ ಅವರ ಆದಾಯ ಹೆಚ್ಚಾಗುವುದಕ್ಕೆ ಅವಕಾಶವಾಗಬಹುದು. ಟೌನ್ ಮುನಿಸಿಪಲ್ ಕೌನ್ಸಿಲ್. ಮತ್ತು ನಗರಸಭೆ ಕಾನೂನಿಗೆ ತಿದ್ದುಪಡಿಯಾಗಬೇಕಾದುದು ಅವಶ್ಯ ಇದೆ. ೫೦೦ ರೂಪಾಯಿ ಮಂಜೂರು ಮಾಡಬೇಕಾದರೆ ಪುರಸಭೆ ಅಧ್ಯಕ್ಷರಿಗೆ ಅಧಿಕಾರ ಇಲ್ಲ. ಮೇಯರಿಗೆ ಅಧಿಕಾರ ಇಲ್ಲ, ಎಲ್ಲ ಅಧಿಕಾರವನ್ನೂ ಕೂಡ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಬಾಂಬೆ ಮುನಿಸಿಪಲ್ ಆ್ಯಕ್ಟ್‌ನಲ್ಲಿ ಅಧ್ಯಕ್ಷರಿಗೆ ಹಾಗೂ ಜನರ ಪ್ರತಿನಿಧಿಗಳಿಗೆ ಸಾಕಷ್ಟು ಅಧಿಕಾರ ಇದೆ. ನಮ್ಮಲ್ಲೂ ಇದೇ ರೀತಿ ಅವಕಾಶ ಮಾಡಬೇಕೆಂದು ನಾನು ಮಂತ್ರಿಯಾಗಿದ್ದಾಗ ವಿಚಾರ ಮಾಡಿದ್ದೆ. ಇದರ ಬಗ್ಗೆ ೨-೩ ಸಲ ಮೀಟಿಂಗ್ ಮಾಡಿ ಕಾನೂನು ಇಲಾಖೆಗೆ ಕಡತವನ್ನು ಕಳಿಸಿದ್ದೇವೆ. ಇದರ ಬಗ್ಗೆ ತಾವು ಅಮೇಂಡ್‌ಮೆಂಟ್ ಅನ್ನು ತರಬೇಕು ಎಂದು ಯಾರು ಚುನಾಯಿತರಾಗಿ ಬಂದಿದ್ದಾರೆ ಅವರಿಗೆ ಅಧಿಕಾರ ಇರಬೇಕೆಂದು ನಾನು ಆಶಿಸುತ್ತೇನೆ. ಆ ಪುರಸಭೆಯ, ನಗರಸಭೆಯ ಸದಸ್ಯರಾಗಿ ಜನರಿಂದ ಆರಿಸಿ ಬಂದಿರತಕ್ಕಂತಹವರಿಗೆ. ಜನರ ಕಷ್ಟ ಚೆನ್ನಾಗಿ ಗೊತ್ತಿರುತ್ತದೆ. ಬರೀ ಎರಡು ಸಭೆಗಳಿಗೆ ಹಾಜರಾಗಿ ಬಂದರೆ ಏನೂ ಉಪಯೋಗವಿಲ್ಲ. ಅವರಿಗೆ ಅಧಿಕಾರವನ್ನು ಕೊಡಬೇಕಾಗುತ್ತದೆ. ೪ ವರ್ಷ ಇದ್ದದ್ದನ್ನು ೫ ವರ್ಷ ಎಂದು ಮಾಡಿದ್ದಕ್ಕೆ ಸಂತೋಷ ಅದನ್ನು ನಾವು ಸ್ವಾಗತ ಮಾಡಿದೆವು. ನಗರಸಭೆ ಅಧ್ಯಕ್ಷರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಆದಷ್ಟು ಬೇಗ ಅಮೇಂಡ್‌ಮೆಂಟ್ ಅನ್ನು ತರುವುದಕ್ಕೆ ಪ್ರಯತ್ನ ಮಾಡಬೇಕು. ಜನರಿಂದ ಆರಿಸಿ ಬಂದಂತಹ ಪ್ರತಿನಿಧಿಗೆ ಸೂಕ್ತವಾದಂತಹ ಅಧಿಕಾರವನ್ನು ಕೊಟ್ಟು ಅವರು ಜನರ ಸೇವೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಗರ ಸಭೆಗಳಲ್ಲಿ ಬರ್ತ್ ಸರ್ಟಿಫಿಕೇಟ್, ಡೆತ್ ಸರ್ಟಿಫಿಕೇಟ್ ಪ್ರಾಪರ್ಟಿ ಎಕ್ಸ್‌ಟ್ರಾಕ್ಟ್, ಪ್ಲಾನ್ ಅಪ್ರೂವಲ್ ಮಾಡುವಂತಹ ಒಂದು ಅವಕಾಶ ಇದೆ. ಯಾವ ಎಕ್ಸ್‌ಟ್ರಾಕ್ಟ್‌ಗೇ ಆಗಲಿ ಅಂದರೆ ಬರ್ತ್ ಸರ್ಟಿಫಿಕೇಟ್‌ಗೆ, ಡೆತ್ ಸರ್ಟಿಫಿಕೇಟ್‌ಗೇ ಆಗಲೀ ಇಂತಿಷ್ಟು ದಿವಸದಲ್ಲಿ ಕೊಡುವಂತಹ ವ್ಯವಸ್ಥೆಯನ್ನು ನಮ್ಮ ಸರಕಾರವಿದ್ದಾಗ ಮಾಡಿದ್ದೆವು, ಇದಕ್ಕೊಂದು ರಿಜಿಸ್ಟರ್ ಮೈನ್‌ಟೇನ್ ಮಾಡಬೇಕು ಎಂದು ಹೇಳಿ ಅವರಿಗೆ ಸರ್ಟಿಫಿಕೇಟ್ ಕೊಡಲಿಕ್ಕೆ ಬರದಿದ್ದರೆ ಅದನ್ನು ಏಕೆ ಕೊಟ್ಟಿಲ್ಲ ಎಂಬುದನ್ನು ಕೂಡ ಆ ಅಧಿಕಾರಿ ಅಲ್ಲಿಯೇ ಬರೆಯಬೇಕು, ಅಂದರೆ ಜನರಿಗೆ ಇದರಿಂದ ಅನುಕೂಲವಾಗುವುದು. ಇದನ್ನು ಬಹಳಷ್ಟು ಮುನಿಸಿಪಾಲಿಟಿಯವರು ಇಂಪ್ಲಿಮೆಂಟ್ ಮಾಡಿದ್ದಾರೆ. ನಾನು ನೋಡಿದ್ದೇನೆ. ಮುನಿಸಿಪಾಲಿಟಿ ಹೊರಗೆ ಬೋರ್ಡ್ ಹಾಕಿ ಅದರಲ್ಲಿ ಬರ್ತ್ ಸರ್ಟಿಫಿಕೇಟ್‌ಗೆ ಡೆತ್ ಸರ್ಟಿಫಿಕೇಟ್‌ಗೆ, ಪ್ಲಾನ್ ಸ್ಯಾಂಕ್ಷನ್‌ಗೆ ಇಷ್ಟು ದಿವಸದಲ್ಲಿ ಕೊಡುತ್ತೇವೆ. ಅರ್ಜಿಯನ್ನು ಕೊಟ್ಟ ಇಂತಿಷ್ಟು ದಿವಸದಲ್ಲಿ ನೀಡುತ್ತೇವೆಂದು ಬರೆದಿದ್ದಾರೆ. ಇದರಿಂದಾಗಿ ಎಷ್ಟೋ ಜನರಿಗೆ ಅನುಕೂಲವಾಗುತ್ತಿತ್ತು. ತಾವು ಎಲ್ಲೆಲ್ಲಿ ಹೋಗುತ್ತೀರಿ ಅಲ್ಲೆಲ್ಲಾ ಇದನ್ನು ರೆವ್ಯೂ ಮಾಡಿ ಜನರಿಗೆ ಸರಿಯಾದ ಸಮಯದಲ್ಲಿ ಇವುಗಳು ದೊರಕುತ್ತಿವೆಯೋ ಇಲ್ಲವೇ ಎಂಬುದನ್ನು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಇದಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ನೀವು ಕೊಡಬೇಕಾಗುತ್ತದೆ. ಮಾನ್ಯ ನರಸಿಂಹಮೂರ್ತಿಯವರೆ, ಮುನಿಸಿಪಾಲಿಟಿಗಳಲ್ಲಿ, ಕಾರ್ಪೊರೇಷನ್‌ನಲ್ಲಿ ಬರತಕ್ಕ ವರಮಾನದಲ್ಲಿ ಎಸ್. ಸಿ, ಎಸ್. ಟಿ. ಯವರಿಗೋಸ್ಕರ ೧೮ ಪರ್ಸೆಂಟ್ ಹಣವನ್ನು ಏನು ಖರ್ಚು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ. ಅವರು ಮಾಡಿರತಕ್ಕ ಖರ್ಚನ್ನು ನೋಡಿದರೆ ನಿಮಗೆ ಕಣ್ಣೀರು ಬರಬೇಕು. ೪ ಡಿವಿಜನ್‌ನಲ್ಲಿ ಒಟ್ಟು ೪೫೧ ಲಕ್ಷ ರೂಪಾಯಿಗಳನ್ನು ಎಸ್. ಸಿ, ಎಸ್. ಟಿ. ಯವರಿಗೋಸ್ಕರ ಖರ್ಚು ಮಾಡಬೇಕಾಗಿತ್ತು. ಇಷ್ಟು ಹಣವನ್ನು ರಿಸರ್ವ್ ಮಾಡಿದ್ದರು. ಆದರೆ ಇದರ ಪೈಕಿ ಖರ್ಚು ಮಾಡಿರತಕ್ಕದ್ದು ಕೇವಲ ೧೦೦ ಲಕ್ಷ ರೂಪಾಯಿಗಳನ್ನು ಮಾತ್ರ. ಇನ್ನು ೩೫೧ ಲಕ್ಷ ರೂಪಾಯಿ ಹಾಗೆಯೇ ಉಳಿಸಿದ್ದಾರೆ. ಖರ್ಚನ್ನೇ ಮಾಡಿಲ್ಲ. ಈ

ಹಣವನ್ನು ಮುಂದಿನ ಸಾರಿಗಾದರೂ ಖರ್ಚು ಮಾಡಲು ಕ್ಯಾರಿ ಓವರ್ ಮಾಡಿಸಿ. ೨೫೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡದೆ ಹಾಗೆಯೇ ಉಳಿಸುವುದಕ್ಕೆ ಕಾರಣರಾದಂಥ ಅಧಿಕಾರಿಗಳ ಮೇಲೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ೪ ಡಿವಿಜನ್‌ನಿಂದ ೪೫೧ ಲಕ್ಷ ರೂ. ಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೋಸ್ಕರ ಖರ್ಚು ಮಾಡಬೇಕಾದ್ದರಲ್ಲಿ ಕೇವಲ ೨೦೦ ಲಕ್ಷ ರೂ. ಗಳನ್ನು ಮಾತ್ರ ಖರ್ಚು ಮಾಡಿರುವುದು ಸರಿಯಲ್ಲ. ಈ ಬಗ್ಗೆ ತಾವು ಸಂಬಂಧಪಟ್ಟವರಿಗೆ ಕಟ್ಟುನಿಟ್ಟಾದ ಆದೇಶವನ್ನು ಕೊಡಬೇಕು. ನಿಮ್ಮ ಆದೇಶದ ಪ್ರಕಾರ ಯಾರು ಈ ಹಣವನ್ನು ಖರ್ಚು ಮಾಡುವುದಿಲ್ಲ ಅವರ ವಿರುದ್ಧ ತಾವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಇನ್ನು ೫-೬ ತಿಂಗಳಲ್ಲಿ ಈ ಉಳಿಕೆ ಹಣವನ್ನು ಖರ್ಚು ಮಾಡಿಸುತ್ತೀರೆಂದು ನಾನು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ಬೆಂಗಳೂರು ನಗರ ಕಾರ್ಪೊರೇಷನ್‌ನವರು ಕಳೆದ ವರ್ಷ ಏನೇನು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಅಥವಾ, ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆಂಬುದಕ್ಕೆ ಇಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಅಂಬೇಡ್ಕರ್ ದಿನಾಚರಣೆಗೋಸ್ಕರ ೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ನಿಜಕ್ಕೂ ನಾಚಿಕೇಗೇಡು. ಬೆಂಗಳೂರು ನಗರ ಸಭೆಯವರಿಗೆ ನಾಚಿಕೆಯಾಗಬೇಕು.

ಮಾನ್ಯ ಅಧ್ಯಕ್ಷರೆ. ಅಂಬೇಡ್ಕರ್ ದಿನಾಚರಣೆಗೋಸ್ಕರ ಹಣವನ್ನು ಅವರು ಖರ್ಚು ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಹಣವನ್ನು ಖರ್ಚು ಮಾಡುವಾಗ ಕನ್‌ಸ್ಟ್ರಕ್ಟೀವ್ ಕೆಲಸಗಳನ್ನು ಮಾಡಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಉಪಯೋಗಕರವಾದ ಕೆಲಸಗಳನ್ನು ಮಾಡಬೇಕು. ಅಂಬೇಡ್ಕರ್ ಹೆಸರಿನಲ್ಲಿ ಎಸ್. ಸಿ, ಎಸ್. ಟಿ. ಯವರಿಗೆ ಅನುಕೂಲವಾದ ಕೆಲಸಗಳನ್ನು ಮಾಡಿದರೆ ನಾವು ಯಾರೂ ಕೂಡ ಬೇಡ ಎಂದು ಹೇಳುವುದಿಲ್ಲ. ಬೆಂಗಳೂರು ನಗರಸಭೆಯವರು ತಮ್ಮ ೧೯೮೯-೯೦ರ ವಾರ್ಷಿಕ ವರದಿಯಲ್ಲಿ ತಾವು ಯಾವ ಯಾವ ಕೆಲಸಕ್ಕೋಸ್ಕರ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ವಿವರಗಳನ್ನು ಕೊಟ್ಟಿದ್ದಾರೆ. ಅದರಲ್ಲಿ......

ಶ್ರೀ ಎಂ ಬ್ಲೇಸಿಯಸ್ ಡಿಸೋಜ.— ಆಗ ಎಲೆಕ್ಟೆಡ್‌ಬಾಡಿ ಇರಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.— ಎಲೆಕ್ಟೆಡ್ ರೆಪ್ರೆಸೆಂಟಿಟಿವ್ಸ್ ಯಾರೂ ಇಲ್ಲದಿರಬಹುದು. ಆಗ ಅಡ್ಮಿನಿಸ್ಟ್ರೇಟರ್ ಇದ್ದಿರಬಹುದು. ನಾನು ವೈಯುಕ್ತಿಕವಾಗಿ ಯಾರನ್ನೂ ಕುರಿತು ಹೇಳುತ್ತಿಲ್ಲ. ಅವರ ವಾರ್ಷಿಕ ವರದಿಯಲ್ಲಿ (೧೯೮೯—೯೦) ೧೭ ನೇ ಪುಟದಲ್ಲಿ ೧೨ ಕೆಲಸಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಒಂದಾದರು ಕನ್‌ಸ್ಟ್ರಕ್ಟೀವ್ ಕೆಲಸ ಇದೆಯೆ ಎಂಬುದನ್ನು ನೀವೇ ನೋಡಿ ಹೇಳಿ. ೫ ಲಕ್ಷ ರೂಪಾಯಿಗಳನ್ನು ಕೇವಲ ಅಂಬೇಡ್ಕರ್ ದಿನಾಚರಣೆಗೋಸ್ಕರವಾಗಿಯೇ ಖರ್ಚುಮಾಡಿದ್ದಾರೆ. ಈರೀತಿ ಬೇಜವಾಬ್ದಾರಿಯಿಂದ ಅಲ್ಲಿಯ ಅಧಿಕಾರಿಗಳು ಕೆಲಸ ಮಾಡುತ್ತಾ ಹೋದರೆ ನೀವು ಯಾವ ಮಟ್ಟಕ್ಕೆ ಹೋಗಿ ತಲುಪಬಹುದೆಂಬುದನ್ನು ನೀವೇ ಯೋಚನೆ ಮಾಡಿ ನೋಡಿ ಇನ್ನೊಂದು ವಿಚಾರ ಎಂದರೆ. ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಸ್ಮಾಲ್ ಅಂಡ್ ಮೀಡಿಯಂ ಟೌನ್ ಸ್ಕೀಮ್‌ನಲ್ಲಿ ೨೩ ಟೌನ್‌ಗಳು ಸೇರಿವೆ ಇದು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂ. ಬೇರೆ ಬೇರೆ ಪಟ್ಟಣಗಳಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ ಆದರೆ ಈ ೨೩ ಟೌನ್‌ಗಳನ್ನೊಳಗೊಂಡಿರತಕ್ಕ ಸ್ಕೀಂಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಏನು ಹಣ ಬಿಡುಗಡೆಯಾಗಿದೆ ಆ ಹಣದಲ್ಲಿ ೫೦ ಪರ್ಸೆಂಟ್ ಕೂಡ ಖರ್ಚಾಗಿಲ್ಲ ಪ್ರಗತಿಯಂತೂ ಏನೇನೂ ಆಗಿಲ್ಲ. ಆದ್ದರಿಂದ ಅಲ್ಲಿ ಏನೇನು ಕೆಲಸಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಆದಷ್ಟು ಬೇಗ ತಾವು ಒಂದು ರಿವ್ಯೂ ನಡೆಸಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಏನು ಹಣ ಬಿಡುಗಡೆಯಾಗಿದೆ, ಆ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುವಂತೆ ಮಾಡಬೇಕು. ೭ ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಏನು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಅದನ್ನು ಅವರು ಖರ್ಚು ಮಾಡಿಲ್ಲ. ಹೋಗಲಿ ೮ನೇ ಯೋಜನೆಯಲ್ಲಿ ಆದರೂ ಇನ್ನಷ್ಟು ಪಟ್ಟಣಗಳನ್ನು ಈ ಯೋಜನೆಯಲ್ಲಿ ಸೇರಿಸಿಕೊಂಡು ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಇದಕ್ಕಾಗಿ ಬರತಕ್ಕ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಕಾಗೋಡು ತಿಮ್ಮಪ್ಪ.—ಆದರೆ ಯಾವ ಯಾವ ಉದ್ದೇಶಕ್ಕೋಸ್ಕರ ಈ ಹಣವನ್ನು ಖರ್ಚು ಮಾಡಬೇಕೆಂದು ತಮ್ಮ ಹಿಂದಿನ ಸರ್ಕಾರವೇ ಗೈಡ್ ಲೈನ್ಸ್‌ನ್ನು ಕೊಟ್ಟಿದೆ, ಅದರ ವ್ಯಾಪ್ತಿಯಲ್ಲೇ ಈ ಹಣವನ್ನು ಖರ್ಚು ಮಾಡಲಾಗಿದೆ. ಅದರ ಹೊರತಾಗಿ ಏನೂ ಹಣವನ್ನು ಖರ್ಚು ಮಾಡಿಲ್ಲ,

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಬಿ.ಜೆ.ಪಿ. ಸದಸ್ಯರು ಕಳೆದ ಮೂರು ದಿವಸಗಳಿಂದ ಮಾಡುತ್ತಿರತಕ್ಕಂಥ ಧರಣಿಯ ಬಗ್ಗೆ ವಿವಿಧ ಪಕ್ಷಗಳ ನಾಯಕರುಗಳನ್ನು ಕರೆಸಿ ತಮ್ಮ ಕೊಠಡಿಯಲ್ಲಿ ಈ ಸದನ ಸರಿಯಾಗಿ ನಡೆಯಲಿಕ್ಕೆ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿದ್ದೀರಿ. ಆದ್ದರಿಂದ ಈ ಬಗ್ಗೆ ಸರ್ಕಾರದ ಕಡೆಯಿಂದ ಒಂದು ಹೇಳಿಕೆ ಬಂದರೆ ನಮ್ಮ ಮಾನ್ಯ ಸಹೋದ್ಯೋಗಿ ಸದಸ್ಯರುಗಳು ಬಂದು ಈ ಸದನದ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅನುಕೂಲ ಆಗುತ್ತದೆ. ಈ ಬಗ್ಗೆ ತಾವು ಒಳ್ಳೆಯ ಕೆಲಸ ಮಾಡಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದಿಸುತ್ತೇನೆ. ಸರ್ಕಾರದ ಪರವಾಗಿ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಡಬೇಕೆಂದು ಈಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

(ಈ ನಿಟ್ಟಿನಲ್ಲಿ ಮಾನ್ಯ ಯಡಿಯೂರಪ್ಪನವರು ತಮ್ಮ ಸ್ಥಾನದಲ್ಲಿ ಬಂದು ನಿಂತು ಮಾತನಾಡಲು ಆರಂಭಿಸುವರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಕಳುಹಿಸಿರುವ ಒಂದು ಹೊಸ ಯೋಜನೆಯ ಪ್ರಕಾರ ಈ ರಾಜ್ಯದ ಈ ದೇಶದ, ರೈತರು ಬ್ಯಾಂಕಿನಿಂದ ಮತ್ತು ಸಹಕಾರಿ ಸಂಘಗಳಿಂದ ಪಡೆದಿರುವಂಥ ಸಾಲದ ಮನ್ನಾ ಬಗ್ಗೆ ಏನು ಒಂದು ಯೋಜನೆ ನಮ್ಮ ಕೈಸೇರಿದೆ, ಇದರಿಂದ ರಾಜ್ಯದ ರೈತರಿಗೆ ಯಾವ ಅನುಕೂಲವಾಗುವುದಿಲ್ಲವೆನ್ನುವ ದೃಷ್ಟಿಯಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟ ದಿವಸದಿಂದ ಅಂದರೆ ೭ನೇ ತಾರೀಖಿನಿಂದ ನಾವು ಈ ಸದನದಲ್ಲಿ ಧರಣಿ ನಡೆಸುತ್ತಿದ್ದೇವೆ. ಈ ರಾಜ್ಯದ ರೈತರಿಗೆ ನ್ಯಾಯ ದೊರಕಿಸಿಕೊಡಬೇಕೆನ್ನುವ ಒಂದೇ ಒಂದು ದೃಷ್ಟಿಯಿಂದ. ತಾವು ತಮ್ಮ ಕೊಠಡಿಗೆ ನಮ್ಮನ್ನು ಕರೆಸಿ ಈ ಧರಣಿಯನ್ನು ನಿಲ್ಲಿಸಬೇಕು, ಮತ್ತು ರಾಜ್ಯದ ರೈತರಿಗೆ ಅವರ ಹಿತದೃಷ್ಟಿಯಿಂದ ನಾವೆಲ್ಲರೂ ಹೊಸದಾಗಿ ಯೋಜನೆಯನ್ನು ಮಾಡಬೇಕೆಂದು ಸಲಹೆಯನ್ನು ಕೊಟ್ಟಿದ್ದೀರಿ. ಮತ್ತೆ ರೈತನ ಮಗನಾಗಿ ತಾವು ಒಂದು ಪವಿತ್ರವಾದ ಸ್ಥಾನದಲ್ಲಿ ಕುಳಿತುಕೊಂಡು ಕೊಟ್ಟಂಥ ಅಪ್ಪಣೆಯನ್ನು ಮೀರುವುದಕ್ಕೆ ಸಾಧ್ಯವಿಲ್ಲ. ಮತ್ತು ಈ ರಾಜ್ಯದ ರೈತನ ದೃಷ್ಟಿಯಿಂದ ತಾವು ಕೊಟ್ಟ ಸಲಹೆಯನ್ನು ಸ್ವಾಗತಿಸಿ ನಾನು ತಮ್ಮ ಮೂಲಕ ಒಂದು ಮಾತನ್ನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೇಂದ್ರ ಸರ್ಕಾರ ಏನು ಒಂದು ಯೋಜನೆಯನ್ನು ತಯಾರು ಮಾಡಿ ಇಡೀ ದೇಶಕ್ಕೆ ಅಂದರೆ ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಿಕೊಟ್ಟಿದೆ, ಇದರಿಂದ ಕಳೆದ ೪-೫ ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾಗಿರುವ ನಮ್ಮ ರಾಜ್ಯದ ರೈತರಿಗೆ ಯಾವುದೇ ರೀತಿಯ ಅನುಕೂಲ ಆಗುವುದಿಲ್ಲವೆನ್ನುವ ಅಭಿಪ್ರಾಯ ಎಲ್ಲಾ ಸದಸ್ಯರಿಗೂ ಇದೆ ಎಂದು ನಾನು ಭಾವಿಸುತ್ತೇನೆ. ಅಲ್ಲಿ ಒಂದು ಮಾತನ್ನು ಹೇಳಿದ್ದಾರೆ ೨-೧೦-೮೯ರಂದು ಸುಸ್ತಿಯಾದ ಸಾಲ ಮತ್ತು ೧-೪-೧೯೮೦ರ ಪಡೆದ ಸಾಲದ ವಿಮೋಚನೆಯ ಸೌಲಭ್ಯವನ್ನು ಪಡೆಯಬೇಕಾದಲ್ಲಿ ಆ ಪ್ರದೇಶದಲ್ಲಿ ಶೇಕಡಾ ೫೦ಕ್ಕಿಂತಲೂ ಕಡಿಮೆ ಆಣೆವಾರು ಎಂದು ಘೋಷಿಸಿರಬೇಕು. ತಮಗೆ ಗೊತ್ತಿರುವಂತೆ ಆಣೆವಾರಿ ಪದ್ಧತಿಯನ್ನು ನಾವೇನಾದರೂ ಅನುಸರಿಸಿದರೆ ರಾಜ್ಯದ ಯಾವುದೇ ಭಾಗದಲ್ಲಿ ಈ ದಾಖಲೆಗಳು ಇಲ್ಲ; ಜೊತೆಗೆ ಮುಂದೆ ಬರುವ ದಿವಸಗಳಲ್ಲಿ ಈ ಕಾರಣಕ್ಕೋಸ್ಕರ ಅನೇಕ ಭ್ರಷ್ಟಾಚಾರಗಳು ನಡೆಯುವಂಥ ಸಂದರ್ಭಗಳು ಇವೆ. ಮತ್ತೆ ಇದನ್ನೇ ಆಧಾರವಾಗಿ ಇಟ್ಟುಕೊಂಡರೆ ಈ ರಾಜ್ಯದ ಒಬ್ಬೊಬ್ಬರಿಗೂ ಇದರಿಂದ ಅನುಕೂಲವಾಗುವುದಿಲ್ಲ. ಅದಕ್ಕೋಸ್ಕರವಾಗಿ ಸರ್ಕಾರವನ್ನು ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಇವತ್ತು ೨-೧೦-೧೯೮೯ರಲ್ಲಿ ಯಾರು ಸಾಲಗಾರರಿದ್ದಾರೆ ಆ ಎಲ್ಲ ರೈತರ ಮೊದಲನೆ ೧೦ ಸಾವಿರ ಸಾಲ ಮನ್ನಾ ಆಗಬೇಕೆಂಬುದು ನಮ್ಮ ಬೇಡಿಕೆ ಆಗಿದೆ ಮತ್ತು ಇಡೀ ರಾಜ್ಯದ ಈ ದೇಶದ ರೈತರ ಬೇಡಿಕೆಯಾಗಿದೆ. ಇದು ನಮ್ಮ ಬೇಡಿಕೆಯೂ ಆಗಿದೆ. ಮತ್ತೆ ಬಹಳ ಸ್ಪಷ್ಟಪಡಿಸುತ್ತಿರುವಂಥದ್ದೇನೆಂದರೆ ರೈತರ ಸಾಲ ಮನ್ನಾ ಮಾಡುವುದರಿಂದ ಅವರಿಗೆ ಎಲ್ಲ ರೀತಿಯಿಂದಲೂ ಅನುಕೂಲವಾಗುತ್ತದೆನ್ನುವುದಲ್ಲ. ಇದು ಒಂದು ಸಂಕೇತವಾಗಿ ಅನುಕೂಲವಾಗಿ ತನ್ನ ಕಾಲಮೇಲೆ ನಿಲ್ಲುವಂಥ ಒಂದು ಹೊಸ ಕಾರ್ಯಕ್ರಮ ಆಗಬಹುದು. ಅದಕ್ಕೋಸ್ಕರವಾಗಿ ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಯೋಜನೆಯಿಂದ ಯಾವುದೇ ಅನುಕೂಲವಾಗದಿರುವ ಸಂದರ್ಭದಲ್ಲಿ ಬೇರೆ ಬೇರೆ ರಾಜ್ಯಗಳವರೂ ಸಹ ಇದರಿಂದ ಅನುಕೂಲವಾಗುವುದಿಲ್ಲವೆಂದು ಹೇಳಿ, ಅವರು ಹೊಸ ಸ್ಕೀಮ್‌ನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಅದರ ಮೂಲಕ ಆ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡುವಂಥ ಪ್ರಯತ್ನ ಮಾಡುತ್ತಿರತಕ್ಕಂಥ ವೇಳೆಯಲ್ಲಿ ಅದರ ಬಗ್ಗೆ ನಾವು ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟು, ಈ ರಾಜ್ಯದ ರೈತರಿಗೆ ಅನುಕೂಲವಾಗುವಂತಹ ಒಂದು ಸ್ಕೀಮ್ ಅನ್ನು ತಯಾರಿಸಿ ಕೇಂದ್ರಕ್ಕೆ ಕಳಿಸಬೇಕಾಗಿದೆ, ಕೊನೆಪಕ್ಷ ೨-೧೦-೧೯೮೯ರವರೆಗೆ ಸಾಲಗಾರರು ಯಾರು ಇದ್ದಾರೆ. ಆ ಎಲ್ಲಾ ರೈತರಿಗೂ ಅನುಕೂಲವಾಗುವಂತಹ ಒಂದು ಸ್ಕೀಮ್‌ನ್ನು ಕಳುಹಿಸಿಕೊಟ್ಟು ಆ ಬಗ್ಗೆ ಪ್ರಧಾನಿಯವರ ಮನ ಒಲಿಸಿ

ನಮ್ಮ ರಾಜ್ಯದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾವು ಸತತವಾದ ಹೋರಾಟವನ್ನು ಮಾಡು ತ್ತಿದ್ದೇವೆ. ಅದಕ್ಕಾಗಿ ತಮ್ಮ ಮೂಲಕ ನಾನು ಆ ಭಾಗದಲ್ಲಿರುವಂಥ ಮಾನ್ಯ ಸಚಿವರಾದ ವೀರಪ್ಪ ಮೊಯ್ಲಿಯವರನ್ನು ವಿನಂತಿ ಮಾಡಿಕೊಳ್ಳುವುದಿಷ್ಟೇ. ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಇವತ್ತು ಬೇರೆ ಬೇರೆ ರಾಜ್ಯಗಳಲ್ಲಿ ಏನು ಕ್ರಮ ತೆಗೆದುಕೊಂಡಿರುತ್ತಾರೆ, ಅದರಂತೆ ಇಲ್ಲಿಯೂ ಸಮಗ್ರವಾಗಿ ಚರ್ಚೆಯಾದಮೇಲೆ ಕೇಂದ್ರ ಸರ್ಕಾರಕ್ಕೆ ನಮ್ಮದೇ ಆದಂತ ಒಂದು ಯೋಜನೆಯನ್ನು ಕಳುಹಿಸಿಕೊಟ್ಟು, ವಿರೋಧಪಕ್ಷದ ನಾಯಕರು ಮತ್ತು ಸಭಾನಾಯಕರ ಒಂದು ನೇತೃತ್ವದಲ್ಲಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದ ರೈತರಿಗೆ ಅನುಕೂಲ ಮಾಡಿ ಕೊಡುವ ದಿಸೆಯಲ್ಲಿ ಪ್ರಯತ್ನ ಮಾಡಬೇಕು. ಆ ದಿಕ್ಕಿನಲ್ಲಿ ಸರ್ಕಾರ ಒಂದು ಹೇಳಿಕೆಯನ್ನು ಕೊಡುತ್ತದೆಂದು ತಾವು ಹೇಳಿದ್ದೀರಿ. ದಯವಿಟ್ಟು ಸರ್ಕಾರದ ಪರವಾಗಿ ಒಂದು ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡಿ ಕೊಳ್ಳುತ್ತೇನೆ. ಮತ್ತೆ ನಮ್ಮೆಲ್ಲ ಸದಸ್ಯರನ್ನು ಈಗಾಗಲೇ ತಾವು ಒಳಗಡೆ ಕುಳಿತು ಮಾತನಾಡಿದಂತೆ, ಸರ್ಕಾರದವರು ಹೇಳಿಕೆಯನ್ನು ಕೊಡಲು ಅವಕಾಶವನ್ನು ಮಾಡಿಕೊಡುವ ದೃಷ್ಟಿಯಿಂದ ಅವರುಗಳು ತಮ್ಮ ಸ್ಥಳಗಳಿಗೆ ಬಂದು ಕುಳಿತುಕೊಳ್ಳಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಬಿ.ಜೆ.ಪಿ.ಯ ಎಲ್ಲ ಸದಸ್ಯರು ಬಂದು ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ಏನು ಬೆಳಿಗ್ಗೆ ಮನವಿ ಮಾಡಿದೆವು, ಆ ಮನವಿಯನ್ನು ಆಧರಿಸಿ ಅತ್ಯಂತ ಸೂಕ್ತವಾದ ಒಂದು ಸಭೆಯನ್ನು ವ್ಯವಸ್ಥೆ ಮಾಡಿ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ತಾವು ಸಹಕಾರಿಯಾದುದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ. ಜೊತೆಯಲ್ಲಿ ಯಡಿಯೂರಪ್ಪನವರ ಕಳಕಳಿ ಏನಿದೆ ಅದು ಇಡೀ ಸಭೆಗೇ ಇರತಕ್ಕ ಕಳಕಳಿ. ಅವರು ಅದನ್ನು ಅರ್ಥ ಮಾಡಿಕೊಂಡಿದ್ದಾರೆ. ಕೇಂದ್ರದವರ ಯೋಜನೆಯನ್ನೇನು ಮಾಡಿದ್ದಾರೆ ಅದು ಸರಿಯಾಗಿ ಕಾಣುತ್ತಿಲ್ಲ. ಆದ್ದರಿಂದ ಈ ಯೋಜನೆಯನ್ನು ತಾವು ಒಪ್ಪುವುದಕ್ಕೆ ಮುಂಚೆ ಮತ್ತು ಈ ಯೋಜನೆ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವುದಕ್ಕೆ ಮುಂಚೆ ಒಂದು ಸಮಗ್ರವಾಗಿ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಜೊತೆಗೆ ಇದು ಇಡೀ ರಾಜ್ಯದ ಸಮಗ್ರ ವಾದಂಥ ರೈತರ ಹಿತವನ್ನು ಕಾಪಾಡುವುದರಿಂದ ನಾವು ಈ ಸಭೆಯ ಮೂಲಕ ಸರಿಯಾದ ಮಾರ್ಗ ದರ್ಶನವನ್ನು ಕೇಂದ್ರಕ್ಕೆ ನೀಡಬೇಕಾಗಿದೆ. ಆದ್ದರಿಂದ ಈ ಸಭೆಯಲ್ಲಿ ಚರ್ಚೆ ಮುಗಿದ ನಂತರ ಮುಖ್ಯ ಮಂತ್ರಿಗಳ ನಾಯಕತ್ವದಲ್ಲಿ ದೆಹಲಿಗೆ ನಿಯೋಗ ಹೋಗತಕ್ಕದ್ದು. ನಾಳೆ ಮುಖ್ಯ ಮಂತ್ರಿಗಳು ಬರುತ್ತಿದ್ದಾರೆ, ಇವತ್ತು ದೆಹಲಿಯಲ್ಲಿ ಉಪಪ್ರಧಾನಿಯನ್ನು ಭೇಟಿ ಮಾಡಿ ಪರಿಹಾರವನ್ನು ಕಂಡುಕೊಂಡು ಬರುತ್ತಾರೆಂದು ನನಗನ್ನಿಸುತ್ತದೆ ಅವರು ಬಂದನಂತರ ದೆಹಲಿ ಭೇಟಿಯ ಫಲಶ್ರುತಿಯ ಬಗ್ಗೆ ಹೇಳಿಕೆಯನ್ನು ಕೊಡಬೇಕಾಗುತ್ತದೆ. ಆ ದಿಸೆಯಿಂದ ಇವೊತ್ತು ಯಡಿಯೂರಪ್ಪನವರು ಮತ್ತು ಅವರ ಸಹೋದ್ಯೋಗಿಗಳು ಏನು ಧರಣಿ ಕುಳಿತಿದ್ದರು. ಅವರು ಬಹಳ ಪ್ರಾಮಾಣಿಕವಾಗಿ ಕುಳಿತಿದ್ದರು. ಅವರಿಗೆ ಈ ಸಭೆಯ ಘನತೆಯನ್ನು ಹಾಳುಮಾಡಬೇಕೆಂಬ ಉದ್ದೇಶ ಇರಲಿಲ್ಲ. ಈ ದಿಸೆಯಲ್ಲಿ ತಾವು ಕೈಗೊಂಡ ನಿರ್ಧಾರ ಮೆಚ್ಚತಕ್ಕದ್ದು. ಆದುದರಿಂದ ಸರ್ಕಾರದ ಕಡೆಯಿಂದ ಒಳ್ಳೆಯ ವಾತಾವರಣ ನಿರ್ಮಾಣವಾಗಲು ಅವರಿಂದ ಒಂದು ಒಳ್ಳೆಯ ಸಲಹೆ ಬರಲಿ ಎಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಈ ಹೊಸ ವಿಧಾನಸಭೆ ಪ್ರಾರಂಭವಾದಾಗಿನಿಂದ ರೈತರ ಈ ಸಾಲದ ಬಗ್ಗೆ ಮತ್ತು ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಸಾಕಷ್ಟು ಆಗಿದೆ. ನಾವು ಎಷ್ಟೇ ಚರ್ಚೆ ಮಾಡಿದರೂ ಸಹ ರೈತರ ಮೂಲಭೂತ ವಾದಂತಹ ಸಮಸ್ಯೆಗಳಿಗೆ ಉತ್ತರ ಇನ್ನೂ ದೊರಕಿಲ್ಲ, ರೈತರಿಗೆ ಇರತಕ್ಕ ಸಾಲವನ್ನು ಸಂಪೂರ್ಣವಾಗಿ ವಜಾ ಮಾಡಿದರೂ ಕೂಡ ರೈತರ ಎಲ್ಲ ಸಮಸ್ಯೆಗಳು ಬಗೆ ಹರಿದವು ಎಂಬ ಭಾವನೆ ನನಗೆ ಇಲ್ಲ, ಹಾಗೆಂದು ರೈತರಿಗೆ ಸಿಗತಕ್ಕ ಅಲ್ಪಸ್ವಲ್ಪ ಕಿಂಚಿತ್ ಸವಲತ್ತನ್ನು ಕಳೆದುಕೊಳ್ಳುವುದಕ್ಕೆ ತಯಾರಿಲ್ಲ. ಈ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಒಂದು ಯೋಜನೆಯನ್ನು ದೇಶದ ಮುಂದಿಟ್ಟಿದ್ದಾರೆ. ಇದನ್ನು ಮೊದಲಿನಿಂದ ಕೊನೆಯವರೆಗೆ ಓದಿದರೂ ಸಹ ಸ್ನೇಹಿತರಾದ ಯಡಿಯೂರಪ್ಪನವರು ಹೇಳಿದ ಹಾಗೆ ಸುಸ್ತಿದಾರರು ಯಾರಿದ್ದಾರೆ ಅವರಲ್ಲಿ ಶೇಕಡ ಒಂದೆರಡಷ್ಟು ಸುಸ್ತಿದಾರರಿಗೂ ಇದರಿಂದ ಪ್ರಯೋಜನವಾಗುವುದಿಲ್ಲ. ಈ ಯೋಜನೆ ವಾಸ್ತವಾಂಶ ಗಳಿಂದ ಬಹಳ ದೂರ ಇದೆ. ಕಂದಾಯ ಇಲಾಖೆಯ ಅಂಕಿ ಅಂಶಗಳ ದಾಖಲೆಯನ್ನು ನಂಬಿ, ಅದೇ ಸತ್ಯ ಎಂಬ ದೃಷ್ಟಿಯಿಂದ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಹೋದರೆ ಶೇಕಡ ಒಂದೆರಡ ರಷ್ಟು ರೈತರಿಗೂ ಅನುಕೂಲವಾಗುವುದಿಲ್ಲ. ಈ ಯೋಜನೆ ಬಗ್ಗೆ ಚರ್ಚೆಯಾಗುವುದರ ಜೊತೆಗೆ ನಮ್ಮ ರಾಜ್ಯದ ರೈತರ ಸಮಸ್ಯೆಗಳ ಬಗ್ಗೆ, ರೈತರ ಪರಿಸ್ಥಿತಿ ಬಗ್ಗೆ, ರೈತರ ಸಮಸ್ಯೆ ಬಗ್ಗೆ ಹಾಗೂ ನಮ್ಮ

ರಾಜ್ಯದ ಯೋಜನೆ ಬಗ್ಗೆ ಚರ್ಚಿಸಬೇಕಾದುದು ಅಗತ್ಯ ಇದೆ. ಈ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಮುಖ್ಯಮಂತ್ರಿಗಳು ಸಮ್ಮೇಳನದಲ್ಲಿ ದೆಹಲಿಯಲ್ಲಿ ನಡೆಯುತ್ತಿದೆ. ನಮ್ಮ ಮುಖ್ಯಮಂತ್ರಿಗಳು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಅವರು ಕೇಂದ್ರದ ಜೊತೆ ಏನೇನು ಮಾತುಕತೆ ನಡೆಸಿದ್ದಾರೆ ಎಂಬುದನ್ನು ರಾಜ್ಯದ ಜನತೆ ತಿಳಿದುಕೊಳ್ಳಬೇಕಾಗ ಅವಶ್ಯಕತೆ ಇದೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಬಂದಮೇಲೆ ಇವರ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಆದ್ದರಿಂದ ಸರ್ಕಾರದವರು ಈ ಚರ್ಚೆಗೆ ಅನುವು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಮಾನ್ಯ ಯಡಿಯೂರಪ್ಪನವರು ತಮ್ಮ ನಿರ್ಧಾರವನ್ನು ಈಗಾಗಲೇ ಪ್ರಕಟಿಸಿದ್ದಾರೆ. ಅವರು ಈ ಧರಣಿ ಕಾರ್ಯಕ್ರಮವನ್ನು ಕೈಬಿಟ್ಟಿರುವ ಕಾರಣವನ್ನು ಕೊಟ್ಟಿದ್ದಾರೆ. ಗಡುಸು ಮನೋಭಾವನೆ ಹೊಂದಿದ್ದ ಅವರು ಮೆದು ಮನೋಭಾವಕ್ಕೆ ಪರಿವರ್ತನೆ ಆಗಿರುವುದರಿಂದ ಅವರನ್ನು ಅಭಿನಂದಿಸಿ, ಈ ದಿಸೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರವನ್ನು ಸರ್ಕಾರವನ್ನು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಡಾ. ಎನ್, ಬಿ. ನಂಜಪ್ಪ.—ಮಾನ್ಯ ಅಧ್ಯಕ್ಷರೇ, ನಾವು ಈ ಸದನ ಪ್ರಾರಂಭವಾದಾಗಿನಿಂದ ಈ ರೈತರ ಬಗ್ಗೆ ಕೇಳಿ ಕೇಳಿ ಕೇಳಿ ಇವರ ಕಣ್ಣೀರೆಲ್ಲಾ ಹಳ್ಳಿಹಳ್ಳಿಯ ಬೀದಿಯಲ್ಲೆಲ್ಲಾ ಹರಿದು ಗೊಂದಲಮಯ ವಾತಾವರಣ ಈಗ ಸೃಷ್ಟಿಯಾಗಿದೆ. ಈಗ ಹಳ್ಳಿಗಳಿಗೆ ಹೋದರೆ ಸಾಲದ ಬಗ್ಗೆ ಏನು ಮಾಡಿದಿರಿ ಎಂದು ಪ್ರತಿಯೊಬ್ಬ ಶಾಸಕರನ್ನು ಕೇಳತಕ್ಕ ಪರಿಸ್ಥಿತಿಗೆ ತಂದು ಕೂರಿಸಿದ್ದಾರೆ. ಮೊನ್ನೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಬಂದಿರತಕ್ಕ ರಿಪೋರ್ಟ್ ಓದಿದ ಸಂದರ್ಭದಲ್ಲಿ......

ಅಧ್ಯಕ್ಷರು.—ಈಗ ಮಂತ್ರಿಗಳು ಮಾತನಾಡುತ್ತಾರೆ. ಸ್ವಲ್ಪ ಈಲ್ಡ್ ಆಗಿ.

ಶ್ರೀ ಪಾಟೀಲ್ ನಾಗರಾಜ್.—ಶ್ರೀ ನಂಜಪ್ಪನವರೇ. ನೀವು ದಾರಿ ತಪ್ಪುತ್ತಿದ್ದೀರಿ. ವಿಷಯ ಸ್ವಲ್ಪ ತಿಳಿದುಕೊಳ್ಳಿ. ಸುಮ್ಮನೆ ನೀವೇ ಏತಕ್ಕೆ ಕಣ್ಣೀರು ಸುರಿಸುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ನಮ್ಮ ಮಾತುಕತೆಯಲ್ಲಿ ಭಾಗವಹಿಸಿಲ್ಲ. ಆದ್ದರಿಂದ ಅದರ ಹಿನ್ನೆಲೆ ಅವರಿಗೆ ಗೊತ್ತಿಲ್ಲ. ನಮ್ಮ ಮಾತುಕತೆಯ ಹಿನ್ನೆಲೆಯಲ್ಲಿ ಯಾವರೀತಿ ಮುಂದುವರಿಯಬೇಕು ಎಂದು ಗೊತ್ತಿಲ್ಲದ ಕಾರಣ ಅವರು ಆ ರೀತಿ ಹೇಳುತ್ತಾ ಇರಬಹುದು. ಮಾನ್ಯ ಯಡಿಯೂರಪ್ಪ ನವರು ಈ ರೈತರ ಬಗ್ಗೆ ಚರ್ಚೆಯಾಗಬೇಕೆಂದು ಹೇಳುತ್ತಿದ್ದಾರೆ. ಚರ್ಚೆ ಮಾಡುವಾಗ ಅವರೂ ಮಾತನಾಡಲಿ. ಭಾರತೀಯ ಜನತಾ ಪಾರ್ಟಿಯ ಸನ್ಮಾನ್ಯ ನಾಯಕರು ಮತ್ತು ಅವರ ಸಹಪಾಠಿಗಳು ಕಳೆದ ಎರಡು ಮೂರು ದಿವಸಗಳಿಂದ ಇಲ್ಲಿ ಧರಣಿ ಕುಳಿತಿದ್ದರು. ತಾವು ಈಮಧ್ಯ ಪ್ರವೇಶ ಮಾಡಿ ಎಲ್ಲರನ್ನೂ ಕರೆದು ಸೌಹಾರ್ದಯುತವಾದ ವಾತಾವರಣದಲ್ಲಿ ಧರಣಿಯನ್ನು ಕೈಬಿಡಬೇಕು ಎಂದು ಕೇಳಿ ಕೊಂಡಿರಿ. ಮತ್ತು ಸದನಕ್ಕೆ ಗೌರವವನ್ನು ಸೂಚಿಸಿ ಏನು ಸನ್ಮಾನ್ಯ ಯಡಿಯೂರಪ್ಪನವರು ಮತ್ತು ಅವರ ಸಹಪಾಠಿಗಳು ಧರಣಿಯನ್ನು ಕೈಬಿಟ್ಟು ತಮ್ಮ ಸ್ಥಾನವನ್ನು ಸ್ವೀಕಾರ ಮಾಡಿ ಏನು ಸಹಕಾರ ಕೊಡುತ್ತಿದ್ದಾರೆ ಅದಕ್ಕಾಗಿ ಸರ್ಕಾರದ ಕಡೆಯಿಂದ ವಿಶೇಷವಾದ ಅಭಿನಂದನೆಗಳನ್ನು ಅವರಿಗೆ ಸಮರ್ಪಿಸುತ್ತಿದ್ದೇನೆ. ಈ ವಿಚಾರದಲ್ಲಿ ಸಾಕಷ್ಟು ವಿಚಾರ ವಿನಿಮಯ ತಮ್ಮ ಕಚೇರಿಯಲ್ಲಿ ಇವತ್ತು ಆಗಿದೆ. ಸಾಲ ಮನ್ನಾದ ವಿಚಾರ ಅಥವಾ ಸಾಲ ರಿಯಾಯಿತಿ ಕೊಡತಕ್ಕ ವಿಚಾರ ಇವತ್ತು ಕರ್ನಾಟಕ ರಾಜ್ಯಕ್ಕೆ ಸೀಮಿತವಾದ ಒಂದು ವಿಚಾರವಾಗಿ ಉಳಿದಿಲ್ಲ. ಇದರ ಬಗ್ಗೆ ರಾಷ್ಟ್ರವ್ಯಾಪ್ತಿ ಚರ್ಚೆ ಆಗುತ್ತಿದೆ ಇವತ್ತು ಇದರ ಬಗ್ಗೆ ವಿಚಾರಮಂಥನ ನಡೆಯುತ್ತಿದೆ. ಒಂದು ಚಿಂತನೆ ನಡೆಯುತ್ತಿದೆ ಯಾರಿಗೆ ಈ ಒಂದು ಪರಿಹಾರ ಸಿಗಬೇಕು, ಯಾರಿಗೆ ಹೆಚ್ಚು ಶಕ್ತಿಯನ್ನು ಕೊಡಬೇಕು, ಆ ರೈತನ ವಿಚಾರದಲ್ಲಿ ಯಾವ ಸ್ವರೂಪದ ಬೆಂಬಲ ಯಾವ ಸ್ವರೂಪದ ಒಂದು ಯೋಜನೆಯನ್ನು ಹಾಕಿದರೆ ಆ ರೈತನಿಗೆ ಶಕ್ತಿ ಬರುವುದಕ್ಕೆ ಸಾಧ್ಯ ಇದೆ ಎಂಬ ಬಗ್ಗೆ ಎಲ್ಲ ಪಕ್ಷದವರೂ ಇವತ್ತು ವಿಚಾರ ಮಾಡುತ್ತಿದ್ದಾರೆ. ಈ ಒಂದು ಯೋಚನೆಯನ್ನು ಎರಡು ಭಾಗ ಎಂದು ವಿಭಾಗಿಸಬಹುದು. ಕೇಂದ್ರ ಸರ್ಕಾರ ೧೦೦ಕ್ಕೆ ೧೦೦ ಪಾಲು ಇಡೀ ಜವಾಬ್ದಾರಿ ಹೊತ್ತುಕೊಂಡು ಅನುಷ್ಠಾನ ಮಾಡಿ ಬ್ಯಾಂಕುಗಳು ಅಥವಾ ಗ್ರಾಮೀಣ ಬ್ಯಾಂಕುಗಳ ಮುಖಾಂತರ ಕುಶಲಕರ್ಮಿಗಳಿಗೆ, ರೈತರಿಗೆ ಏನು ಸಾಲವನ್ನು ಕೊಟ್ಟಿದ್ದಾರೆ ಅದನ್ನು ಮನ್ನಾ ಮಾಡತಕ್ಕ ಕಾರ್ಯಕ್ರಮ ಹಾಕಿ ಅದರ ಬಗ್ಗೆ ಸುತ್ತೋಲೆ ಪ್ರತಿ ರಾಜ್ಯಸರ್ಕಾರಕ್ಕೂ ಕಳುಹಿಸಿದ್ದಾರೆ. ಅದಕ್ಕನುಗುಣವಾಗಿ ಅದನ್ನು ಅನುಷ್ಠಾನ ಮಾಡತಕ್ಕಂಥ ರಿಸರ್ವ್ ಬ್ಯಾಂಕ್ ಅಥವಾ ನಬಾರ್ಡ್‌ನವರು ಗೈಡ್‌ಲೈನ್‌ಗಳನ್ನೂ ಇನ್ನೂ ಕಳುಹಿಸಬೇಕಾಗಿದೆ. ಈ ಬ್ಯಾಂಕುಗಳು ಇದನ್ನು ಅನುಷ್ಠಾನ ಮಾಡತಕ್ಕ ಹಂತಕ್ಕೆ ಇನ್ನೂ ಬಂದಿಲ್ಲ. ಆದರ ಬಗ್ಗೆ ಒಂದು ಸ್ವರೂಪ ಕೇಂದ್ರ ಸರ್ಕಾರ ಕೂಡ ಪ್ರಕಟ ಮಾಡಿಲ್ಲ. ತಾವು ಪತ್ರಿಕೆಯಲ್ಲಿ ನೋಡಿರಬಹುದು, ಕೇಂದ್ರದ ಸಚಿವರು ಮತ್ತು ಸನ್ಮಾನ್ಯ ಉಪಪ್ರಧಾನಿಗಳು ಹೇಳತಕ್ಕ ರೀತಿಯಲ್ಲಿ ಆ ಸ್ವರೂಪದ ಬದಲಾವಣೆ ಆಗುತ್ತಲೇ ಇದೆ.

೧೦ ಸಾವಿರಕ್ಕೆ ಸೀಮಿತ ಮಾಡಬಾರದು, ಇನ್ನೂ ವಿಸ್ತರಿಸಬೇಕು ಎಂಬ ಚಿಂತನೆ ಇದೆ. ಕೇಂದ್ರ ಸರ್ಕಾರ ಕಳುಹಿಸಿರುವ ಸ್ಕೀಮ್ ೧೦ ಸಾವಿರ ರೂಪಾಯಿ ಇದ್ದರೂ ಅದನ್ನು ವಿಸ್ತರಿಸಬೇಕೆಂಬ ಆಲೋಚನೆ ಇದೆ. ಆದ್ದರಿಂದ ಇವತ್ತು ಇನ್ನೂ ಏನೂ ಈ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇದರ ಸಂಪೂರ್ಣವಾದ ನಿರ್ದಿಷ್ಟವಾದಂಥ ಒಂದು ಸ್ವರೂಪ ನಮಗೆ ತಿಳಿದು ಬಂದಿಲ್ಲ.

೩-೫೦ ಪಿ. ಎಂ,

ಇವತ್ತೂ ಕೂಡಾ ನೂರಕ್ಕೆ ನೂರು ಪಾಲು ಬ್ಯಾಂಕ್ ಮುಖಾಂತರ ಅಥವಾ ಗ್ರಾಮೀಣ ಬ್ಯಾಂಕ್‌ಗಳ ಮೂಲಕ ಅನುಷ್ಠಾನ ಮಾಡಬೇಕು ಎಂಬ ಬಗ್ಗೆ ಕೂಡಾ ಸಂಪೂರ್ಣವಾಗಿ ಬ್ಯಾಂಕ್‌ಗಳಿಗೆ ಅಥವಾ ರಿಸರ್ವ್ ಬ್ಯಾಂಕ್‌ನವರಿಗೆ ಅಥವಾ ನಬಾರ್ಡ್‌ನವರಿಗೆ ತಿಳಿದು ಬಂದಿದೆಯೋ ಎನ್ನುವ ಹಂತದಲ್ಲಿ ನಾವಿಲ್ಲ, ಸೈದ್ಧಾಂತಿಕವಾಗಿ ಇದನ್ನು ಮಾಡಬೇಕೆಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ ಕೇಂದ್ರಕ್ಕೆ ಸಂಬಂಧಪಟ್ಟ ಸಚಿವರು ಘೋಷಣೆ ಮಾಡಿದ್ದಾರೆ. ಇದನ್ನು ಒಪ್ಪಿಕೊಳ್ಳತಕ್ಕದ್ದು ಇದೆ. ಇದು ಒಂದು ಭಾಗ. ಇನ್ನು ಎರಡನೇ ಭಾಗ, ಕೇಂದ್ರ ಸರ್ಕಾರದ ಪುರಸ್ಕೃತವಾದ ಯೋಜನೆಯಂತೆ ೫೦ ಪಾಲು ರಾಜ್ಯ ಹಾಗೂ ೫೦ ಪಾಲು ಕೇಂದ್ರ ಭರಿಸಬೇಕೆಂದು ಏನು ಹೇಳಲಾಗಿದೆ ಅದನ್ನು ಯಾವ ಸ್ವರೂಪದಲ್ಲಿ ಭರಿಸಬೇಕು. ರಾಜ್ಯ ಸರ್ಕಾರಗಳು ತಮ್ಮದೇ ಆದ ಒಂದು ಯೋಜನೆ ಮಾಡಿ ಅದನ್ನು ಅನುಷ್ಠಾನ ಮಾಡಬೇಕೇ ಅಥವಾ ಕೇಂದ್ರ ಸರ್ಕಾರ ನಿರ್ದಿಷ್ಟವಾದ ಸ್ವರೂಪದಲ್ಲಿ ಯೋಜನೆಯನ್ನು ಮಾಡಿ ಅದನ್ನು ಅನುಷ್ಠಾನ ಮಾಡುವುದಕ್ಕೇ ಎಲ್ಲಾ ರಾಜ್ಯ ಸರ್ಕಾರಗಳು ಏಕ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೇ ಎನ್ನುವುದು ಇವತ್ತಿನವರೆವಿಗೂ ಕೂಡಾ ಸ್ಪಷ್ಟವಾಗಿ ಗೊತ್ತಾಗಿಲ್ಲ. ಈ ಬಗ್ಗೆ ನಿರ್ದಿಷ್ಟವಾದ ಸ್ವರೂಪ ರಾಜ್ಯದ ಮುಂದೂ ಇಲ್ಲ ಕೇಂದ್ರದ ಮುಂದೂ ಇಲ್ಲ. ಏಕೆಂದರೆ ಇದು ಒಂದು ರಾಷ್ಟ್ರವ್ಯಾಪ್ತಿ ಯೋಜನೆಯಾಗಿರುವುದರಿಂದ ರಾಜ್ಯ ೫೦ ಪಾಲು, ಕೇಂದ್ರ ೫೦ ಪಾಲು ಭರಿಸುವುದಾದರೂ ಕೂಡಾ ಇವತ್ತಿನವರೆವಿಗೂ ವ್ಯವಹಾರಿಕವಾಗಿ ಯಾವ ರಾಜ್ಯಗಳೂ ಕೂಡಾ ಇದನ್ನು ಒಪ್ಪಿಕೊಂಡಿಲ್ಲ. ಇದನ್ನೆಲ್ಲಾ ನಾನು ವಿವರವಾಗಿ ಚರ್ಚೆಕಾಲದಲ್ಲಿ ಹೇಳುತ್ತೇನೆ. ಮಾನ್ಯ ಯಡಿಯೂರಪ್ಪನವರ ಪಕ್ಷ ಅಧಿಕಾರದಲ್ಲಿ ಇರತಕ್ಕ ಮಧ್ಯಪ್ರದೇಶದಲ್ಲೂ ಕೂಡಾ ನೀವು ೫೦ ಪರ್ಸೆಂಟ್ ಕೊಡುತ್ತೀರಾದರೂ ಮಿಕ್ಕ ೫೦ ಪರ್ಸೆಂಟ್‌ನ್ನೂ ಕೇಂದ್ರ ಸರ್ಕಾರವೇ ಕೊಡಬೇಕೆಂದು ಅವರು ಬೇಡಿಕೆಯನ್ನು ಸಲ್ಲಿಸಿದ್ದಾರೆ. ಇವತ್ತು ನಾವು ಒಂದು ರಾಜ್ಯದವರು ಅದನ್ನು ಅನುಷ್ಠಾನಕ್ಕೆ ತಂದರೆ ಅದರಿಂದ ಇನ್ನೊಂದು ರಾಜ್ಯಕ್ಕೆ ಎಂಬರಾಸ್ ಆಗುತ್ತದೆ. ಇದರಿಂದ ಕೇಂದ್ರವನ್ನು ಸಂದಿಗ್ಧ ಸ್ಥಿತಿಗೆ ತಂದಂತಾಗಬಹುದು, ಈ ವಿಷಯದಲ್ಲಿ ಕೇಂದ್ರ ಸರ್ಕಾರ ಒಂದು ಸಮಾನ್ಯನೀತಿಗೆ ಬರದೇ ಇದ್ದರೆ ರಾಷ್ಟ್ರದಲ್ಲೇ ಒಂದು ರೀತಿಯ ಗೊಂದಲ ಆಗಬಹುದು. ಇವತ್ತು ಗೊಂದಲ ವಾತಾವರಣವನ್ನು ಮಾಡತಕ್ಕ ಕಳಕಳಿ ಅಥವಾ ಗೊಂದಲ ವಾತಾವರಣ ಮಾಡತಕ್ಕ, ರಾಜಕೀಯ ಲಾಭ ತೆಗೆದುಕೊಳ್ಳತಕ್ಕ ಇಚ್ಛೆ ನಮಗಿಲ್ಲ. ಅಥವಾ ನಿಮಗೂ ಇಲ್ಲ. ಮತ್ತು ಯಾರಿಗೂ ಇಲ್ಲ. ಮತ್ತೆ ಇವತ್ತು ರೈತರಿಗೆ ಸಲ್ಲಬೇಕಾದ ಸೌಲಭ್ಯಗಳು ಸಿಗದ ಹಾಗೆ ವಾತಾವರಣ ಸೃಷ್ಟಿ ಮಾಡಬೇಕೆಂಬುದು ಯಾರ ಇಚ್ಛೆಯೂ ಇಲ್ಲ. ಇವತ್ತು ಒಂದು ನಿರ್ದಿಷ್ಟ ಸ್ವರೂಪವನ್ನು ಯಾವುದೇ ರಾಜ್ಯ ಸರ್ಕಾರ ಮಾಡದೇ ಇರುವಾಗ, ಎಲ್ಲಾ ವಿಷಯಗಳೂ ಒಂದು ಪ್ರೊಸೆಸ್‌ನಲ್ಲಿಯೇ ಇರುವಾಗ ನಮ್ಮ ರಾಜ್ಯ ಸರ್ಕಾರ ಈ ಯೋಜನೆ ಬಗ್ಗೆ ನಮ್ಮದೇ ಆದ ಒಂದು ಯೋಜನೆಯನ್ನು ಪ್ರಕಟ ಮಾಡಬೇಕು, ನೇರವಾಗಿ ಸಹಾಯ ಮಾಡಬೇಕು ಎಂದು ತಾವು ಒತ್ತಾಯ ಮಾಡಿದರೆ ಇವತ್ತು ಇದು ಬರೀ ನಮ್ಮ ರಾಜ್ಯದ ಪ್ರಶ್ನೆ ಒಂದೇ ಆಗುವುದಿಲ್ಲ. ಹಾಗೇನಾದರೂ ನಾವು ಪ್ರಕಟ ಮಾಡುವುದಾದರೆ ಅನೇಕ ಕಡೆ ನಿಮ್ಮ ಪಕ್ಷದ ಆಡಳಿತ ಇರುವ ರಾಜ್ಯಗಳಲ್ಲೂ ಕೂಡಾ ಸಂಕಷ್ಟಕ್ಕೆ ಸಿಲುಕಿಸಿದಂತಾಗುತ್ತದೆ. ಇದರ ಬಗ್ಗೆ ಅನೇಕ ರಾಜ್ಯಗಳ ಮುಖ್ಯಮಂತ್ರಿಗಳು ಆಲೋಚನೆ ಮಾಡುತ್ತಿದ್ದಾರೆ. ಯಾವ ರೀತಿಯ ಯೋಚನೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಪರಸ್ಪರ ಮಾತುಕತೆ ಮಾಡುತ್ತಿರುವುದು ನಮ್ಮ ಗಮನಕ್ಕೂ ಬಂದಿರಬಹುದು. ಇದೂ ಕೂಡಾ ಸೆಂಟ್ರಲ್ ಸ್ಪಾನ್ಸರ್ ಸ್ಕೀಮ್ ಆಗಿದ್ದು ಉನ್ನತ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಈ ವಿಷಯದಲ್ಲಿ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರಗಳು ಯಾವ ರೀತಿ ಭರಿಸಬೇಕು. ಯಾವ ರೀತಿ ಕಾರ್ಯಕ್ರಮ ಅಳವಡಿಸಿಕೊಂಡು ಅನುಷ್ಠಾನ ಮಾಡುವುದಕ್ಕೆ ಸಾಧ್ಯ ಇದೆ ಎನ್ನುವ ವಿಚಾರ ಕೂಡಾ ಇವತ್ತು ದೆಹಲಿಯಲ್ಲಿ ಚರ್ಚೆಯಾಗುತ್ತಿದೆ. ಈ ಚರ್ಚೆಯಲ್ಲಿ ಭಾಗವಹಿಸಲು ನಮ್ಮ ಮುಖ್ಯಮಂತ್ರಿಗಳೂ ಹೋಗಿದ್ದು ಅವರ ಜೊತೆ ನಮ್ಮ ಕಂದಾಯ ಮಂತ್ರಿಗಳಾದ ಕೆ. ಹೆಚ್. ಪಾಟೀಲರೂ ಹೋಗಿದ್ದಾರೆ.

ಸನ್ಮಾನ್ಯ ಮುಖ್ಯಮಂತ್ರಿಗಳೇ ಆ ಸಭೆಗೆ ಪ್ರಾಮುಖ್ಯತೆ ಕೊಟ್ಟು ಹೋಗಿದ್ದಾರೆ. ಅದು ಪರಿಹಾರ ಆಗದಿದ್ದರೂ ಕೂಡ ಮತ್ತು ಸ್ಪಷ್ಟವಾದ ಸ್ವರೂಪ ಸಿಗದಿದ್ದರೂ ಕೂಡ ಈ ತಿಂಗಳ ೧೮_೧೯ನೇ ತಾರೀಖಿಗೆ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆ ಸನ್ಮಾನ್ಯ ಪ್ರಧಾನಿಯವರ ಅಧ್ಯಕ್ಷತೆಯಲ್ಲಿ ದೆಹಲಿ

ಯಲ್ಲಿ ಏನು ನಡೆಯುತ್ತದೆ, ಅದರಲ್ಲಿ ಎಲ್ಲಾ ಮುಖ್ಯಮಂತ್ರಿಗಳೂ ಭಾಗವಹಿಸುತ್ತಿದ್ದಾರೆ. ಯೋಜನಾ ಮಂತ್ರಿಯಾಗಿ ನಾನೂ ಕೂಡ ಅದರಲ್ಲಿ ಭಾಗವಹಿಸುತ್ತಿದ್ದೇನೆ. ಈ ವಿಚಾರವನ್ನು ನಾವು ಅಲ್ಲಿ ಕೂಡ ತೆಗೆದುಕೊಳ್ಳುವುದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಬರಲಿ. ಇವತ್ತು ನಾಳೆ ಏನು ಚರ್ಚೆಯಾಗುತ್ತಿದೆ, ಆ ವಿಚಾರವನ್ನು ಸಹ ನಾವು ತಿಳಿದುಕೊಳ್ಳೋಣ. ಕೇಂದ್ರಸರ್ಕಾರ ಏನು ಯೋಜನೆಯನ್ನು ಅನುಷ್ಠಾನ ಮಾಡುತ್ತದೆ, ಅದರಿಂದ ಏನು ಪ್ರಯೋಜನ ಸಿಗುತ್ತಿದೆ, ಅಥವಾ ಲೋಪ ಏನಿದೆ, ಕರ್ನಾಟಕ ರಾಜ್ಯದ ರೈತರಿಗೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಚರ್ಚೆ ಮಾಡುವುದಕ್ಕೆ ಯಾರೂ ತಪ್ಪಿಸುವುದಿಲ್ಲ. ರೈತರಿಗೆ ಯಾವುದೇ ರೀತಿಯ ಪ್ರಯೋಜನ ಸಿಕ್ಕಿದರೆ ನಿಮ್ಮ ಜೊತೆಯಲ್ಲಿ ನಾವೂ ಇದ್ದೇವೆ. ಭಾರತೀಯ ಜನತಾ ಪಕ್ಷದವರು ಧರಣಿಯನ್ನು ರಾಜಕೀಯ ಪ್ರತಿಷ್ಠೆಗಾಗಿ ಅಥವಾ ಉದ್ಧಟತನದಿಂದ ಮಾಡಿದ್ದಾರೆಂದು ನಾವು ಕೂಡ ಹೇಳಲಿಲ್ಲ. ರೈತರ ಮೇಲಿನ ಕಳಕಳಿಯಿಂದ ಮಾಡಿದ್ದೀರಿ. ಆ ಕಳಕಳಿಯಿಂದಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತಿದ್ದಾರೆ. ಒಂದು ರಾಜ್ಯದ ಯೋಜನೆ ಅಥವಾ ಕೇಂದ್ರದ ಯೋಜನೆ ಸಾಲ ಮನ್ನಾ ವಿಚಾರದಲ್ಲಿ ಏನಿದೆ ಅದನ್ನು ಸ್ಪಷ್ಟವಾದ ಸ್ವರೂಪದಲ್ಲಿ ಅದನ್ನು ಅನುಷ್ಠಾನ ಮಾಡುವಲ್ಲಿ ರಾಜ್ಯ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರಕ್ಕೆ ಯಾವುದೇ ಆತಂಕ ಬಾರದ ರೀತಿಯಲ್ಲಿ ಮಾಡಬೇಕೆಂಬ ಕಳಕಳಿ ಸರ್ಕಾರಕ್ಕೆ ಕೂಡ ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಬರಲಿ. ಬಂದಾಗ ಪುನಃ ಸಭಾಧ್ಯಕ್ಷರು ಇದರ ಬಗ್ಗೆ ಮಧ್ಯಪ್ರವೇಶಿಸಿ ತಮ್ಮ ಕಚೇರಿಯಲ್ಲಿ ನಮ್ಮನ್ನೆಲ್ಲಾ ಪುನಃ ಕರೆದು ಮುಂದೆ ಯಾವರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆನ್ನುವ ಬಗ್ಗೆ ಅವಕಾಶ ಮಾಡಿಕೊಡಲಿ. ಆಗ ಚರ್ಚೆ ಮಾಡೋಣ ಮತ್ತೆ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅನುಮತಿ ಕೊಡಬೇಕೆಂದು ಹೇಳುತ್ತೇನೆ. ಬಿ.ಜೆ.ಪಿ. ಸದಸ್ಯರು ರೈತರ ಪರವಾಗಿ ಒತ್ತಾಯ ಮಾಡಿದ್ದಾರೆ. ನಾವೂ ರೈತರ ಪರವಾಗಿ ಇದ್ದೇವೆ. ರೈತರಿಗೆ ಸಹಾಯ ಮಾಡುವುದರಲ್ಲಿ ನಾವು ತಮಗಿಂತ ಒಂದು ಹೆಜ್ಜೆ ಹಿಂದೆ ಇಡುವುದಿಲ್ಲ. ಮೂರು ದಿವಸದ ನಂತರ ಧರಣಿ ಏನು ಕೈಬಿಟ್ಟಿದ್ದೀರಿ, ಸದನದ ಬೇರೆ ಕಾರ್ಯಕಲಾಪ ಮಾಡಲು ಏನು ಅನುಕೂಲ ಮಾಡಿಕೊಟ್ಟಿದ್ದೀರಿ ಅದಕ್ಕಾಗಿ ಸದನದ ಪರವಾಗಿ ಅಭಿನಂದನೆಯನ್ನು ಅಧ್ಯಕ್ಷರ ಮುಖಾಂತರ ಸನ್ಮಾನ್ಯ ಯಡಿಯೂರಪ್ಪನವರಿಗೆ ಮತ್ತು ಅವರ ಸಹಪಾಠಿಗಳಿಗೆ ಸಲ್ಲಿಸಿ ಈ ಸಹಕಾರ ಮುಂದೆ ಕೂಡ ಈ ಸದನಕ್ಕೆ ಸಿಗುತ್ತದೆಂದು ವಿಶ್ವಾಸವಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಈ ವಿಷಯ ಇಲ್ಲಿಗೆ ಸಮಾಪ್ತಿ ಆಯಿತು ಎಂದು ತಿಳಿದಿದ್ದೇನೆ, ಮತ್ತೊಂದು ವಿಚಾರ ಸದನದ ಮುಂದಿನ ಕಾರ್ಯಕಲಾಪ ನಡೆಯುವುದಕ್ಕೆ ಮುಂಚೆ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಇವತ್ತಿನ ದಿವಸ ವಿವಿಧ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆ ಪ್ರಾರಂಭ ಮಾಡುತ್ತೇವೆ. ಕಳೆದ ಆರು ತಿಂಗಳಿಂದ ಸರ್ಕಾರ ನಡೆದಿರತಕ್ಕ ಅವಧಿಯಲ್ಲಿ ಯಾವರೀತಿ ಹಣ ಖರ್ಚು ಮಾಡಿದೆ ಎಂಬ ಬಗ್ಗೆ ತಿಳಿದುಕೊಂಡು ನಾವು ಮಾತನಾಡಬೇಕೆಂದಿದ್ದೇವೆ. ನಮ್ಮ ಪ್ರೋಗ್ರಾಂ ಪ್ರಕಾರ ನಾಳೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಚಾರವಾಗಿ ಚರ್ಚೆ ಮಾಡಬೇಕಾಗಿದೆ. ನಮಗೆ ಇನ್ನೂ ಆ ಇಲಾಖೆಯ ವಾರ್ಷಿಕ ವರದಿ ಮತ್ತು ಪರ್‌ಫಾರ್‌ಮೆನ್ಸ್ ರಿಪೋರ್ಟ್ ಬಂದಿಲ್ಲ. ಹೋದವಾರವೂ ಇದೇ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆ ಸಮಯದಲ್ಲಿ ಸದನದಲ್ಲಿ ಇದ್ದಂಥ ಸಚಿವರು ನಾಳೆ ಎಲ್ಲಾ ವರದಿಗಳನ್ನು ತಂದುಕೊಡುತ್ತೇವೆ ಎಂದು ಭರವಸೆ ಕೊಟ್ಟರು. ಆದರೆ ವರದಿ ನಮಗೆ ತಲುಪದಿರುವುದರಿಂದ ಹೇಗೆ ಚರ್ಚೆ ಮಾಡಬೇಕೆಂದು ಅರ್ಥವಾಗುತ್ತಿಲ್ಲ. ದಯವಿಟ್ಟು ತಾವು ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದ ಮುಖಂಡರುಗಳು ಈ ಸಮಸ್ಯೆಯನ್ನು ಬಗೆಹರಿಸಬೇಕು. ಈಗ ಕೊಟ್ಟಿರತಕ್ಕ ರಿಪೋರ್ಟ್ ಬಗ್ಗೆ ಮಾತನಾಡಬೇಕಾದರೆ ಲೈಬ್ರರಿಗೆ ಹೋಗಬೇಕಾಗುತ್ತದೆ, ಹಿಂದೆ ಯಾವರೀತಿ ಆಗಿದೆ, ನಮ್ಮ ಕಾಲದಲ್ಲಿ ಯಾವರೀತಿ ನಡೆದಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಈಗ ಅದನ್ನೆಲ್ಲಾ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನೆಲ್ಲಾ ತಿಳಿದುಕೊಳ್ಳದೆ ಮಾಡುವ ಚರ್ಚೆಗೆ ಅರ್ಥವಿಲ್ಲ ಎಂದು ನನಗನ್ನಿಸುತ್ತದೆ. ದಯವಿಟ್ಟು ಮಾನ್ಯ ಅಧ್ಯಕ್ಷರು ಸರ್ಕಾರಕ್ಕೆ ನಮ್ಮ ಭಾವನೆಗಳನ್ನು ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮೊನ್ನೆ ತಾವು ಸಭೆಯಲ್ಲಿರಲಿಲ್ಲ ಉಪಾಧ್ಯಕ್ಷರು ಈ ಸಭೆಯಲ್ಲಿದ್ದರು. ಅವರ ಗಮನಕ್ಕೆ ತಂದೆವು ಈ ಮುನಿಸಿಪಾಲಿಟಿ ಇಲಾಖೆ ವರದಿ ಇಂಗ್ಲೀಷಿನಲ್ಲಿ......

ಶ್ರೀ ಬೈರೇಗೌಡ.—ಕನ್ನಡದಲ್ಲಿ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಕೊಟ್ಟಿದ್ದಾರಾ ? ಸರಿ.

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯಾರವರು ನಾಳೆ ನಡೆಯುತಕ್ಕಂಥ ಬೇಡಿಕೆಗಳ ಮೇಲಿನ ಚರ್ಚೆಗೆ ಸಂಬಂಧಪಟ್ಟಂತೆ ರಿಪೋರ್ಟ್‌ಗಳು ಬಂದಿಲ್ಲವೆಂದು ಹೇಳಿದರು. ಸರ್ಕಾರಕ್ಕೆ ನಾನು ಸೂಚನೆನೆ ಕೊಡುತ್ತೇನೆ. ನಾವು ಬೇಡಿಕೆಗಳನ್ನು ಚರ್ಚೆ ಮಾಡತಕ್ಕಂಥಾದ್ದು ಅರ್ಥವತ್ತಾಗಬೇಕಾದರೆ, ಅದರಿಂದ ಪರಿಣಾಮಕಾರಿಯಾದಂಥ ಚರ್ಚೆ ಈ ಸದನದಲ್ಲಿ ನಡೆಯುವ ಭೂಮಿಕೆಯನ್ನು ನೀವು ಸಿದ್ಧಪಡಿಸಬೇಕು. ಮಾನ್ಯ ಸದಸ್ಯರಿಗೆ ಸಾಕಷ್ಟು ಕಾಲಾವಕಾಶವನ್ನು ತಮ್ಮ ರಿಪೋರ್ಟ್‌ನ್ನು ಬೇಗ ಕೊಡುವುದರ ಮೂಲಕ ಕಲ್ಪಿಸಿಕೊಟ್ಟಾಗ ಅವರು ಸರ್ಕಾರಕ್ಕೆ ಕೊಡುವ ಅಮೂಲ್ಯವಾದ ಸಲಹೆಗಳಿಂದ ತಮಗೂ ಅನುಕೂಲವಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ.—ಅಮೂಲ್ಯವಾದುದ್ದು ಎಂದು ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ನನ್ನ ಮಟ್ಟಿಗೆ ಹೇಳಬೇಕಾದರೆ ನೀವು ಕೊಡತಕ್ಕಂಥ ಸಲಹೆಗಳೆಲ್ಲವೂ ಅಮೂಲ್ಯವಾದವುಗಳೇ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ತಮ್ಮ ಕಳಕಳಿಯನ್ನು, ಗಮನವನ್ನು ಹರಿಸಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ತಾವು ಏನು ಆದೇಶ ಕೊಟ್ಟಿದ್ದೀರಿ ಅಥವಾ ಮಾನ್ಯ ಸದಸ್ಯರು ಏನು ಕಳಕಳಿ ವ್ಯಕ್ತ ಮಾಡಿದ್ದಾರೆ, ಇದು ನಮ್ಮ ಕರ್ತವ್ಯದ ಒಂದು ನೆನಪನ್ನು ತಾವು ಮಾಡಿಕೊಟ್ಟಿದ್ದೀರಿ ಮತ್ತು ಮಾನ್ಯ ಸದಸ್ಯರು ಮಾಡಿಕೊಟ್ಟಿದ್ದಾರೆ. ಅದನ್ನು ನಾವು ಮಾಡುತ್ತೇವೆ. ಆದ್ದರಿಂದ ಈ ಮಟ್ಟಿಗೆ ಯಾವ ಕರ್ತವ್ಯ ಲೋಪ ಆಗದ ರೀತಿಯಲ್ಲಿ ಸರ್ಕಾರ ನೋಡಿಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ,

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನನ್ನ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಪೂರ್ವಭಾವಿಯಾಗಿ ಎಲ್ಲ ಮಾಹಿತಿಗಳನ್ನು ಕಳಿಸಿಕೊಟ್ಟಿದ್ದೇವೆ ಎಂದು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ತಮ್ಮದೂ ಸಹ ಮೊದಲನೇನೂ ಬಂದಿಲ್ಲ. ೮ನೇ ತಾರೀಕಿಗೆ ಬಂದಿದೆ. ೫–೬–೭ನೇ ತಾರೀಖಿನವರೆಗೂ ಬಂದಿರಲಿಲ್ಲ. ಆದರೂ ನಿಮಗೆ ಸಹಕಾರ ಕೊಟ್ಟಿದ್ದೇವೆ. ಯಾವುದೇ ಕ್ರಮ ತೆಗೆದುಕೊಂಡಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮೀನಿನ ಹೆಜ್ಜೆ ಗುರುತು ಬೇಕಾದರೆ ಹಿಡಿಯಬಹುದು ಆದರೆ ಮೀನು ಇಲಾಖೆಯ ಮಂತ್ರಿಗಳ ಹೆಜ್ಜೆ ಗುರುತು ಹಿಡಿಯುವುದು ಕಷ್ಟವಾಗಿದೆ ಏಕೆಂದರೆ ಅವರು ಏನಾದರು ಒಂದು ಹೀಗೆ ಹೇಳೀ ಹೇಳುತ್ತಾರೆ.

ಅಧ್ಯಕ್ಷರು.—ಸರ್ಕಾರದವರು ಎಲ್ಲಾ ಇಲಾಖಾ ವರದಿಗಳನ್ನು ಇಲ್ಲಿ ಚರ್ಚೆಗೆ ಬರುವುದಕ್ಕೆ ೨-೩ ದಿವಸಗಳ ಮೊದಲೇ ನಮ್ಮ ಕಛೇರಿಗೆ ಕಳುಹಿಸಿಕೊಟ್ಟರೆ, ನಾವು ಅದನ್ನು ಎಲ್ಲ ಸದಸ್ಯರಿಗೂ ತಲುಪಿಸಲು ವ್ಯವಸ್ಥೆ ಮಾಡುತ್ತೇವೆ. ಈಗ ದೇಶಪಾಂಡೆಯವರು ಚರ್ಚೆಯನ್ನು ಮುಂದುವರೆಸಬಹುದು

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಬೋರ್ಡ್, ಇದು ಒಂದು ರಾಜ್ಯ ಸರ್ಕಾರದ ಅತಿ ಮಹತ್ವದ ಒಂದು ವಿಂಗ್. ಇದು ರಾಜ್ಯದ ಎಲ್ಲಾ ಪಟ್ಟಣಗಳಲ್ಲಿ ಅಂದರೆ ಬೆಂಗಳೂರು ಸಿಟಿಯನ್ನು ಬಿಟ್ಟು, ಏನೊಂದು ವಾಟರ್ ಸ್ಕೀಮ್ ಆಗಲಿ, ನೀರು ಸರಬರಾಜು ಆಗಲಿ ಅದನ್ನು ಮಾಡುವಂಥ ಕೆಲಸ ಈ ಇಲಾಖೆಯದ್ದು ಆದರೆ ನಾನು ನೊಂದ ಮನಸ್ಸಿನಿಂದ ಹೇಳುತ್ತೇನೆ, ಇವತ್ತು ಈ ಇಲಾಖೆಯಲ್ಲಿ ಕಳೆದ ೮-೯ ತಿಂಗಳಿಂದ ಛೇರ್ಮನ್ ಇಲ್ಲ, ಎಂ.ಡಿ. ಇಲ್ಲ.

(ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಬೋರ್ಡ್‌ನಲ್ಲಿ ನಾನ್ ಅಫಿಶಿಯಲ್ ಮೆಂಬರ್ಸ್ ಇಲ್ಲ. ಮಾನ್ಯ ಸಚಿವರು ಹೇಳಬಹುದು: ಛೇರ್ಮನ್ ಇದ್ದಾರೆ. ಎಂ. ಡಿ. ಇದ್ದಾರೆ ಎಂದು. ಐ. ಎ. ಎಸ್. ಅಧಿಕಾರಿಗಳು ಛೇರ್ಮನ್ ಆಗಬಹುದು, ಆದರೆ ಎಂ. ಡಿ. ಆಗುವುದಕ್ಕೆ ಸಾಧ್ಯ ಇದೆಯಾ ? ಒಬ್ಬ ತಾಂತ್ರಿಕ ಅಧಿಕಾರಿ ಅಲ್ಲಿರಬೇಕು. ಅಲ್ಲಿ ಒಬ್ಬ ಐ. ಎ. ಎಸ್. ಅಧಿಕಾರಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೂ ಅವರೇ ಛೇರ್ಮನ್, ವಾಟರ್ ಬೋರ್ಡ್‌ಗೂ ಅವರೇ ಎಂ. ಡಿ. ಎಂದರೆ ಅಲ್ಲಿ ಕೆಲಸ ಆಗಬೇಕೇ ಬೇಡವೇ ? ಸೂಪರಿಂಟೆಂಡಿಂಗ್ ಇಂಜಿನೀಯರ್‌ಗಳು ಇಲ್ಲ. ಬಹಳ ಕಡೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ಇನ್‌ಚಾರ್ಜ್ ಆಗಿದ್ದಾರೆ. ಮೊನ್ನೆ ಸಾವಿರಾರು ಟ್ರಾನ್ಸಫರ್‌ಗಳನ್ನು ಮಾಡಿದಿರಿ. ಆ ಸಮಯದಲ್ಲಿ ಇದು ಏಕೆ ನಿಮ್ಮ ಗಮನಕ್ಕೆ ಬಂದಿಲ್ಲ ? ಇವತ್ತು ಈ ಪ್ರಕಾರ ಈ ಇಲಾಖೆ ನಡೆದರೆ...

ಶ್ರೀ ಮಲ್ಲನಗೌಡ ಎಸ್. ಪಾಟೀಲ್.— ತಾವು ಸೂಚನೆ ನೀಡಬೇಕಿತ್ತು.

ಶ್ರೀ ಆರ್. ವಿ. ದೇಶಪಾಂಡೆ.— ಆದ್ದರಿಂದ ಮಾನ್ಯ ಸಚಿವರ ಅನುಭವಕ್ಕೆ ಇದು ಬಂದಿರಬಹುದು. ಎಲ್ಲೆಲ್ಲಿ ಹೋದರೂ ನೀರಿನ ಅಭಾವ ಇದೆ ಎಂದು ಹೇಳುತ್ತಾರೆ. ಇವತ್ತು ಇಂತಹ ಪರಿಸ್ಥಿತಿಯಲ್ಲಿ ಎಂ. ಡಿ. ಇಲ್ಲ, ಛೇರ್ಮನ್ ಇಲ್ಲವೆಂದರೆ ಯಾವ ಪ್ರಕಾರ ಕೆಲಸ ನಡೆಯಬಹುದು ? ಆದ್ದರಿಂದ ಯಾರನ್ನು ಬೇಕಾದರೂ ಹಾಕಿ, ಆದರೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿ ಕೇಂದ್ರ ಸರ್ಕಾರದ ಸಹಾಯದಿಂದ, ಸಾಕಷ್ಟು ಸ್ಕೀಮುಗಳನ್ನು ಜಾರಿಗೆ ತಂದಿದ್ದೇವೆ. ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ಸ್‌ನಿಂದ ಅರ್ಬನ್ ಏರಿಯಾಕ್ಕೆ ಕೇಂದ್ರಸರ್ಕಾರದ ಯಾವುದೇ ಸಹಾಯ ಬರುವುದಿಲ್ಲ ರಾಜ್ಯ ಸರ್ಕಾರ ಎಷ್ಟು ಬಜೆಟ್ ಪ್ರಾವಿಷನ್ ಮಾಡುತ್ತದೆ, ಅದರ ಮೇಲೆ ವಾಟರ್ ಬೋರ್ಡ್ ಎಲ್. ಐ. ಸಿ. ಯಿಂದ ಸಾಲ ತೆಗೆದುಕೊಂಡು ಈ ಸ್ಕೀಮುಗಳನ್ನು ಜಾರಿ ಮಾಡಬೇಕಾಗುತ್ತದೆ ಹೀಗಾಗಿ ನೀವು ಇವತ್ತು ಕೇಂದ್ರಸರ್ಕಾರಕ್ಕೆ ಮನವಿ ಮಾಡಿಕೊಳ್ಳಬೇಕಾಗುತ್ತದೆ. ರೂರಲ್ ಏರಿಯಾಕ್ಕೆ ಯಾವರೀತಿ ಕುಡಿಯುವ ನೀರಿನ ಅಭಾವವನ್ನು ದೂರ ಮಾಡುವುದಕ್ಕೆ ಸಹಾಯ ಕೊಡುತ್ತಾರೋ, ಅದೇ ಪ್ರಕಾರ ಅರ್ಬನ್ ಏರಿಯಾಕ್ಕೂ ಸಹ ಕೇಂದ್ರ ಸರ್ಕಾರ ಸಹಾಯ ಮಾಡಲು ಒಂದು ಶಾಸನ ಜಾರಿಗೆ ತರುವುದಕ್ಕೆ ಕೇಂದ್ರಕ್ಕೆ ತಾವು ಒತ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ತಮ್ಮ ಮುಂಗಡ ಪತ್ರದಲ್ಲಿ ಕೆಲವು ಹೊಸ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ, ಬಹಳ ಸಂತೋಷ ಮಾಡಿ. ಆದರೆ ಹಳೆಯ ಯೋಜನೆಗಳಾದ ಗದಗ್ ಬೆಟಗೇರಿ ಧಾರವಾಡ ಹುಬ್ಬಳ್ಳಿ, ಬೆಳಗಾವಿ, ಶಿರಸಿ ಇಲ್ಲೆಲ್ಲಾ ಯಾವ ಯಾವ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ; ಅವುಗಳನ್ನು ದಯಮಾಡಿ ಆದಷ್ಟು ಬೇಗ ಮುಗಿಸಿ. ನಮ್ಮ ಮಾನ್ಯ ಉಪನಾಯಕರು ಒಂದು ಪ್ರಶ್ನೆ ಕೇಳಿದರು. ನಮ್ಮ ತೀರ್ಥಹಳ್ಳಿಯಲ್ಲಿ ವಾಟರ್ ಸಪ್ಲೈ ಸ್ಕೀಮ್ ಬಗ್ಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದ್ದೇವೆ ಎಂದು ಸಚಿವರು ಹೇಳಿದರು, ಆ ಸ್ಕೀಮ್ ೫೦ ಲಕ್ಷದ್ದು. ಆದರೆ ಅದಕ್ಕೆ ಬಜೆಟ್ ಪ್ರಾವಿಷನ್ ಮಾಡಿರುವುದು ೫೦ ಸಾವಿರ. ಹೀಗಾದರೆ, ಯಾವುದೇ ಸ್ಕೀಮ್ ತೆಗೆದುಕೊಂಡರೂ, ಯಾವ ಪ್ರಕಾರ ಸ್ಕೀಮ್‌ಗಳು ಇಂಪ್ಲಿಮೆಂಟ್ ಮಾಡುವುದಕ್ಕಾಗುತ್ತದೆ? ಆದ್ದರಿಂದ ಎಲ್ಲೆಲ್ಲಿ ಹಳೆಯ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದೀರಿ; ಅಲ್ಲಿ ಆ ಸ್ಕೀಮುಗಳನ್ನು ಪ್ರಾಧಾನ್ಯತೆಯ ಮೇಲೆ ಇಂಪ್ಲಿಮೆಂಟ್ ಮಾಡಿ. ಇಲ್ಲದೇಹೋದರೆ, ಅದರ ಕಾಸ್ಟ್ ಜಾಸ್ತಿಯಾಗುತ್ತದೆ. ಇವೆಲ್ಲಾ ಯೋಜನೆಗಳಿಗೂ ಸಾಮಾನ್ಯ ಜನತೆಯೂ ಹಣ ಕೊಡಬೇಕು. ಡಿಲೇ ಆದರೆ, ಸಾಮಾನ್ಯ ಜನತೆಯ ಮೇಲೆ ಅದರ ಹೊರೆ ಬೀಳುತ್ತದೆ. ಇವತ್ತು ಮುನಿಸಿಪಾಲಿಟಿಗಳಲ್ಲಿ ಹಣ ಇಲ್ಲ. ಯಾವುದೇ ಸ್ಕೀಂ ತೆಗೆದುಕೊಳ್ಳಿ ; ೨೦ ಸಾವಿರ ಪಾಪ್ಯುಲೇಷನ್ ಇದ್ದರೆ, ಅಲ್ಲಿಗೆ ರಾಜ್ಯಸರ್ಕಾರ ಹಣ ಪ್ರಾವಿಷನ್ ಮಾಡುತ್ತದೆ. ೨೦ ಸಾವಿರಕ್ಕಿಂತ ಹೆಚ್ಚು ಪಾಪ್ಯುಲೇಷನ್ ಇದ್ದರೆ, ಮುನಿಸಿಪಾಲಿಟಿಗಳು ಮೂರನೇ ಒಂದು ಭಾಗದಷ್ಟು ಹಣವನ್ನು ಪ್ರಾವಿಜನ್ ಮಾಡಬೇಕು. ಇವತ್ತು ಯಾವ ಮುನಿಸಿಪಾಲಿಟಿಗಳಲ್ಲಿ ಹಣ ಇದೆ ? ನಾವು ಕೆಲವು ಮುನಿಸಿಪಾಲಿಟಿಗೆ ೧೦ ಲಕ್ಷ ರೂಪಾಯಿಗಳ ಡೆವಲಪ್‌ಮೆಂಟ್ ಗ್ರಾಂಟ್ ಕೊಟ್ಟೆವು. ಇವತ್ತು ಮುನಿಸಿಪಾಲಿಟಿಗಳಲ್ಲಿ ಹಣ ಇಲ್ಲ, ನಿಮ್ಮ ಕಡೆ ಹಣ ಇಲ್ಲ, ವಾಟರ್ ಬೋರ್ಡ್‌ಗಳಲ್ಲಿ ಅಧಿಕಾರಿಗಳು ಇಲ್ಲ. ಹಾಗಾದರೆ, ಕುಡಿಯುವ ನೀರಿನ ಅಭಾವವನ್ನು ನೀಗಿಸುವ ಸಲುವಾಗಿ ಯಾವ ಪ್ರಕಾರ ಕೆಲಸ ನಡೆಯುತ್ತದೆ ? ಮೊನ್ನೆ ನಾನು ಬೆಳಗಾಂನಲ್ಲಿದ್ದೆ, ೨೬ನೇ ತಾರೀಖಿನಿಂದ ಬೆಳಗಾಂನಲ್ಲಿ ನೀರು ಸಿಕ್ಕುವುದಿಲ್ಲವೆಂದು ಪತ್ರಿಕೆಯಲ್ಲಿತ್ತು. ಅಲ್ಲಿ ಅಷ್ಟೇ ಅಲ್ಲ, ಎಲ್ಲಾ ಕಡೆಯೂ ಇದೇ ಪರಿಸ್ಥಿತಿ ಇದೆ. ಹೀಗಾಗಿ ಇವತ್ತು ಟಾಪ್ ಪ್ರಿಯಾರಿಟಿ ಮೇಲೆ ಈ ಕುಡಿಯುವ ನೀರಿನ ಯೋಜನೆಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತೊಂದು ನಮ್ಮ ವಾಟರ್ ಟ್ಯಾಕ್ಸ್ ಏನಿದೆ, ಇದು ನಮ್ಮ ಮೆಯಿನ್‌ಟೆನೆನ್ಸ್‌ಗಿಂತ ಕಡಿಮೆ ಇದೆ. ಹಿಂದೆ ನಾವು ಕೆಲವು ಕಡೆ ಪ್ರಪೋಸಲ್ ಮಾಡಿದ್ದೆವು. ನಾನು ವಾಟರ್ ಬೋರ್ಡ್‌ನಿಂದ ಲಾಭ ಪಡೆಯಬೇಕು ಎಂದು ಹೇಳುವುದಿಲ್ಲ. ಆದರೆ ಕೊನೆಯ ಪಕ್ಷ ನೋ ಲಾಸ್. ನೋ ಪ್ರಾಫಿಟ್‌ನಲ್ಲಾದರೂ ನಡೆಯಬೇಕು. ೧೦ ಲಕ್ಷ ರೂಪಾಯಿ ಖರ್ಚು ಮಾಡಿ, ಕೇವಲ ೪-೫ ಲಕ್ಷ ರೂಪಾಯಿಗಳು ಬರುವಂತಾದರೆ ಏನು ಪ್ರಯೋಜನ ಆದ್ದರಿಂದ ಯಾವ ಕಾರ್ಪೊರೇಷನ್‌ಗಳಲ್ಲಿ ಈ ಸಮಸ್ಯೆ ಇದೆ, ಇದನ್ನು ಬಗೆಹರಿಸಬೇಕಾಗಿದೆ. ಮತ್ತು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲಿ ಬಜೆಟ್ ಪ್ರಾವಿಷನ್ ವಾಟರ್ ಬೋರ್ಡಿನದು ೬-೭-೮ ಕೋಟಿ ಇದೆ. ನಾವು ಅಧಿಕಾರದಲ್ಲಿದ್ದಾಗ, ೧೫ ಕೋಟಿ ಬಜೆಟ್ ಪ್ರಾವಿಷನ್ ಮಾಡಿಕೊಟ್ಟಿದ್ದೆವು. ಯಾವಾಗಲೂ ಇಷ್ಟು ಹಣ ಕೊಟ್ಟಿರಲಿಲ್ಲ, ಆದರೆ ನಾವು ಕೊಟ್ಟಿದ್ದೆವು. ಇದರ ಒಂದೇ ಒಂದು ಉದ್ದೇಶ ಎಂದರೆ ಅರ್ಬನ್ ಏರಿಯಾದಲ್ಲಿರುವ ವಾಟರ್ ಸ್ಕೇರ್ಸಿಟಿ ಏನಿದೆ, ಅದು ದೂರವಾಗಬೇಕು. ಆದಕ್ಕೋಸ್ಕರ ತಾವು ಸಹ ಈ ಒಂದು ಇಲಾಖೆಗೆ ಹೆಚ್ಚಿನ ಚಾಲನೆ ಕೊಡ

ಬೇಕಾದರೆ, ಇದು ಕ್ರಿಯಾಶೀಲವಾಗಬೇಕಾದರೆ, ಇವರಿಂದ ವಾಟರ್‌ಸಪ್ಲೈ ಸ್ಕೀಮ್ಸನ್ನು ಬಹಳ ದೊಡ್ಡ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕಾದರೆ, ಸೆಂಟ್ರಲ್ ಅಸಿಸ್ಟೆನ್ಸ್ ತೆಗೆದುಕೊಳ್ಳಬೇಕು, ನಿಮ್ಮ ಸರಕಾರದಿಂದ ಸಹ ಹೆಚ್ಚಿನ ಹಣ ಕೊಡಬೇಕು. ಮತ್ತು ಟೈಮ್ ಬೌಂಡ್ ಪ್ರೋಗ್ರಾಂ ಮೂಲಕ ಈ ಕೆಲಸ ಮುಗಿಸಬೇಕಾಗುತ್ತದೆ, ಈ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಬೇಕು. ತಾವು ತೆಗೆದುಕೊಳ್ಳುತ್ತೀರೆಂಬ ವಿಶ್ವಾಸ ಇದೆ.

ನಾನು ಅರ್ಬನ್ ಸೀಲಿಂಗ್ ವಿಚಾರದಲ್ಲಿ ಒಂದೆರಡು ವಿಚಾರ ಹೇಳುತ್ತೇನೆ. ಈಗ ಏನಾಗಿದೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳಿಂದ ಹಿಡಿದುಕೊಂಡು ಎಲ್ಲರೂ ಕೂಡಾ, ಹೆಗಡೆ ಮತ್ತು ಬೊಮ್ಮಾಯಿಯವರ ಸರಕಾರದಲ್ಲಿ ಏನೋ ಮಾಡಿದ್ದಾರೆ, ಏನೋ ಮಾಡಿದ್ದಾರೆ ಎಂದು ಹೇಳುತ್ತಾ ಬಂದರು. ಇವತ್ತು ನಿಮ್ಮ ರಿಪೋರ್ಟನ್ನೇ ನಿಮ್ಮ ಕೈಯಲ್ಲಿ ಕೊಡುತ್ತೇನೆ. ಯಾವ ಲ್ಯಾಂಡ್‌ಗೆ ಎಕ್ಸೆಂಪ್ಷನ್ ಕೊಡುತ್ತೇವೆ ಎಂದರೆ, ಅಗ್ರಿಕಲ್ಚರ್‌ಗೆ ಕೊಡುತ್ತೇವೆ ರೆಸಿಡೆನ್ಷಿಯಲ್‌ಗೆ ಕೊಡುತ್ತೇವೆ ಇಂಡಸ್ಟ್ರಿಯಲ್‌ಗೆ ಕೊಡುತ್ತೇವೆ. ಡೈರಿಗಳಿಗೆ ಕೊಡುತ್ತೇವೆ. ಹೀಗೆಲ್ಲಾ ಎಕ್ಸೆಂಪ್ಷನ್ ಕೊಡುತ್ತಾ ಬಂದಿದ್ದೇವೆ. ನಿಮ್ಮ ರಿಪೋರ್ಟ್ ಪ್ರಕಾರ ೫೯೩೫ ಹೆಕ್ಟೇರ್‌ಗೆ ಎಕ್ಸೆಂಪ್ಷನ್ ಕೊಡಲಾಗಿದೆ. ನಿಮ್ಮ ರಿಪೋರ್ಟ್‌ನ ಪೇಜ್ ೨೪ ನೋಡಿ. ೧೯೮೮-೮೯ರ ರಿಪೋರ್ಟ್. ಅದರಲ್ಲಿ ೩೧-೩-೧೯೮೯ರ ತನಕ ಅರ್ಬನ್ ಸೀಲಿಂಗ್ ಆಕ್ಟ್ ಪ್ರಕಾರ ೫೯೩೫ ಹೆಕ್ಟೇರ್‌ಗೆ ಎಕ್ಸೆಂಪ್ಷನ್ ಕೊಡಲಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಕಳೆದ ಡಿಸೆಂಬರ್‌ನಿಂದ ಈಚೆಗೆ ಎಷ್ಟಾಗಿದೆ ಹೇಳಿರಿ.

ಶ್ರೀ ಆರ್. ವಿ. ದೇಶಪಾಂಡೆ.—ಅದಕ್ಕೆ ಬರುತ್ತೇನೆ. ಈ ಕಾಯಿದೆ ೭೬ನೇ ಇಸವಿಯಲ್ಲಿ ಜಾರಿಗೆ ಬಂತು. ೧೯೭೬ನೇ ಇಸವಿಯಿಂದ ೧೯೮೯ನೇ ಇಸವಿಯವರೆಗೆ ಹದಿಮೂರು ವರ್ಷದಲ್ಲಿ ಅಗ್ರಿಕಲ್ಚರಲ್ ರೆಸಿಡೆನ್ಷಿಯಲ್, ಇಂಡಸ್ಟ್ರಿಯಲ್ ಎಲ್ಲಾ ಸೇರಿ ವಿನಾಯತಿ ಕೊಟ್ಟ ಭೂಮಿಯ ಲೆಕ್ಕ ೫೯೩೫ ಹೆಕ್ಟೇರ್ಸ್. ರಾಷ್ಟ್ರಪತಿ ಆಡಳಿತದಲ್ಲಿ ಮತ್ತು ನಿಮ್ಮ ನಾಲ್ಕು ತಿಂಗಳ ಆಡಳಿತದಲ್ಲಿ ಎರಡೂ ಸೇರಿಸಿ ಕೊಟ್ಟಿರುವ ಎಕ್ಸೆಂಪ್ಷನ್ ೨೪೦೧ ಎಕರೆಗಳು. You have exempted 2401 acres of land in one year. This is the biggest scandal of the year. ಇದರಲ್ಲಿ ನಿಮ್ಮ ಕಾಲದಲ್ಲಿ ಎಷ್ಟಾಗಿದೆ, ರಾಷ್ಟ್ರಪತಿಯವರ ಆಡಳಿತದ ಕಾಲದಲ್ಲಿ ಎಷ್ಟಾಗಿದೆ ಅದು ನನಗೆ ಗೊತ್ತಿಲ್ಲ. ಇದನ್ನು ನಾನು ಕೊಡುವುದಕ್ಕೆ ಸಾಧ್ಯ ಇಲ್ಲ. ನೀವು ಕೊಡಬೇಕಾಗುತ್ತದೆ.

You have said in your report of 1988-89 (Page 24).—

"Out of acquired land, 424 hectare have been allotted to various States and Central Undertakings/public Agencies for public purposes, land to the extent of 5935 hectares has been exempted under the provisions of the Urban Ceiling Act."

This is 31-3-1989 report.

I would like to read from 1989-90 annual report i.e., Page 28. It reads thus.—

"Sofar 8336 hectares of excess vacant land have been exempted"

ರಾಷ್ಟ್ರಪತಿಗಳ ಆಡಳಿತ ಕಾಲದಲ್ಲಿ ಹಾಗೂ ನಿಮ್ಮ ನಾಲ್ಕು ತಿಂಗಳ ಆಡಳಿತದಲ್ಲಿ ೨೪೦೧ ಎಕರೆ ಲ್ಯಾಂಡ್‌ಗೆ ಎಕ್ಸೆಂಪಷನ್ ಕೊಟ್ಟಿದ್ದೀರಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಜನವರಿ ೧೯೯೦ ರಿಂದ ಈವರೆಗೆ ನಾವು ಎಷ್ಟು ಎಕ್ಸೆಂಪ್ಷನ್ ಕೊಟ್ಟಿದ್ದೇವೆ ಎಂದು ಹೇಳುವುದಕ್ಕೆ ಸಾಧ್ಯ ಇದೆಯೋ ? ನಾವು ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಕೊಟ್ಟಿದ್ದೇವೆ ಹೇಳುವುದಕ್ಕೆ ನಿಮಗೆ ಸಾಧ್ಯವೇ ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ.—ಅದನ್ನು ನೀವು ಹೇಳಬೇಕು. ನೀವು ಹೇಳುವುದಕ್ಕೂ ಸಾಧ್ಯ ಇಲ್ಲ. ಕಾರಣ ಆ ಇಲಾಖೆ ಮುಖ್ಯಮಂತ್ರಿಯವರ ಕಡೆಗೆ ಇದೆ. ಇದಕ್ಕೆ ಮುಖ್ಯಮಂತ್ರಿಯವರು ಉತ್ತರ ಕೊಡಬೇಕು. ನಾನು ಅನ್ಯುಯಲ್ ರಿಪೋರ್ಟ್ ಬೇಸ್ ಮೇಲೆ ಮಾತನಾಡುತ್ತಿದ್ದೇನೆ. ಅನ್ಯುಯಲ್ ರಿಪೋರ್ಟ್ ಪ್ರಕಾರ ಈ ಅವಧಿಯಲ್ಲಿ ೨೪೦೧ ಎಕರೆಗೆ ಎಕ್ಸೆಂಪಷನ್

ಕೊಟ್ಟಿದ್ದೀರಿ. ಅದರಲ್ಲಿ ನೀವು ಎಷ್ಟು ಕೊಟ್ಟಿದ್ದೀರಿ, ಪ್ರೆಸಿಡೆಂಟ್ ರೂಲ್‌ನಲ್ಲಿ ಎಷ್ಟು ಕೊಟ್ಟಿದ್ದಾರೆ ಅದು ಗೊತ್ತಿಲ್ಲ. ಅದನ್ನು ನೀವು ಹೇಳಬೇಕು. You have to inform the House. ಯಾವಾಗ ಕೊಟ್ಟಿರಿ, ಯಾರಿಗೆ ಕೊಟ್ಟಿರಿ ಎಂದು ಹೇಳಬೇಕಾಗುತ್ತದೆ. ನಮ್ಮ ಕಾಲದಲ್ಲಿ ಏನೋ ಆಯಿತು ಎಂದು ಹೆಜ್ಜೆ ಹೆಜ್ಜೆಗೆ ಹೇಳುತ್ತಾ ಬಂದಿರಿ. ಇದರ ಮೇಲೆ ಒಂದು ವೈಟ್ ಪೇಪರ್ ತೆಗೆದುಕೊಂಡು ಬನ್ನಿ. ಕಳೆದ ೧೫ ವರ್ಷದಲ್ಲಿ ಯಾವ ಮುಖ್ಯಮಂತ್ರಿಗಳೂ ಈ ರೀತಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಕಳೆದ ಒಂದು ವರ್ಷದಲ್ಲಿ ಆ ಕೆಲಸ ಆಗಿದೆ. ಅದನ್ನು ಗೌರ್ನರ್ ಮಾಡಿದ್ದಾರೋ, ನಿಮ್ಮ ಸರ್ಕಾರದವರು ಮಾಡಿದ್ದಾರೊ ಗೊತ್ತಿಲ್ಲ. ಆದರೆ ಮಾಡಿದರು. ನಿಮ್ಮ ರಿಪೋರ್ಟ್ ಪ್ರಕಾರ ಹೇಳುತ್ತಿದ್ದೇನೆ. ಫಿಗರ್ ರಾಂಗ್ ಇದ್ದರೆ, ಫಿಗರ್ ರಾಂಗ್ ಇದೆ ಎಂದು ಹೇಳಿ, ಇದರಲ್ಲಿ ಏನು ಕಾಣಿಸುತ್ತದೆ ಅದನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ತಾವು ಇದರ ಬಗ್ಗೆ ಒಂದು ವೈಟ್ ಪೇಪರನ್ನು ತನ್ನಿ, ಆ ಕಾಯಿದೆ ಯಾವಾಗ ಬಂತು ಎಷ್ಟು ಎಕ್ಸೆಂಪ್ಷನ್ ಕೊಟ್ಟಿದ್ದೀರಿ ಎಂಬುದರ ಬಗ್ಗೆ ಒಂದು ವೈಟ್ ಪೇಪರ್ ತೆಗೆದುಕೊಂಡು ತನ್ನಿ. ಸೆನ್ಸಿಟಿವ್ ಏರಿಯಾ ಏನಾಗಿದೆ ಎಂದು ನೋಡೋಣ. ಕೇವಲ ಆಪಾದನೆ ಮಾಡಿ ನಮ್ಮ ಮೇಲೆ ನೀವು ನಿಮ್ಮ ಮೇಲೆ ನಾವು ಈ ರೀತಿ ಆಪಾದನೆ ಮಾಡಿದರೆ ಯಾವ ಸಮಸ್ಯೆಯನ್ನೂ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕೆಂದು ನಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

Most of the cases relating to urban ceiling are delt with discretion. Whenever there is bardship, generally, we grant exemption. We liberally consider their hardships.

ನೂರಾರು ಸಮಸ್ಯೆಗಳು ನಿಮ್ಮ ಮುಂದೆ ಬರುತ್ತದೆ. ನಾಳೆ ನೀವು ಎಕ್ಸೆಂಪ್ಷನ್ ಕೊಡಬೇಕಾಗುತ್ತದೆ. ಟೋಟಲ್ ಆಗಿ ಇದನ್ನು ಕ್ಲೋಸ್ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಬಹಳ ಜನ ಬರುತ್ತಾರೆ, ಒಟ್ಟು ೨ ಸಾವಿರ ಎಕ್ಸೆಂಪ್ಷನ್ ಕೊಟ್ಟಿದ್ದೀರಿ, ರಾಜ್ಯಪಾಲರ ಆಳ್ವಿಕೆಯಲ್ಲಿ ಎಷ್ಟು, ನಿಮ್ಮ ಆಳ್ವಿಕೆಯಲ್ಲಿ ಎಷ್ಟೆಂಬುದನ್ನು ಇದರಲ್ಲಿ ಹೇಳಲಿಲ್ಲ. ಈ ರಾಜ್ಯದಲ್ಲಿ ಎಷ್ಟೆಷ್ಟು ಕೆಲಸ ಆಗಿದೆ ಎಂಬುದು ಜನತೆಗೆ ಗೊತ್ತಾಗಬೇಕು. ಗ್ರೂಪ್ ಹೌಸಿಂಗ್ ಸ್ಕೀಮು ಬಗ್ಗೆ ತಾವು ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇವತ್ತು ಈ ಮನೆಗಳ ಸಮಸ್ಯೆ ಬಹಳ ಜ್ವಲಂತವಾಗಿದೆ. ಆದರ ಸಲುವಾಗಿ ಬಡವರಿಗೆ ಮಧ್ಯಮ ವರ್ಗದವರಿಗೆ ಇಂತಹ ಸ್ಕೀಮುಗಳನ್ನು ತಾವು ಪ್ರೋತ್ಸಾಹ ಮಾಡಿದರೆ ಬಡವರು ಮನೆ ಕಟ್ಟಿಕೊಳ್ಳಲಿಕ್ಕೆ ಸಾಧ್ಯವಾಗಬಹುದು. ನೂರಾರು ಎಕರೆ ಲ್ಯಾಂಡ್ ಸರ್ಕಾರದ ಆಧೀನಕ್ಕೆ ಬರಬೇಕಾಗಿದೆ. ಅದು ಬಂದಿಲ್ಲವೆಂದು ಈ ವರದಿಯಲ್ಲಿ ಹೇಳಿದ್ದಾರೆ. ಅದನ್ನು ಸರ್ಕಾರ ಇನ್ನೂ ಆಧೀನದಲ್ಲಿ ತೆಗೆದುಕೊಂಡಿಲ್ಲ, ಆದಷ್ಟು ಬೇಗ ಸರ್ಕಾರದ ಆಧೀನದಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. This is an excess land and it should be acquired. ಅದೇ ಜಾಗವನ್ನು ಬಿ.ಡಿ.ಎ.ಗೆ ಕೊಡಬಹುದು, ಕಾರ್ಪೊರೇಷನ್ನಿಗೆ ಕೊಡಬೇಕು ಆ ಒಂದು ಸ್ಥಳದಿಂದ ನಿವೇಶನ, ಮನೆಹಂಚಿಕೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಈ ನಮ್ಮ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟಿನ ಅಡಿಯಲ್ಲಿರುವ ಸಂಸ್ಥೆ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಇವತ್ತು ನಿಜವಾಗಿ ಅದು ಬೆಂಗಳೂರು ಸಿಟಿ ಇರಬಹುದು, ಬೆಳಗಾಂ ಇರಬಹುದು, ಬೆಳಗಾಂ ಇರಬಹುದು, ಕಾರವಾರ ಇರಬಹುದು, ಅದು ಸಿಸ್ಟಮ್ಯಾಟಿಕ್ ಆಗಿ ಗ್ರೋಥ್ ಆಗಬೇಕಾಗುತ್ತದೆ. ಅಂಡರ್‌ಗ್ರೌಂಡ್‌ನಲ್ಲಿ ಕಾರ್ ಪಾರ್ಕಿಂಗ್ ಮಾಡುತ್ತೇವೆಂದು ಅಪ್ರೂವಲ್ ಪ್ಲಾನ್ ತೆಗೆದುಕೊಳ್ಳುತ್ತಾರೆ. ಆದರೆ ಅದರಲ್ಲಿ ಷಾಪಿಂಗ್ ಕಾಂಪ್ಲೆಕ್ಸ್ ಮಾಡುತ್ತಾರೆ. ಇದು ನಮಗೂ ನಿಮಗೂ ಗೊತ್ತಾಗುವುದಿಲ್ಲ, ಆದರೆ ನಮ್ಮ ಅಧಿಕಾರಿಗಳು ಶಾಮೀಲಾಗಿರುತ್ತಾರೆ. ಪ್ಲಾನ್ ಅಪ್ರೂವಲ್ ಮಾಡುವಾಗ ಅದು ಅಂಡರ್‌ಗ್ರೌಂಡ್ ಎಂದು ಅಪ್ರೂವಲ್ ಆಗುತ್ತದೆ. ಬೆಂಗಳೂರಿನಲ್ಲಿ ಉದಾಹರಣೆಗೆ ಎಂ.ಜಿ.ರೋಡಿಗೆಹೋಗಿ ಆನಂದರಾವ್‌ಸರ್ಕಲ್ಲಿಗೆ ಹೋಗಿ, ಕೆಂಪೇಗೌಡಸರ್ಕಲ್‌ಗೆ ಹೋಗಿ ನೋಡಿ, ಎಷ್ಟೋ ಕಡೆ ಅಂಡರ್‌ಗ್ರೌಂಡ್‌ನಲ್ಲಿ ಕಾರು ಪಾರ್ಕಿಂಗ್‌ಗೆ ಎಂದು ಏನು ಪ್ಲಾನ್ ಮಂಜೂರು ಮಾಡಿದ್ದೀರಿ, ಅಲ್ಲಿ ದೊಡ್ಡ ದೊಡ್ಡ ಷಾಪಿಂಗ್ ಕಾಂಪ್ಲೆಕ್ಸ್‌ಗಳು ಬಂದಿವೆ. ಆದ್ದರಿಂದ ಈ ಇಲಾಖೆಯು ಸಹ ಪ್ಲಾನ್ಸ್ ಮತ್ತು ಲೇಔಟ್‌ಗಳನ್ನು ಅಪ್ರೂವಲ್ ಮಾಡುವಾಗ ಬಹಳ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ. ಇದರಿಂದ ಟ್ರಾಫಿಕ್ ಕಂಡಿಷನ್ ಏನಾಗಬಹುದೆಂದು ಯೋಚನೆ ಮಾಡಬೇಕಾಗುತ್ತದೆ. ಅದನ್ನು ಬಹಳ ಸ್ಟ್ರಿಕ್ಟ್ ಆಗಿ ಫಾಲೋ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಅದು ಅಧಿಕಾರಿಗಳ ಜವಾಬ್ದಾರಿ ಮತ್ತು ಕಟ್ಟುನಿಟ್ಟಾಗಿ ಅವರು ಜಾರಿಗೆ ತರುತ್ತಾರೋ ಇಲ್ಲವೋ ಎಂದು ತಾವು ನೋಡಬೇಕಾಗುತ್ತದೆ. ನಮ್ಮ ಚೇಂಜ್ ಆಫ್ ಲ್ಯಾಂಡ್ ಯ್ಯೂಸ್ ರೂಲ್ಸ್, ಭೂ ಬದಲಾವಣೆ ಕಾನೂನನ್ನು ನಾನೇ ಈ ಸದನದಲ್ಲಿ ಇಂಟರ್‌ಡ್ಯೂಸ್ ಮಾಡಿದೆ. ಇವತ್ತು

ಮೊದಲು ಏನಾಗುತ್ತಿತ್ತು ಎಂದರೆ, ಯಾವುದೋ ಕಮರ್ಷಿಯಲ್‌ಯಿಂದ ಒಂದು ರೆಸಿಡೆನ್ಸಿಯಲ್ ಲ್ಯಾಂಡ್ ಯೂಸ್ ಮಾಡಬೇಕಾದರೆ ಪ್ರಸ್ತಾವನೆ ಬರುತ್ತಿತ್ತು. ಮಂತ್ರಿಗಳು "ಎಸ್" ಅನ್ನುತ್ತಿದ್ದರು.

೪-೨೦ ಪಿ. ಎಂ.

ಈ ಪ್ರಕಾರ ಆದರೆ ಫ್ಲಡ್ ಗೇಟ್ ಓಪನ್ ಆದಹಾಗೆ ಆಗುತ್ತದೆ. ಇದು ಸಿಸ್ಟಮ್ಯಾಟಿಕ್ಕಾಗಿ ಆಗಬೇಕೆಂದು ಹೇಳಿ ಯಾರಿಗೆ ಭೂ ಬದಲಾವಣೆ ಆಗಬೇಕೋ ಅವರು ಒಂದು ಅರ್ಜಿ ಕೊಡಬೇಕು, ಆ ಅರ್ಜಿ ಪರಿಶೀಲನೆ ಆದ ನಂತರ ಅದು ಲೋಕಲ್ ಪೇಪರ್‌ನಲ್ಲಿ ಪಬ್ಲಿಷ್ ಆಗಿ ಅಬ್ಜೆಕ್ಷನ್ಸ್ ಕಾಲ್‌ಫರ್ ಮಾಡಬೇಕು. ಆ ನಂತರ ಅಬ್ಜೆಕ್ಷನ್ಸ್ ಹಿಯರ್ ಮಾಡಿ ಅದು ಸರ್ಕಾರಕ್ಕೆ ಬರಬೇಕು. ಆಮೇಲೆ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕು, ಆ ನಂತರ ಬದಲಾವಣೆ ಮಾಡಬಹುದೆಂದು ನಾನು ತಿದ್ದುಪಡಿ ತಂದೆ. ಅಡ್ವಕೇಟ್ ಜನರಲ್ ಕೂಡಾ ಫೈಲ್ ಮೇಲೆ ತಮ್ಮ ಒಪೀನಿಯನ್ ಕೊಟ್ಟರು. ಸರ್ಕಾರಕ್ಕೆ ಕೂಡಾ ಚೇಂಜ್ ಆಫ್ ಲ್ಯಾಂಡ್ ಮಾಡುವ ಅಧಿಕಾರ ಇಲ್ಲ. ಇದನ್ನು ನೀವು ಏನು ಮಾಡಿದಿರಿ ಸ್ವಾಮಿ ? ಆಗ ನಾವು ತಂದಿದ್ದಕ್ಕೆ ಸಿಪಿಎಂ. ಸಿಪಿಐ ಹಾಗೂ ಬಿಜೆಪಿ ನವರೂ ನಮಗೆ ಸಪೋರ್ಟ್ ಮಾಡಿದರು. ಆದರೆ ತಾವು ವಿರೋಧ ಮಾಡಿದಿರಿ. ಇವಾಗಿ ೧ ವರ್ಷ ೮ ತಿಂಗಳು ಆಯಿತು ; ಸಾವಿರಾರು ಜನರು ಸಫರ್ ಮಾಡುತ್ತಿದ್ದಾರೆ. ಕೆಲವು ಪ್ರಪೋಸಲ್ಸ್ ಸೆಂಟ್ರಲ್ ಗೌರ್ನ್‌ಮೆಂಟ್‌ದು ಇವೆ. ಕೆಲವು ಪ್ರಪೋಸಲ್ಸ್ ಕಾರ್ಪೋರೇಷನ್‌ದು ಇವೆ ಕೆಲವು ಇನ್‌ಸ್ಟಿಟ್ಯೂಷನ್ ಪ್ರಪೋಸಲ್ಸ್ ಇವೆ. ಇವರ ಬಗ್ಗೆ ನೀವು ಏನು ಮಾಡಿದಿರಿ? ನಮ್ಮ ಸರ್ಕಾರ ವಜಾ ಆದ ನಂತರ ರಾಷ್ಟ್ರಪತಿ ಆಡಳಿತದಲ್ಲಿ ಇದೇ ಬಿಲ್‌ಗೆ ಆರ್ಡಿನೆನ್ಸ್ ಇಷ್ಯೂ ಮಾಡಿಸುವುದಕ್ಕೆ ರಾಷ್ಟ್ರಪತಿಗಳಿಗೆ ಕಳುಹಿಸಿದ್ದೀರಿ. ಆದರೆ ಆರ್ಡಿನೆನ್ಸ್ ಇಷ್ಯೂ ಆಗಲಿಲ್ಲ. ಇವೊತ್ತು ನಿಮಗೆ ಭಯ ಇದೆ. ಏನೆಂದರೆ ಇಲ್ಲಿ ನಾವೇ ಆಗ ವಿರೋಧ ಮಾಡಿ ಮತ್ತೆ ಈಗ ಹೇಗೆ ಅದನ್ನು ತರುವುದು ಎಂದು ರಾಷ್ಟ್ರಪತಿ ಆಡಳಿತ ಕಾಲದಲ್ಲಿ ಆರ್ಡಿನೆನ್ಸ್ ಇಷ್ಯೂ ಆಗಲಿಲ್ಲ. ನೀವೇ ಹಿಂದೆ ವಿರೋಧ ಮಾಡಿದ್ದೀರಿ ಎನ್ನುವ ಭಯ ನಿಮಗೆ. ಅದು ಇವತ್ತು ಜನರ ಹಿತಕ್ಕಾಗಿ ಬರಬೇಕಾಗಿದೆ ನೀವು ಮತ್ತೆ ತರುವುದಾದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಆ ದೃಷ್ಟಿಯಿಂದ ಈ ಛೇಂಜ್ ಆಫ್ ಲ್ಯಾಂಡ್ ತಿದ್ದುಪಡಿ ಏನು ನಾವು ತಂದಿದ್ದೆವು ಅದನ್ನು ಈ ಮನೆಯಲ್ಲಿ ಬೇಗ ತರುವುದಕ್ಕೆ ಪ್ರಯತ್ನ ಮಾಡಿ. ಇವತ್ತು ಬಹಳ ಜನರಿಗೆ ತೊಂದರೆಯಾಗಿದ್ದು ಇದು ಜ್ವಲಂತ ಸಮಸ್ಯೆ ಆಗಿದೆ. ಈ ವಿಷಯ ತಮಗೆ ಈಗಾಗಲೇ ಗೊತ್ತಾಗಿರಬಹುದು. ಆದ್ದರಿಂದ ಆದಷ್ಟು ಬೇಗ ಈ ಬಗ್ಗೆ ತಿದ್ದುಪಡಿಯನ್ನು ಈ ಮನೆಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್ ಆಗಿವೆ. ಅವನ್ನು ನಾವು ಮಾಡಿದ್ದೇವೆ. ೨೦ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್ ಆಗಿದ್ದು. ಒಂದರಲ್ಲೂ ಸರಿಯಾದ ಹಣದ ವ್ಯವಸ್ಥೆ ಇಲ್ಲ. ಸ್ಟಾಫ್ ಇಲ್ಲ. ಕೆಲವರಿಗೆ ಕೆಲಸಾನೂ ಇಲ್ಲ. ನಾನೇ ಸ್ವತಃ ಮಂತ್ರಿ ಆಗಿದ್ದಾಗ ಹೇಳಿದೆ. ಕೊಡಗಿನಲ್ಲಿ, ಬೀದರ್‌ನಲ್ಲಿ ಬಳ್ಳಾರಿಯಲ್ಲಿ, ಹಾಸನದಲ್ಲಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಬೇಕೇ ಎಂದು ಕೇಳಿದೆ. ಮುಂಚೆ ಟೌನ್ ಪ್ಲಾನಿಂಗ್ ಅಥಾರಿಟಿ ಇತ್ತು. ಈಗ ಇವೆಲ್ಲವನ್ನೂ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿ ಬಿಳಿ ಆನೆ ಸಾಕಿದಹಾಗೆ ಆಗಿದೆ ಇವುಗಳ ಅವಶ್ಯಕತೆ ನಮಗೆ ಇರಲಿಲ್ಲ. ಈಗ ಬೆಂಗಳೂರಿನಲ್ಲಿ ಬೇಕಾಗುತ್ತದೆ. ಇಲ್ಲಿ ಬಿಡಿಎ ಇದೆ. ಬೆಳಗಾಂನಲ್ಲಿ, ಮಂಗಳೂರಿನಲ್ಲಿ, ಮೈಸೂರು, ಗುಲ್ಬರ್ಗಾದಲ್ಲಿ ಬೇಕಾಗುತ್ತದೆ. ಆದರೆ ಕೊಡಗಿನಲ್ಲಿ, ಬಳ್ಳಾರಿಯಲ್ಲಿ, ಬೀದರ್‌ನಲ್ಲಿ ಏಕೆ ಬೇಕು? ಅಲ್ಲಿ ಏನು ಕೆಲಸ ಆಗಿದೆ ಎಂಬುದನ್ನು ತಾವೇ ನೋಡಿ. ನಿಮ್ಮ ವರದಿ ಪ್ರಕಾರವೇ ೧೯೮೯-೯೦ರಲ್ಲಿ ಸೈಟ್‌ಗಳನ್ನು ಹಂಚಿರತಕ್ಕದ್ದು ಎಷ್ಟು ? ಮಂಗಳೂರಿನಲ್ಲಿ ಹಾಸನದಲ್ಲಿ ಏನೂ ಹಂಚಿಲ್ಲ. ಮೈಸೂರಿನಲ್ಲಿ ಆಶಾ ಮಂದಿರ ಸ್ಕೀಮ್‌ನಲ್ಲಿ ಎಸ್‌ಸಿ, ಎಸ್‌ಟಿಗಳಿಗೆ ೨೭೦ ಮತ್ತು ಇ.ಡಬ್ಲ್ಯೂ.ಎಸ್.ನಲ್ಲಿ ೧೪೨೨ ಸೈಟ್ ಹಂಚಿದ್ದಾರೆ. ಇದೂ ಕೂಡಾ ಹೊಸ ಸ್ಕೀಮ್ ಏನೂ ಅಲ್ಲ. ಇದು ಹಳೇ ಸ್ಕೀಮ್. ಮತ್ತೆ ದಾವಣಗೆರೆಯಲ್ಲಿ ಏನೂ ಹಂಚಿಕೆಯಾಗಿಲ್ಲ. ಶಿವಮೊಗ್ಗದಲ್ಲಿ ಎಸ್‌ಸಿಎಸ್‌ಟಿಯವರಿಗೆ ೬೯ ಹಾಗೂ ಇಡಬ್ಲ್ಯುಎಸ್‌ಗೆ ೮೦ ರಂತೆ ಒಟ್ಟು ೧೪೯ ಸೈಟ್ ಹಂಚಿದ್ದಾರೆ. ಹುಬ್ಬಳ್ಳಿ-ಧಾರವಾಡದಲ್ಲಿ ಎಸ್‌ಸಿಎಸ್‌ಟಿಗೆ ೧೯ ಹಾಗೂ ಇತರರಿಗೆ ೬ ಸೈಟ್ ಕೊಟ್ಟಿದ್ದಾರೆ. ಎಂದರೆ ೨೦ ಅಥಾರಿಟಿಗಳ ಪೈಕಿ ಮೈಸೂರನ್ನು ಬಿಟ್ಟರೆ ಬೇರೆ ಅಥಾರಿಟಿಗಳಲ್ಲಿ ೧೦೦ ಸೈಟ್‌ಗಳು ಎಸ್‌ಸಿಎಸ್‌ಟಿಯವರಿಗೆ ಒಂದು ವರ್ಷದಲ್ಲಿ ಹಂಚಿಕೆಯಾಗಿಲ್ಲ. ಹಾಗೂ ೧೦೦೦ ಸೈಟ್‌ಗಳು ಇ.ಡಬ್ಲ್ಯೂ.ಎಸ್ ದರ್ಜೆಯವರಿಗೆ ಹಂಚಿಕೆಯಾಗಿಲ್ಲ. ಈ ಅಥಾರಿಟಿಗಳ ಕೆಲಸ ಏನು? ಇವತ್ತು ಈ ಡೆವಲಪ್‌ಮೆಂಟ್ ಅಥಾರಿಟಿಗಳು ನಿವೇಶನ ಕೊಡುತ್ತೇವೆಂದು ಹೇಳಿ ಅಡ್ವರ್‌ಟೈಸ್‌ಮೆಂಟ್ ಮಾಡುತ್ತವೆ. ಈ ಮೂಲಕ ಎಲ್ಲಾ ಅಥಾರಿಟಿಗಳು

ಲಕ್ಷಾಂತರ ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಾವೆ. ಆದರೆ ಅಪ್ಲಿಕೇಷನ್ ಹಾಕಿ ನಾಲ್ಕೈದು ವರ್ಷ ಆದರೂ ನಿವೇಶನ ಸಿಕ್ಕುತ್ತಿಲ್ಲ. ಆದರ ಸಲುವಾಗಿ ನಾವು ಒಂದು ಆದೇಶವನ್ನು ಕೊಡಬೇಕಾಗುತ್ತದೆ. ನಿಮ್ಮ ಕಡೆ ಭೂಮಿ ಇದ್ದರೆ ನೋಟಿಫಿಕೇಷನ್ ಮಾಡಬೇಕು ಅಪ್ಲಿಕೇಷನ್ ಪಡೆದ ೨-೩-೪ ತಿಂಗಳ ಒಳಗಾಗಿ ತಾವು ನೋಟಿಫಿಕೇಷನ್ ಪ್ರಕಾರ ಹಂಚಿಕೆ ಕೆಲಸ ಮಾಡಬೇಕಾಗುತ್ತದೆ. ಒಂದು ವೇಳೆ ಹಂಚಿಕೆ ಮಾಡದೇ ಇದ್ದರೆ ಯಾವ ಜನ ಹಣ ಕೊಟ್ಟಿದ್ದಾರೆ, ಅವರಿಗೆ ತಾವು ಬಡ್ಡಿಯನ್ನು ಕೊಡಬೇಕಾಗುತ್ತದೆ, ಇವತ್ತು ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳು ಈ ಅಭಿವೃದ್ಧಿ ಪ್ರಾಧಿಕಾರಗಳಲ್ಲಿ ಬಿದ್ದಿದೆ. ವಿ ಹ್ಯಾವ್ ನೋ ಸೈಟ್ಸ್ ಎಂದು ಹೇಳಿ ಹಣ ರೀಫಂಡ್ ಮಾಡುತ್ತೇವೆಂದು ಅವರುಗಳಿಗೆ ಪತ್ರ ಬರೆಯಬೇಕು. ಆದ್ದರಿಂದ ತಾವು ಇದರ ಬಗ್ಗೆ ಸ್ವಲ್ಪ ಸ್ಟ್ರಿಕ್ಟ್ ಆಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಇವತ್ತು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಪರಿಸ್ಥಿತಿ ಏನಾಗಿದೆ? ಬಿ.ಡಿ.ಎ. ಬಗ್ಗೆ ತಾವು ಅಭ್ಯಾಸ ಮಾಡಿಲ್ಲ ಅದು ತಮಗೆ ಬರುವುದಿಲ್ಲ. ಟೋಟಲ್ ೧೮-೧-೭೬ ರಿಂದ ಇವತ್ತಿನವರೆಗೆ ಕೊಟ್ಟಿರುವ ಸೈಟ್ಸ್ ೫೮,೩೦. ಅಂದರೆ ೧೫ ವರ್ಷದಲ್ಲಿ ಬಿ.ಡಿ.ಎ.ನವರು ಕೊಟ್ಟಿರುವ ಸೈಟುಗಳು ೫೮,೩೦. ೧೯೮೮-೮೯ರಲ್ಲಿ ೨,೭೨೩ ಸೈಟ್ಸ್‌ಗಳನ್ನು ಕೊಟ್ಟಿದ್ದಾರೆ. ೧೯೯೪-೯೫ ಅಂದರೆ ಕಳೆದ ವರ್ಷ ಒಂದು ಸೈಟ್ ಕೂಡಾ ಕೊಟ್ಟಿಲ್ಲ. ನಿಮ್ಮ ಕಾಲದಲ್ಲಿ ಮತ್ತು ರಾಷ್ಟ್ರಪತಿಯವರ ಕಾಲದಲ್ಲಿ ಒಂದೂ ಸೈಟನ್ನು ಕೊಟ್ಟಿಲ್ಲ. ಒಂದು ನೋಟಿಫಿಕೇಷನ್ ಕೂಡಾ ಮಾಡಿಲ್ಲ. ಲಕ್ಷಾವಧಿ ಜನ ಬೆಂಗಳೂರಿನಲ್ಲಿ ಸೈಟ್ ಕೊಡ್ರಿ ಎಂದು ಹೇಳುವಾಗ ಬಿ.ಡಿ.ಎ. ನವರು ಒಂದು ಸೈಟನ್ನು ಬೆಂಗಳೂರಿನ ಬಡ ಜನರಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ನಿಮ್ಮಲ್ಲಿ ಲ್ಯಾಂಡ್ ಇಲ್ಲ. ಬಿ.ಡಿ.ಎ., ಹೇಗೆ ನಡೆಯುತ್ತಿದೆ? ಲಕ್ಷ ಲಕ್ಷ ರೂಪಾಯಿಗಳನ್ನು ಜನರುಗಳಿಂದ ಕಲೆಕ್ಟ್ ಮಾಡಿ ಆ ಹಣದಿಂದ ಬಿ.ಡಿ.ಎ. ನಡೆಯುತ್ತಿದೆ. ಈ ಹಣಕ್ಕೆ ಬಡ್ಡಿ ಕೊಡುವುದಿಲ್ಲ ಬಿ.ಡಿ.ಎ. ಯಿಂದ ಸರ್ಕಾರಕ್ಕೆ ಒಂದು ಸ್ವಲ್ಪವೂ ದುಡ್ಡು ಬರುವುದಿಲ್ಲ. ವರ್ಷದಲ್ಲಿ ನೂರಿನ್ನೂರು ಕಾರ್ನರ್ ಸೈಟುಗಳನ್ನು ಹರಾಜು ಮಾಡಿ ಅದರಿಂದ ಯಾವ ಲ್ಯಾಂಡನ್ನು ನೀವು ೧೦ ಸಾವಿರ ೨೦ ಸಾವಿರ ೩೦ ಸಾವಿರ ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡಿರುತ್ತೀರೋ ಅದರಲ್ಲಿ ಕಾರ್ನರ್ ಸೈಟುಗಳನ್ನು ಮಾರಾಟ ಮಾಡಿ ೧೦ ಲಕ್ಷ ೨೦ ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಜನರುಗಳಿಗೆ ಸೈಟುಗಳನ್ನು ಕೊಡುವುದಕ್ಕೆ ಬಿ.ಡಿ.ಎ. ನವರು ಪಡೆದ ಹಣಕ್ಕೆ ಇಂಟರೆಸ್ಟ್ ಇಲ್ಲ. ಹೀಗಾಗಿ ಬಿ.ಡಿ.ಎ. ಯನ್ನು ಸಹ ಸ್ಟ್ರೀಮ್ ಲೈನ್ ಮಾಡಬೇಕು. ಇವತ್ತು ನಾನು ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೇವಲ ಬಿ.ಡಿ.ಎ. ಯಿಂದ ನಿವೇಶನ ಕೊಡುವ ಕಾರ್ಯಕ್ರಮವನ್ನು ನೀವು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬೆಂಗಳೂರಿನ ನಿವೇಶನದ ಜ್ವಲಂತ ಸಮಸ್ಯೆಯನ್ನು ಬಗೆಹರಿಸಬೇಕಾದರೆ ತಾವು ಬಿ. ಡಿ. ಎ. ಜೊತೆಯಲ್ಲಿ ಸಪ್ಲಿಮೆಂಟರಿ ಎಂದು ಡೆವಲಪರ್ಸ್ ಬಿಲ್ಡರ್ಸ್ ಮತ್ತು ಹೌಸಿಂಗ್ ಸೊಸೈಟಿಗಳಿಗೆ ತಾವು ಎನ್ಕರೇಜ್ ಕೊಡಬೇಕು. ಎನ್ಕರೇಜ್ ಮಾಡಲಿಲ್ಲವೆಂದರೆ you will never be able to solve this problem ಈ ಸಮಸ್ಯೆ ಹಾಗೇ ಜ್ವಲಂತವಾಗಿ ಉಳಿಯುತ್ತದೆ ಲಾಸ್ಟ್ ಅಕ್ಟೋಬರ್ ೮೯ ರಲ್ಲಿ ಬಿ.ಡಿ.ಎ.ಯಿಂದ ನೋಟಿಫಿಕೇಷನ್ ಆಗಿತ್ತು. ಅದರ ನಂತರ ಯಾವುದೇ ನೋಟಿಫಿಕೇಷನ್ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಹಳ ವ್ಯಂಗ್ಯವಾಗಿ ಹೇಳಿದ್ದಾರೆ. ಅಂಬೇಡ್ಕರ್ ಒಂದು ಸೆಂಟಿನರಿ ಸೆಲಬರೇಷನ್ ದಿನ ೧೦ ಸಾವಿರ ಸೈಟುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಸ್ವಾಮಿ, ಬಿ.ಡಿ.ಎ. ವಿಚಾರದಲ್ಲಿ ಬೆಂಗಳೂರಿನ ಪಟ್ಟಣದ ಇತಿಹಾಸದಲ್ಲೇ ಎಕನಾಮಿಕ್ ವೀಕರ್ ಸೆಕ್ಷನ್ ಜನಗಳಿಗೆ ಮಾನ್ಯ ಹೆಗಡೆಯವರ ಕಾಲದಲ್ಲಿ ಮತ್ತು ಬೊಮ್ಮಾಯಿಯವರ ಕಾಲದಲ್ಲಿ ಕೊಟ್ಟಷ್ಟು ಸೈಟುಗಳನ್ನು ಯಾವ ಮುಖ್ಯ ಮಂತ್ರಿಗಳ ಕಾಲದಲ್ಲೂ ಕೊಡುವುದಕ್ಕಾಗಲಿಲ್ಲ. ನಮ್ಮ ಕಾಲದಲ್ಲಿ ಮೊದಲ ಹಂತದಲ್ಲಿ ಬಹಳಷ್ಟು ಪ್ರಮಾಣದಲ್ಲಿ ಸೈಟುಗಳನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. ಎರಡನೇ ಹಂತದಲ್ಲಿ ಹಂಚಲು ಪುನಃ ನಾವು ಅಡ್ವರ್ಟೈಸ್ ಮಾಡಿದ್ದೆವು ೨೦೦೦ ಸೈಟ್‌ಗಳನ್ನು ಕೊಡಬೇಕೆಂದು ನೋಟಿಫಿಕೇಷನ್ ಹೊರಡಿಸಿದೆವು. ಆದರೆ ಅಷ್ಟರಲ್ಲಿ ನಮ್ಮ ಸರ್ಕಾರ ಹೋಯಿತು. ಆ ಕೆಲಸವನ್ನು ತಮ್ಮ ಕಾಲದಲ್ಲಿ ಮಾಡಬೇಕು. ಈಗಾಗಲೇ ನಾನು ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡೆ ಬಿ.ಡಿ.ಎ.ಗೆ ಒಬ್ಬರು ಮಂತ್ರಿಯನ್ನು ಸಪರೇಟ್ ಆಗಿ ಮಾಡಿ ಎಂದು. ನಮ್ಮ ಸರ್ಕಾರ ಇದ್ದಾಗ ಬಿ.ಡಿ.ಎ.ಗೇ ಸಪರೇಟ್ ಮಿನಿಸ್ಟರ್ ಮಾಡಿದ್ದರು ಬಿ.ಡಿ.ಎ. ನಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಈ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಸಮಯ ಬೇಕಾಗುತ್ತದೆ. ಆದರ ಸಲುವಾಗಿ ನಾನು ಹೇಳುವುದೇನೆಂದರೆ ಇದಕ್ಕೆ ಒಬ್ಬರು ಮಂತ್ರಿಗಳು ಇರಬೇಕಾಗುತ್ತದೆ ತಮಗೆ ಬಹಳ ಅನುಭವ ಇದೆ. ತಾವು ಬುದ್ಧಿವಂತರು, ಈ ಸಮಸ್ಯೆ ಬಗೆಹರಿಸುವುದಕ್ಕೆ ತಾವು ಪ್ರಯತ್ನ ಮಾಡುತ್ತೀರೆಂಬ ವಿಶ್ವಾಸ ನನಗೆ ಇದೆ. We had stated that land acquisition proceedings ಬೇಗ ಮಾಡಬೇಕು. at no cost it will be dropped and at no cost the land acquisition will

be dropped for some consideration. ಅಕ್ವೈರ್ ಮಾಡಲಿಕ್ಕೆ ಫೋರ್ ಒನ್ ನೋಟಿಫಿಕೇಷನ್ ಮಾಡುವುದು ನೆಕ್ಸ್ಟ್ ಡೇ ಅದನ್ನು ಡ್ರಾಪ್ ಮಾಡುವುದು, ಲ್ಯಾಂಡ್ ಅಕ್ವೈರ್ ಮಾಡುವುದಕ್ಕೆ ಮುಂಚೆ ಎರಡು ಸಾರಿ ಅಥವಾ ನಾಲ್ಕು ಸಾರಿ ವಿಚಾರ ಮಾಡಬೇಕು.

ಕೆಲವು ಕಡೆ ಹಾಸ್ಪಿಟಲ್ಸ್ ಇರುತ್ತವೆ, ಕೆಲವು ಕಡೆ ಬಡವರ ಮನೆ ಇರುತ್ತವೆ ಅಂತಹ ಲ್ಯಾಂಡ್‌ಗಳನ್ನು ಗುರ್ತಿಸಿ ಅವನ್ನು ಅಕ್ವೈರ್ ಮಾಡಬೇಡಿ. ಒಮ್ಮೆ ಫೋರ್ ಒನ್ ನೋಟಿಫಿಕೇಷನ್ ಇಷ್ಯೂ ಆದರೆ do not delete the 4 (1) Notification. ಹೀಗಾಗಿ ಇವತ್ತು ಅಧಿಕಾರಿಗಳು ಮತ್ತು ಆ ಭೂಮಾಲೀಕರು ಕೊಲ್ಯೂಡಾಗಿ ಈ ಪರಿಸ್ಥಿತಿ ಬಂದಿದೆ. ಸಾವಿರಾರು ಕೇಸುಗಳು ಹೈಕೋರ್ಟ್‌ನಲ್ಲಿವೆ ಮತ್ತು ಲೋಯರ್ ಕೋರ್ಟ್‌ಗಳಲ್ಲಿವೆ, ಅವುಗಳ ಬಗ್ಗೆ ಡಿಸಿಷನ್ ಆದರೆ ಬಿಡಿಎ ವಿರುದ್ಧವಾಗೇ ಆಗುವುದು, ಪರವಾಗಂತೂ ಆಗುವುದಿಲ್ಲ. ಏಕೆಂದರೆ ಲ್ಯಾಂಡ್ ಅಕ್ವಿಜಿಷನ್ ಆಗಿ ಬಿಟ್ಟರೆ ಅಧಿಕಾರಿಗಳಿಗೆ ಏನು ಸಿಗುತ್ತದೆ ? ಆದಕಾರಣ ದಯವಿಟ್ಟು ಟಾಪ್ ಪ್ರಯಾರಿಟಿ ಮೇಲೆ ಇದನ್ನು ತೆಗೆದುಕೊಂಡು ಎಷ್ಟು ಕೇಸ್‌ಗಳು ಯಾವ್ಯಾವ ಕೋರ್ಟಿನಲ್ಲಿವೆ ಎಂದು ತೆಗೆಸಿ ಅವನ್ನು ಹೇಗೆ ಎಕ್ಸ್‌ಪಿಡೈಟ್ ಮಾಡಬೇಕೆಂದು ನೀವು ನೋಡಬೇಕಾಗುತ್ತದೆ. ಮತ್ತು ಹಳೆಯ ಬ್ಯಾಕ್‌ಲಾಗ್ ಏನಿದೆ, ಅದನ್ನು ಪ್ರಯಾರಿಟಿ ಮೇಲೆ ಮುಗಿಸಿ ಜನರಿಗೆ ನಿವೇಶನ ಹಂಚುವ ಕಾರ್ಯಕ್ರಮ ಮಾಡಿ. ಆದಾದನಂತರ ಹೊಸ ನೋಟಿಫಿಕೇಷನ್ ಹೊರಡಿಸಿ. ಯಾರಿಗೆ ಸೈಟ್ ಅಲಾಟಾಗಿದ್ದು ಎರಡು ಮೂರು ವರ್ಷದಿಂದ ಅವರಿಗೆ ಪೊಸೆಷನ್ ಕೊಟ್ಟಿಲ್ಲವೋ ಅಂತಹವರಿಗೆ ಕೊಡುವುದಕ್ಕೆ ಲ್ಯಾಂಡ್ ಅಕ್ವಿಜಿಷನನ್ನು ಪ್ರಯಾರಿಟಿ ಮೇಲೆ ಮಾಡಬೇಕು. ಇದು ನಮ್ಮ ಕಾಲದಲ್ಲಿ ಆದದ್ದು ಎಂದು ನಾನು ಒಪ್ಪಿಕೊಳ್ಳುತ್ತೇನೆ ನೀವು ಅಧಿಕಾರಕ್ಕೆ ಬಂದು ಕೇವಲ ೬ ತಿಂಗಳಾಯಿತೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತೊಂದು ಸ್ಕೀಮನ್ನು ನಾವು ಇಂಟರ್‌ಡ್ಯೂಸ್ ಮಾಡಿದ್ದೆವು. ವಾಲಂಟರಿ ಅಕ್ವಿಜಿಷನ್ ಸ್ಕೀಮ್ ಎಂದು. ಆ ಪ್ರಕಾರ ಭೂಮಾಲೀಕರಿಗೆ ಇನ್‌ಸೆಂಟೀವ್ ಕೊಡುವುದು. ಇದು ಯಾವ ಪ್ರಕಾರ ನಡೆಯುತ್ತಿದೆ ನನಗೆ ಗೊತ್ತಿಲ್ಲ.. ಅಂದರೆ ಯಾರು ಲ್ಯಾಂಡನ್ನು ಬಿಡಿಎಗೆ ವಾಲಂಟರಿಯಾಗಿ ಸರಂಡರ್ ಮಾಡುತ್ತಾರೆ ಅವರಿಗೆ ಒಂದು ಎಕರೆಗೆ ಒಂದು ಪ್ಲಾಟು ಎರಡು ಎಕರೆ ಇದ್ದರೆ ಎರಡು ಪ್ಲಾಟು ಹೀಗೆ ಅರ್ಬನ್ ಸೀಲಿಂಗ್ ಲಿಮಿಟ್‌ವರೆಗೆ ಕೊಡುವಂಥ ಸ್ಕೀಮನ್ನು ನೀವು ಮುಂದುವರೆಸಿದರೆ ಎಷ್ಟೋ ಜನ ಭೂಮಿ ಕೊಡುವುದಕ್ಕೆ ತಯಾರಾಗಿದ್ದಾರೆ. ಆ ಸ್ಕೀಮನ್ನು ಇನ್ನೂ ಚುರುಕು ಮಾಡಿ ಇಂಪ್ಲಿಮೆಂಟ್ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕಾಗುತ್ತದೆ. ಒಂದು ಸಂತೋಷದ ಸಂಗತಿ ಏನೆಂದರೆ ಸಿಂಗಲ್ ವಿಂಡೋ ಏಜೆನ್ಸಿ ಅಂತ ನಾವು ಇಂಟರ್‌ಡ್ಯೂಸ್ ಮಾಡಿದ್ದೆವು. ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ವರದಿಯಲ್ಲಿ ಹೇಳಿದ್ದೀರಿ. ಅಷ್ಟೇ ಅಲ್ಲ, ಸಾವಿರಾರು ಪ್ರಕರಣಗಳು ಇದರಲ್ಲಿ ಡಿಸ್‌ಪೋಸ್ ಮಾಡಲಾಗಿವೆ, ಇನ್ನೂ ಇದನ್ನು ಚುರುಕು ಮಾಡಬೇಕಾಗುತ್ತದೆ. ಈ ಬಿಡಿಎನಲ್ಲಿ ಮತ್ತೊಂದು ಜ್ವಲಂತ ಸಮಸ್ಯೆ ಏನೆಂದರೆ ರೀಕನ್ವೆಯನ್ಸ್ ಆಫ್ ಲ್ಯಾಂಡ್ಸ್ ದು. ಬಿಡಿಎಗೆಂದು ನೋಟಿಫೈ ಮಾಡಿರುವ ಲ್ಯಾಂಡನ್ನು ಬೇರೆಯವರು ಎನ್‌ಕ್ರೋಚ್ ಮಾಡಿದ್ದರೆ ಅಥವಾ ಬೇರೆಯವರಿಗೆ ವ್ಯವಹಾರವಾಗಿದ್ದರೆ ರೀಕನ್ವೆ ಮಾಡಬೇಕು. ಹೀಗೆ ನೂರಾರು ಸಾವಿರಾರು ಜನರಿಗೆ ರೀಕನ್ವೆ ಮಾಡಿ ಕೊಟ್ಟಿದ್ದಾರೆ. ಬೆಂಗಳೂರಿನ ಒಂದು ಲೇಔಟ್‌ನಲ್ಲಿ ಅರ್ಧ ಭಾಗ ರೀಕನ್ವೆ ಆಗಿಲ್ಲ. ಆದರೆ ಇನ್ನರ್ಧ ಭಾಗ ರೀಕನ್ವೆ ಆಗಿದೆ, ಏಕೆ? ಸುಪ್ರೀಂ ಕೋರ್ಟ್‌ನವರು there is a direction that the BDA has no powers to reconvey the land. ಆದಕ್ಕಾಗಿ ನಾನು ಒಂದು ಅಮೆಂಡ್‌ಮೆಂಟ್ ಪ್ರಪೋಸ್ ಮಾಡಿದ್ದೆ. ಅಷ್ಟರಲ್ಲಿ ನಮ್ಮ ದುರ್ದೈವವೋ ಅಥವಾ ನಿಮ್ಮ ಸುದೈವವೋ ನಾವ ವಜಾ ಆಗಿ ಹೋದೆವು. ಇವತ್ತಿನವರೆಗೂ ಏನು ಕೈಗೆತ್ತಿಕೊಳ್ಳಲಿಲ್ಲ. ಈ ಬಗ್ಗೆ ನಾನು ಸಚಿವನಾಗಿದ್ದಾಗ ಅಪ್ಪರ್ ಹೌಸ್‌ನಲ್ಲಿ ಕಮಿಟ್ ಮಾಡಿದ್ದೆ that by the end of June, 1989, I will try to implement this and bring an amendment, ಎಂದು, ಅಷ್ಟರಲ್ಲಿ ನಮ್ಮ ಸರ್ಕಾರ ಹೋಯಿತು. ಇವತ್ತು ಸಾವಿರಾರು ಜನ ತೊಂದರೆಯಲ್ಲಿದ್ದಾರೆ. ರೀಕನ್ವೆಯನ್ಸ್ ಮಾಡಬೇಕಾದರೆ ಬಿಡಿಎಗೆ ಅಧಿಕಾರ ಇಲ್ಲ. ಅದರ ಬಗ್ಗೆ ಅಮೆಂಡ್‌ಮೆಂಟನ್ನು ಜಾಗ್ರತೆ ತಂದರೆ ಸಾಕಷ್ಟು ಜನರಿಗೆ ಅನುಕೂಲವಾಗಿ ಈ ಸಮಸ್ಯೆಯನ್ನು ಬಗೆಹರಿಸಬಹುದು. ಏಕೆಂದರೆ ಬಹಳ ಜನ ಲಾಭ ಪಡೆದುಕೊಂಡಿದ್ದಾರೆ ಮತ್ತು ಇನ್ನೂ ಹೆಚ್ಚು ಜನ ಬಿಡಿಎಗೆ ಹಣ ತುಂಬಿದ್ದಾರೆ. ಆದರೆ ಆರ್ಡರ್ ಸಿಗುತ್ತಿಲ್ಲ ಮತ್ತು ಬಹಳ ಜನ ಈಗ ಹಣ ಕೊಡಲಿಕ್ಕೆ ತಯಾರಾಗಿದ್ದಾರೆ. ಅದೇ ಪ್ರಕಾರ ಮತ್ತೊಂದು ವಿಚಾರವೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಲಾಟ್‌ಮೆಂಟ್ ರೂಲ್ಸ್ ಏನು ಹೇಳುತ್ತದೆ ಎಂದರೆ ನಿಮಗೆ ಒಂದು ಸೈಟ್ ಕೊಡುವಾಗ You should construct dwelling unit. It is illegal to construct another one over it. ಒಂದೇ ಮನೆ ಕಟ್ಟಬೇಕು, ಅಲ್ಲಿ ಮತ್ತೊಂದು ಮನೆ ಕಟ್ಟಲಿಕ್ಕೆ ಹೋದರೆ ಅದು ಇಲ್ಲೀಗಲ್. The High Court has held that as per the

BDA Rules, you are entitled to construct only one dwelling unit on the site, ಹೀಗಾಗಿ ಇವತ್ತು ಪ್ರಾಧಿಕಾರದ ಸೈಟಿನಲ್ಲಿ ಒಂದೇ ಮನೆ ಕಟ್ಟಿ ಮತ್ತೊಂದು ಫ್ಲೋರ್ ಕಟ್ಟುವುದಕ್ಕೆ ಪರ್ಮಿಷನ್ ಕೊಡುವುದಿಲ್ಲ. ಆದರೆ ಪ್ರಾಧಿಕಾರದ ಸೈಟಿನ ಪಕ್ಕದಲ್ಲೇ ಒಂದು ಪ್ರೈವೇಟ್ ಸೈಟ್ ಇದ್ದಲ್ಲಿ ಅದರಲ್ಲಿ ನಾಲ್ಕು ಫ್ಲೋರ್‌ಗಳನ್ನು ಕಟ್ಟಬಹುದು. ಈ ಸಲುವಾಗಿ ಬೆಂಗಳೂರಿನಲ್ಲಿ ಬಿಡಿಎಗೆ ಲ್ಯಾಂಡ್ ಸ್ಕೇರ್ಸಿಟಿ ಜಾಸ್ತಿಯಾಗಿದೆ. ಜೊತೆಗೆ ಭೂಮಿ ಬೆಲೆ ಜಾಸ್ತಿಯಾಗುತ್ತಿದೆ. ಬಿ.ಡಿ.ಎ. ಸೈಟ್‌ನಲ್ಲಿ ಯಾರಾದರೂ ೨೦–೩೦ ಫ್ಲಾಟ್ ಕಟ್ಟಲು ಮುಂದೆ ಬಂದಾಗ ಅದಕ್ಕೆ ಕಾನೂನು ಅಡ್ಡಿ. ಆದರೆ ಈ ಅಡ್ಡಿಯನ್ನು ಅಮೆಂಡ್‌ಮೆಂಟ್ ತರುವ ಮೂಲಕ ತೆಗೆದುಹಾಕಿ. ಇದರಿಂದ ಪ್ರೈವೇಟ್‌ನವರು ಐದಾರು ಲಕ್ಷ ಲಾಭ ಮಾಡಿಕೊಳ್ಳಬಹುದು. ಆದರೆ ಒಂದೇ ಜಾಗದಲ್ಲಿ ೩೦ ಜನರು ವಾಸ ಮಾಡಬಹುದು. ಆದ್ದರಿಂದ ಹೈಕೋರ್ಟಿನವರು ಮಾಡಿರುವ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ಈ ಕಡತವು ಲಾ ಡಿಪಾರ್ಟ್‌ಮೆಂಟಿನಲ್ಲಿದೆ. ಮುನಿಸಿಪಾಲಿಟಿ ಆಕ್ಟಿಗೆ ತರಲಾಗುವ ಅಮೆಂಡ್ ಮೆಂಟ್ ಕಡತವು ಕೂಡ ಲಾ ಡಿಪಾರ್ಟ್‌ಮೆಂಟಿನಲ್ಲೇ ಇದೆ. I know, all the files are lying with the Law Department. ಹೀಗಾಗಿ ಈ ಸಮಸ್ಯೆಗಳು ಬಹಳ ಜ್ವಲಂತವಾಗಿವೆ. ತಾವು ಈ ಸಮಸ್ಯೆಗಳನ್ನು ಬಗೆಹರಿಸಲು ತಾವು ಪ್ರಯತ್ನ ಮಾಡಬೇಕು. ಆಮೇಲೆ ಸಾರ್ವಜನಿಕ ಪಾರ್ಕ್‌ಗಳಿಗೆಂದು ಹಲವಾರು ಕಡೆ ಜಾಗ ಮೀಸಲಾಗಿಡಲಾಗಿದೆ. ಆದರೆ ಖಾಸಗಿಯವರು ಅದನ್ನು ಎನ್‌ಕ್ರೋಚ್ ಮಾಡಿಬಿಡುತ್ತಾರೆ. ನಾನು ಸಚಿವನಾಗಿದ್ದಾಗಲೂ ಈ ತರಹ ನಡೆಯುತ್ತಿತ್ತು. ಆದ್ದರಿಂದ ಯಾರು ದೊಡ್ಡ ಇಂಡಸ್ಟ್ರಿಯಲಿಸ್ಟ್ಸ್ ಇದ್ದಾರೋ ಅವರಿಗೆ ಮೇಂಟೆನೆನ್ಸ್ ಸಲುವಾಗಿ ಲೀಸ್ ಮೇಲೆ ಕೊಡಿ. ಅವರಿಗೆ ಪೂರ್ತ ರೈಟ್ಸ್ ಆಗಲಿ ಅಥವಾ ಬರೀ ಲೀಸ್ ಮೇಲೆ ಕೊಡುವುದು ಬೇಡ. They will display advertisement on the outside and they will invest lakhs of rupees. The parks will be developed. ಏಕೆಂದರೆ ಬಿ.ಡಿ.ಎ. ಮತ್ತು ಸರ್ಕಾರದ ಬಳಿ ಅವನ್ನೆಲ್ಲ ಮೇಂಟೆನ್ ಮಾಡಲು ದುಡ್ಡಿಲ್ಲದಿದ್ದರೆ ಆ ಜಾಗಗಳನ್ನು ಆ ಕಾರಣಕ್ಕಾಗಿ ಹಾಗೇ ಬಿಟ್ಟರೆ ಅವೆಲ್ಲ ಎನ್‌ಕ್ರೋಚಾಗುತ್ತವೆ. ಈ ದೃಷ್ಟಿಯಿಂದ ಇದನ್ನು ಮಾಡಬೇಕೆಂದು ಹೇಳುತ್ತೇನೆ. ಅದೇ ಪ್ರಕಾರ ಪ್ರಾಧಿಕಾರದಿಂದ ರಿಂಗ್‌ರೋಡ್ ಕೆಲಸ ನಡೆಯುತ್ತಿದೆ. ಸಾಧಾರಣವಾಗಿ ೬೨ ರಿಂದ ೬೩ ಕಿಮೀ ಉದ್ದದ ರಿಂಗ್‌ರೋಡ್ ಕೆಲಸ ಏನಿದೆ. ಅದು ಬಹಳ ಮುಖ್ಯವಾದ ಕೆಲಸವಾಗಿದೆ. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದರೆ ಸರ್ಕಾರದಿಂದ ಹಣದ ಸಹಾಯ ಮಾಡುತ್ತಿಲ್ಲ. ಪ್ರಾಧಿಕಾರದ ಬಳಿಯೂ ಇಲ್ಲ, ಇದರಿಂದ ಈ ರಸ್ತೆ ಕಾರ್ಯ ಕಂಪ್ಲೀಟಾಗಲು ೧೦–೧೫ ವರ್ಷ ಆದರೂ ಬೇಕಾಗುತ್ತದೆ. ಆದಕಾರಣ ಸರ್ಕಾರದಿಂದ ಈ ರಿಂಗ್‌ರಸ್ತೆ ಮುಗಿಸಲು ಪ್ರಾಧಿಕಾರಕ್ಕೆ ಸಾಲ ಸಿಗಬೇಕು ಅಥವಾ ವರ್ಲ್ಡ್ ಬ್ಯಾಂಕಿನಿಂದ ಸಾಲ ಪಡೆಯಬೇಕು. ಈ ರಸ್ತೆ ಆಗುವುದರಿಂದ ಎಷ್ಟೋ ಟ್ರಾಫಿಕ್ ಕನ್‌ಜೆಕ್ಷನ್ ತಪ್ಪುತ್ತದೆ. ಜನರಿಗೂ ಅನುಕೂಲವಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಪ್ರಯತ್ನ ಮಾಡಬೇಕು. ಜನರ ಸೇವೆ ಮಾಡಬೇಕೆನ್ನುವ ಗುರಿ ಬಿಡಿಎಗಿದ್ದರೆ ಈ ಕೆಲಸವನ್ನು ಅದು ಚುರುಕಾಗಿ ಮಾಡಬೇಕು. ಅದೇ ರೀತಿ ಸಿಂಗಲ್ ವಿಂಡೋ ಏಜೆನ್ಸಿಯನ್ನು ಸ್ಟ್ರೆಂಥನ್ ಮಾಡಿ. ಈಗಾಗಲೇ ಬಿಡಿಎಗೆ ದುಡ್ಡು ಹಾಕಿ ಸೈಟ್‌ಗಾಗಿ ಕಾದಿರುವವರಿಗೆ ಸೈಟ ಕೊಡುವುದಕ್ಕೆ ಆಗುವುದಿಲ್ಲ ಎಂದರೆ ಅವರ ಹಣವನ್ನು ರಿಫಂಡ್ ಮಾಡಿ ಅಥವಾ ಅದರ ಮೇಲೆ ಇಂಟರೆಸ್ಟ್ ಆದರೂ ಕೊಡುವ ವ್ಯವಸ್ಥೆ ಮಾಡಿ, ಇಲ್ಲದಿದ್ದರೆ ಇದು ದೊಡ್ಡ ಮೋಸ ಆಗಬಹುದು ದೊಡ್ಡ ಫ್ರಾಡ್ ಆಗಬಹುದು ಈಗಾಗಲೇ ಆಗುತ್ತಿದೆ ಇದು ಎಷ್ಟೋ ವರ್ಷಗಳಿಂದ ಆಗುತ್ತಿದೆ ಅನಂತರ ಇನ್ನು ಸ್ಲಂಕ್ಲಿಯರೆನ್ಸ್ ಬೋರ್ಡ ಬಗ್ಗೆ ಹೇಳುವುದಾದರೆ ಆ ಬಗ್ಗೆ ಕೊಟ್ಟಿರುವ ರಿಪೋರ್ಟನ್ನು ನೋಡಿದೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಾಗುತ್ತಿಲ್ಲ. ಇಲ್ಲಿ ಒಂದು ಕಡೆ they say that in 1988-89, they have identified 965 slums as per their report and in 1989-90, they say, that they have identified 1270 slums. Within a year, they have identified 300 additional slums I do not know whether these figures are right or wrong. They have to verify these figures. ಈ ಫಿಗರ್ಸ್ ಸರಿಯಿದೆಯೋ ತಪ್ಪೋ ಗೊತ್ತಿಲ್ಲ. ಅಧಿಕಾರಿಗಳು ಕೊಡುವುದನ್ನೇ ಇಲ್ಲಿ ತಂದು ನಮಗೆ ಕೊಟ್ಟುಬಿಟ್ಟರೆ ನಾಳೆ ನಿಮಗೆ ತೊಂದರೆಯಾಗುತ್ತದೆ ಅಧಿಕಾರಿಗಳಿಗೆ ತೊಂದರೆ ಆಗುವುದಿಲ್ಲ. ಇವತ್ತು ಏನಾಗಿದೆ ಎಂದರೆ ಸ್ಲಂಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಇಡಲಾಗಿರುವ ಬಜೆಟ್ ತುಂಬಾ ಕಡಿಮೆ ಇದೆ. ಆದರೆ ಸ್ಲಮ್‌ಗಳು ದಿನೇ ದಿನೇ ಹೆಚ್ಚಾಗುತ್ತಿದೆ. ಇದು ತಮಗೂ ಗೊತ್ತು. ಇವತ್ತು ಹಳ್ಳಿಯಲ್ಲಿದ್ದ ಜನರಿಗೆ ಉದ್ಯೋಗಾವಕಾಶ ಇಲ್ಲ. ಇದರ ಸಲುವಾಗಿ ಪಟ್ಟಣಗಳಿಗೆ ಬರುತ್ತಾರೆ. ಆದರಿಂದ

ಕಂಪಲ್ಸರಿಯಾಗಿ ಅವರಿಗೆ ಯಾವುದು ಆಲ್ಟರ್‌ನೇಟಿವ್ ಇಲ್ಲ. Slum are coming up. ಆ ಸಲುವಾಗಿ ಸ್ಲಮ್ಸ್‌ಗಳನ್ನು ಕಡಿಮೆ ಮಾಡಬೇಕಾದರೆ ಕೇವಲ ಸ್ಲಮ್ ಬೋರ್ಡ್‌ನಿಂದ ಮನೆಯನ್ನು ಕಟ್ಟುವುದರಿಂದ ಆಗುವುದಿಲ್ಲ. ಆಗುವುದಿಲ್ಲ. ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ಬ್ಯಾಕ್‌ವಾರ್ಡ್ ಏರಿಯಾಗಳಲ್ಲಿ ಇಂಡಸ್ಟ್ರೀಗೆ ಹೆಚ್ಚು ಎನ್‌ಕರೇಜ್ ಮಾಡಬೇಕಾಗುತ್ತದೆ. ಇಂಡಸ್ಟ್ರೀಗಳಿಗೆ ಹೆಚ್ಚು ಇನ್‌ಸೆಂಟೀವ್ಸ್‌ನ್ನು ಕೊಡಬೇಕಾಗುತ್ತದೆ ಎಂದರೆ ಮಾತ್ರ ಆ ಜನ ಅಲ್ಲಿಯೇ ಉಳಿಯುತ್ತಾರೆ. ಇವತ್ತು ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕ್ರಿಯೇಟ್ ಆಗುತ್ತಿದೆ. ಲ್ಯಾಂಡ್‌ಗಾಗಿ ಪ್ರಾಬ್ಲಮ್ ಕ್ರಿಯೇಟ್ ಆಗುತ್ತಿದೆ. ಇವತ್ತು ನೂರಾರು ಪ್ರಾಬ್ಲಮ್‌ಗಳು ಹೀಗೆ ಕ್ರಿಯೇಟ್ ಆಗುತ್ತಿದೆ. ಇವತ್ತು ಸ್ಲಮ್ ಬೋರ್ಡ್‌ನವರು ಎಲ್.ಐ.ಸಿ. ಕಡೆಯಿಂದ, ಹುಡ್ಕೊ ಕಡೆಯಿಂದ ಸಾಕಷ್ಟು ಹಣವನ್ನು ತಂದು ಬಹಳ ದೊಡ್ಡ ಪ್ರಮಾಣದಲ್ಲಿ ಬಡ ಜನರಿಗೆ ಸಹಾಯ ಮಾಡಲಿಕ್ಕೆ ಸಾಧ್ಯ ಇದೆ, ಆದರೆ ಎಷ್ಟು ಒಂದು ಈ ಇಲಾಖೆಗೆ ಶಕ್ತಿ ಸರ್ಕಾರದಿಂದ ಸಿಗಬೇಕಾಗಿತ್ತೋ ಅದು ಸಿಗುವುದಿಲ್ಲ. ಬಜೆಟ್ ಸಪೋರ್ಟ್ ಕೂಡಾ ಸಿಗುವುದಿಲ್ಲ. ಅಲ್ಲಿ ಅಧಿಕಾರಿಗಳು ಕೂಡಾ ಇಲ್ಲ. ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುಬ್ಬಳ್ಳಿಯಲ್ಲಿ ಇರುತ್ತಾನೆ. ಆ ಎಕ್ಸಿಕ್ಯೂಟಿವ್ ಇಂಜಿನಿಯರ್ ಎಂಟು ಜಿಲ್ಲೆಗಳನ್ನು ನೋಡಬೇಕು. ಅವನೇ ಗುಲ್ಬರ್ಗಕ್ಕೂ ಹೋಗಬೇಕು, ರಾಯಚೂರಿಗೂ ಹೋಗಬೇಕು, ನಾರ್ತ್ ಕೆನರಾಕ್ಕೂ ಅವನೇ ಹೋಗಬೇಕು. ಈ ರೀತಿ ಆದರೆ ಯಾವ ರೀತಿ ಕೆಲಸವನ್ನು ಮಾಡಬೇಕು? ಅಲ್ಲಿ ಆ ರೀತಿ ನೋಡಲಿಕ್ಕೆ ಹೋದರೆ ಇಲ್ಲಿ ಮತ್ತೊಂದು ಪರಿಸ್ಥಿತಿಯಾಗಿರುತ್ತದೆ. ಅದರ ಸಲುವಾಗಿ ಸ್ಲಮ್ ಬೋರ್ಡಿನಲ್ಲಿ ಸರಿಯಾದ ಸ್ಟಾಫ್ ಇಲ್ಲ, ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಇಲ್ಲ, ಅದನ್ನು ಡೆವಲಪ್ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿ. ಇವತ್ತು ಸ್ಲಮ್ ಎಲ್ಲಿದೆ ಎಂದರೆ ಕಾರ್ಪೊರೇಷನ್ ಲ್ಯಾಂಡ್‌ನಲ್ಲಿವೆ. ಬಿ.ಡಿ.ಎ. ಲ್ಯಾಂಡ್ಸ್ ಮೇಲೆ ಇವೆ. ಗೌರ್ನಮೆಂಟ್ ಲ್ಯಾಂಡ್ಸ್ ಮೇಲೆ ಇವೆ. ಪ್ರೈವೇಟ್ ಲ್ಯಾಂಡ್ಸ್ ಮೇಲೆ ಇವೆ. ಎಲ್ಲೆಲ್ಲಿ ಇವತ್ತು ನಿಮ್ಮ ಒಂದು ಸಿಟಿ ಪ್ಲಾನ್ಡ್ ಗ್ರೋಥ್ ದೃಷ್ಟಿಯಿಂದ ಸ್ಲಮ್‌ನ್ನು ಷಿಫ್ಟ್ ಮಾಡಬೇಕಾಗುತ್ತದೆ. ಅದನ್ನು ಷಿಫ್ಟ್ ಮಾಡಿ. ನಾವು ಮಾಡಿದ್ದೇವೆ. ಆದರೆ ಎಲ್ಲಿ ಸ್ಲಮ್‌ನ್ನು ಷಿಫ್ಟ್ ಮಾಡುವ ಅವಶ್ಯಕತೆ ಇಲ್ಲವೋ ಅಲ್ಲಿ ಬಡ ಜನರು ಒಂದು ವೇಳೆ ಗೌರ್ನಮೆಂಟ್ ಲ್ಯಾಂಡ್ ಮೇಲೆ ಬಿ.ಡಿ.ಎ. ಲ್ಯಾಂಡ್ ಮೇಲೆ ಕಾರ್ಪೊರೇಷನ್ ಲ್ಯಾಂಡ್ ಮೇಲೆ ಇದ್ದರೆ ಅವರಿಗೆ give an area or portion of the land on lease. ಮತ್ತು ಹುಡ್ಕೋ, ಎಲ್.ಐ.ಸಿ. ಕಡೆಯಿಂದ ಫೈನಾನ್ಸ್‌ನ್ನು ಪಡೆದು ಥ್ರೂ ಸ್ಲಮ್ ಬೋರ್ಡ್‌ನಿಂದ ಮನೆಗಳನ್ನು ಕಟ್ಟಿಸಿ ಕೊಡಿ. ಪ್ರೈವೇಟ್ ಲ್ಯಾಂಡ್ ಇದ್ದರೆ ಸ್ವಲ್ಪ ತೊಂದರೆಯಾಗಬಹುದು. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. For that there is a procedure ಯಾವ ಪ್ರಕಾರ ಲ್ಯಾಂಡನ್ನು ಅಕ್ವೈರ್ ಮಾಡಬೇಕು, ಅದರ ಪ್ರಕಾರ ಮಾಡಬೇಕಾಗುತ್ತದೆ. ಆದರೆ ಗೌರ್ನಮೆಂಟ್ ಲ್ಯಾಂಡ್ ಈಗಾಗಲೇ ಇದೆ, ಅವರಿಗೆ ಬೇರೆ ಮನೆ ಇಲ್ಲ, ಇಂಥ ಪರಿಸ್ಥಿತಿಯಲ್ಲಿ ಅವರಿಗೆ ಸಹಾಯ ಮಾಡುವ ಭಾವನೆ ಇದ್ದರೆ ಸಹಾಯ ಮಾಡುವ ಇಚ್ಛೆ ಇದ್ದರೆ ತಾವು ಮಾಡಲಿಕ್ಕೆ ಸಾಧ್ಯ ಇದೆ ಎಂದು ಸಲಹೆಯನ್ನು ಕೊಡುತ್ತಿದ್ದೇನೆ. ಈಗಾಗಲೇ ನಾನು ಹೇಳಿದೆ. ಈ ಬಿ.ಡಿ.ಎ. ನಿಂದ ಎಲ್ಲಾ ನಿವೇಶನವನ್ನು ಹಂಚುವ ಕೆಲಸದಿಂದ ಬೆಂಗಳೂರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳಿದ್ದೇವೆ. ಆದ್ದರಿಂದ ಈ ಬಿಲ್ಡರ್ ಡೆವಲಪರ್ಸ್, ಹೌಸಿಂಗ್ ಸೊಸೈಟಿಗಳಿಗೆ ಎನ್‌ಕರೇಜ್ ಮಾಡಿ. ಹೌಸಿಂಗ್ ಸೊಸೈಟಿಯ ಬಗ್ಗೆ ಮಾತೆತ್ತಿದರೆ ಸ್ಕ್ಯಾಂಡಲ್ ಎಂದು ಪ್ರಚಾರ. ಇದರಿಂದ ನಮ್ಮ ಸಹಕಾರಿ ರಂಗದಲ್ಲಿ ಏನು ವಿಶ್ವಾಸ ಇದೆ, ಅದನ್ನು ದಿನೇ ದಿನೇ ಅದನ್ನು ಕಡಿಮೆ ಮಾಡುತ್ತಿದ್ದೇವೆ. ನೂರಾರು ಹೌಸಿಂಗ್ ಸೊಸೈಟಿಗಳಿವೆ. ಅವುಗಳ ಪೈಕಿ ಕೆಲವು ಹೌಸಿಂಗ್ ಸೊಸೈಟಿಗಳು ಕೆಟ್ಟದ್ದು ಇರಬಹುದು. ಎಲ್ಲಾ ಸೊಸೈಟಿಗಳು ಕೆಟ್ಟದ್ದು ಎಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಎಂಟು–ಹತ್ತು ವರ್ಷಗಳಿಂದ ಲೈಫ್ ಟೈಮ್ ಸೇವಿಂಗ್ ಮಾಡಿ ಜನರು ಏನು ಸೊಸೈಟಿಗಳಿಗೆ ಹಣವನ್ನು ಕಟ್ಟಿದ್ದಾರೆ, ಅವರುಗಳು ನಿವೇಶನ ಸಿಗಬಹುದು ಎಂದು ದಾರಿಯನ್ನು ನೋಡುತ್ತಿದ್ದಾರೆ. ಆದರೆ ಪೊಲಿಟಿಕಲ್ reasons ಇಟ್ಟುಕೊಂಡು ನಾವು ನಿಮ್ಮ ಮೇಲೆ ಆಪಾದನೆಯನ್ನು ಮಾಡುವುದು. ನಮ್ಮ ಮೇಲೆ ನೀವು ಆಪಾದನೆಯನ್ನು ಮಾಡುವುದು, ಇದರಿಂದ ಈ ಸಮಸ್ಯೆ ಬಗೆ ಹರಿಯುವುದಿಲ್ಲ. ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದೀರಿ ಎಂದು ಹೇಳುತ್ತೀರಿ. ಎಲ್ಲಿ ಮಾಡಿದ್ದೀರಿ? ಮೂರು ನಾಲ್ಕು ತಿಂಗಳು ಆಯಿತು? ಎಷ್ಟು ಸಾರಿ ಭೇಟಿ ಆಗಿದ್ದೀರಿ? ಅದರ ಮೇಲೆ ಏನು ನಿರ್ಣಯವನ್ನು ಮಾಡಿದ್ದೀರಿ? we have lead down a procedure. ಯಾವ ಸೊಸೈಟಿಗೆ ಆದರೂ ಸಹಾ ಅಕ್ವಿಜಿಷನ್ ಮುಂದೆ ಇಷ್ಟು ಹಣವನ್ನು ತುಂಬಬೇಕು. ಯಾರಿಗೆ ಸೈಟನ್ನು ಅಲಾಟ್ ಮಾಡುತ್ತಾರೆ, ಅದಕ್ಕೆ ಅಫಿಡವಿಟ್ಟನ್ನು ಮಾಡಬೇಕು, ಅದೇನೆಂದರೆ ನನಗೆ ಬೇರೆ ಸೈಟಿಲ್ಲ ಎಂದು ಹೇಳಿ ಮಾಡಬೇಕು. Those who are suffering for 8 10 years ಅಂಥವುಗಳನ್ನು ಯಾರು ನೋಡೇ ಇಲ್ಲ. ಎಲ್ಲಾ

ಸೊಸೈಟಿಗಳು ಕಳ್ಳರು ಎಂದು ಹೇಳುವುದು ಸರಿಯಲ್ಲ. ಜನ ಹಣವನ್ನು ಕಟ್ಟಿದ್ದಾರೆ, ಅವರು ಏನು ಮಾಡಬೇಕು? ಆ ಸದಸ್ಯರುಗಳು ಹಣವನ್ನು ಕಟ್ಟಿದ್ದಾರೆ, ಅವರು ಏನು ಮಾಡಬೇಕು? ನಾಳೆ ಈ ಸಮಸ್ಯೆಯನ್ನು ನೀವು ಬಗೆಹರಿಸಬೇಕಾಗುತ್ತದೆ. ಯಾರಿಗೆ ನಿವೇಶನ ಇಲ್ಲ, ಅವರಿಗೆ ಕೊಡಬೇಕಾಗುತ್ತದೆ ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ೪೦ ಸಾವಿರ ಆಗುವುದಿದ್ದರೆ ಅದು ೮೦ ಸಾವಿರ ಆಗುತ್ತದೆ, ಲಕ್ಷ ಆಗುತ್ತದೆ. ನೀವು ಕಾಂಪನ್‌ಸೇಟ್ ಮಾಡದಿದ್ದರೆ ನಾವು ಮಾಡಬೇಕು. Nor we will compensate nor you will compensate that person. ಇವೊತ್ತು ಹೌಸಿಂಗ್ ಬೋರ್ಡ್ ಸೊಸೈಟಿಗಳನ್ನು ಟೋಟಲ್ ಆಗಿ ರೂಲ್ ಔಟ್ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲೆಲ್ಲಿ ಡಿಫಂಕ್ಟ್ ಸೊಸೈಟಿಗಳು ಇವೆ, ಕೆಟ್ಟ ಸೊಸೈಟಿಗಳು ಇವೆ, ಅವರ ಮೇಲೆ ಕ್ರಮ ತೆಗೆದು ಕೊಳ್ಳಿ. ಆದರೆ ಎಲ್ಲೆಲ್ಲಿ ಒಳ್ಳೆಯ ಸೊಸೈಟಿಗಳು ಇವೆ, ಆ ಸೊಸೈಟಿಗಳನ್ನು ಎನ್‌ಕರೇಜ್ ಮಾಡಬೇಕಾಗುತ್ತದೆ. ತಾವು ಈ ಪ್ರಾಬ್ಲಮ್ ಅನ್ನು ಸಾಲ್ವ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಸಾಮಾನ್ಯ ಜನರಿಗೆ ಬಹಳ ತೊಂದರೆ ಆಗುತ್ತಿದೆ. ನಾನು ಈಗಾಗಲೇ ಹೇಳಿದ ಹಾಗೆ ಅವರುಗಳು ಲೈಫ್ ಟೈಮ್ ಸೇವಿಂಗ್ಸ್ ಅನ್ನು ಇನ್‌ವೆಸ್ಟ್ ಮಾಡುತ್ತಿದ್ದಾರೆ. ಅವರದ್ದು ಏನು ತಪ್ಪು ಇದೆ. You can handover the particular land. ಆದರ ಸಲುವಾಗಿ ಈ ಈ ಸಮಸ್ಯೆಯನ್ನು ತಾವು ಪ್ರಾಧಾನ್ಯತೆಯನ್ನು ಕೊಟ್ಟು ಬಗೆಹರಿಸಬೇಕು ಮತ್ತು ಈ ಒಂದು ಬೆಂಗಳೂರು ಸಿಟಿ ಏನು ಇದೆ. ಇದರ ಬಗ್ಗೆ ತಮಗೆ ಒಂದೆರಡು ಸಲಹೆಯನ್ನು ಕೊಡುತ್ತಿದ್ದೇನೆ. ಇವೊತ್ತು ದಿನೇ ದಿನೇ ಪಾಪ್ಯುಲೇಷನ್ ಬೆಳೆಯುತ್ತಾ ಇದೆ, ಟ್ರಾಫಿಕ್ ಬೆಳೆಯುತ್ತಾ ಇದೆ. ಇದರಿಂದ ಸಾಕಷ್ಟು ಸಮಸ್ಯೆಗಳು ಬೆಂಗಳೂರು ಪಟ್ಟಣದಲ್ಲಿ ನಿರ್ಮಾಣ ಆಗಿದೆ. ಮತ್ತು ಎಲ್ಲೇ ಹೋಗಲಿ ಅಲ್ಲಿ ಪೊಲ್ಯೂಷನ್ ಇದೆ. ನೀರು, ವಿದ್ಯುಚ್ಛಕ್ತಿ ಇಲ್ಲ. ಎಷ್ಟೋ ಕಡೆ ನನಗೆ ನೆನಪು ಇದೆ. ಗಾರ್ಬೇಜ್ ಡಂಪ್ ಮಾಡುವುದಕ್ಕೆ ಜಾಗ ಇಲ್ಲ. ಮುಂದೆ ಏನು ಆಗುತ್ತದೋ ಗೊತ್ತಿಲ್ಲ. ನಾನು ಬಿ.ಡಿ.ಎ.ಗೆ ಇನ್‌ಸ್ಟ್ರಕ್ಷನ್ ಮಾಡಿದ್ದೇನೆ. ಹ್ಯಾಂಡ್ ಓವರ್ ದಿ ಲ್ಯಾಂಡ್ ಎಂದು. ಇಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಆದರ ಸಲುವಾಗಿ ಇವೊತ್ತು ನೀವು ಇನ್ನೂ ೧೦ ವರ್ಷಗಳ ಕಾಲ you have to freeze the growth of Bangalore city. ಬೆಂಗಳೂರು ಸಿಟಿ ಡೆವಲಪ್ ಮಾಡುವುದಕ್ಕೆ ನೀವು ಅವಕಾಶ ಕೊಡಬಾರದು, ಕೊಟ್ಟರೆ ಬಾಂಬೆಗಿಂತ ಪೊಜಿಷನ್ ಕೆಟ್ಟದಾಗಬಹುದು. ಸಿವಿಕ್ ಎಮಿನಿಟೀಸ್ ಇಲ್ಲ. ಜನರಿಗೆ ಹಾಲು ಸಿಗುವುದಿಲ್ಲ, ನೀರು ಸಿಗುವುದಿಲ್ಲ. ಆದರ ಸಲುವಾಗಿ development freeze ಮಾಡಿ. ಇಲ್ಲಿ ಒಂದು ಪ್ಲಾನ್ಡ್ ಗ್ರೋಥ್ ಆಗಬೇಕು ಮತ್ತು ಇವೊತ್ತು ಫ್ಲೈ ಓವರ್ಸ್, ಸಬ್ ವೇಸ್ ಇದನ್ನು ಮಾಡಬೇಕು. ನೀವು ಇದಕ್ಕೆಲ್ಲಾ ಹಣ ಇಲ್ಲವೆಂದು ಹೇಳಬಹುದು. ನಿಮ್ಮ ಹತ್ತಿರ ಹಣ ಇಲ್ಲ, ಇವೊತ್ತು ಕಾರ್ಪೋರೇಷನ್ ಹತ್ತಿರ ಹಣ ಇಲ್ಲ. ಈಗಾಗಲೇ ವರ್ಲ್ಡ್ ಬ್ಯಾಂಕ್ ಏಡ್‌ನಿಂದ ಒಂದು ಪ್ರಾಜೆಕ್ಟ್ ಮಾಡಬೇಕೆಂದು ಯೋಜನೆ ಇದೆ. ಅಲ್ಲಿ ಸಾಧ್ಯ ಆದರೆ ಮಾಡಿ. ಅಲ್ಲಿಯೂ ಸಾಧ್ಯ ಆಗುವುದಿಲ್ಲ ಅಂದರೆ you may involve the private sector ನಾನು ಮೊನ್ನೆ ಮಲೇಷಿಯಾಗೆ ಹೋಗಿದ್ದೆ ಅಲ್ಲಿ ನೋಡಿದ್ದೇನೆ. ಅಲ್ಲಿ ದೊಡ್ಡ ದೊಡ್ಡ ರಸ್ತೆಗಳನ್ನು ಸೇತುವೆಗಳನ್ನು ಪ್ರೈವೇಟ್ ಸೆಕ್ಟರ್‌ನವರು ಮಾಡಿದ್ದಾರೆ. ಇಲ್ಲಿ ಸಹ ಅದೇ ರೀತಿ ಮಾಡಲು ಏನು ತೊಂದರೆ ಇದೆ? I have seen many projects in Malasia involving private sectors. Somehow, you will have to solve all these problems. ಮತ್ತೊಂದು ಸಜೆಸ್ಟ್ ಮಾಡುತ್ತಿದ್ದೇನೆ. ಇವೊತ್ತು ಬೆಂಗಳೂರು ಸುತ್ತ ಮುತ್ತ ಎಷ್ಟೋ ಟೌನ್‌ಗಳು ಇವೆ. ಮಾನ್ಯ ಸಿಂಧ್ಯರವರ ಕನಕಪುರ ಇರಬಹುದು ರಾಮನಗರ ಇರಬಹುದು ಅಥವಾ ತುಮಕೂರು ಇರಬಹುದು. ನೀವು ಬೆಂಗಳೂರು ಮೇಲೆ ಇವೊತ್ತು ಪ್ರೆಷರ್ ಕಡಿಮೆ ಮಾಡಬೇಕಾದರೆ we have to go out. Either try to develop satellite town or give more funds and develop these areas. If you provide fast transport system, then people will go and stay there. ಬೆಂಗಳೂರಿನಲ್ಲಿ ಯಾರಿಗೂ ಉಳಿಯಬೇಕೆಂಬ ಇಚ್ಛೆ ಇಲ್ಲ. ಅವರೆ ಕಡ್ಡಾಯವಾಗಿ ಉಳಿದಿದ್ದಾರೆ. ಬಾಂಬೆಯಲ್ಲಿ ಫ್ಯಾಕ್ಟರಿಗಳಿಗೆ, ಜನರು ಹೋಗಬೇಕಾದರೆ ೫೦-೬೦ ಕಿಲೋಮೀಟರ್ ದೂರದಿಂದ ಹೋಗುತ್ತಿದ್ದಾರೆ. ವಾಶಿಯಿಂದ ಹಾಗೂ ಥಾಣದಿಂದ ಹೋಗುತ್ತಾರೆ. ಅದೇ ರೀತಿ ಇವೊತ್ತು ಬೆಂಗಳೂರಿನಲ್ಲಿ ಕೆಲಸಕ್ಕೆ ಕನಕಪುರದಿಂದ, ರಾಮನಗರದಿಂದ ಬರಬಹುದು provided you develop a very fast transport system. ಈ ಪ್ರಕಾರ ಟ್ರಾನ್ಸ್‌ಪೋರ್ಟ್ ಸಿಸ್ಟಂ ಡೆವಲಪ್ ಮಾಡಿ. ಫ್ಲೈ ಓವರ್ಸ್, ಸಬ್ ವೇಸ್ ಮಾಡಬೇಕಾಗುತ್ತದೆ. ಇವೊತ್ತು ಸಿಟಿಯಲ್ಲಿ ಎನ್‌ವೈರ್ನಮೆಂಟ್ ಬಹಳ ಅವಶ್ಯಕ. ಹಿಂದೆ ಒಂದು ಕಾಲದಲ್ಲಿ ಬೆಂಗಳೂರನ್ನು ಗಾರ್ಡನ್ ಸಿಟಿ ಎಂದು ಹೇಳುತ್ತಿದ್ದರು. ಇವೊತ್ತು ಬರೆ ಪುಸ್ತಕದಲ್ಲಿ ಗಾರ್ಡನ್ ಸಿಟಿ ಎಂದು ಕಾಣಬೇಕಾಗುತ್ತದೆ. ನಮ್ಮ

ಸರ್ಕಾರ ಇದ್ದಾಗ ಟ್ರೀ ಪ್ಲಾಂಟೇಷನ್ ಪ್ರೋಗ್ರಾಮ್‌ಗೆ ಹೆಚ್ಚಿನ ಆಧ್ಯತೆ ಕೊಟ್ಟು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿದ್ದೇವೆ. ಹೆಚು ಪ್ರಮಾಣದಲ್ಲಿ ಟ್ರೀ ಪ್ಲಾಂಟೇಷನ್ ಪ್ರೋಗ್ರಾಮ್ ಅನ್ನು ನೀವು ಸಹ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,— ಪ್ಲಾಂಟೇಷನ್ ನೀವು ಮಾಡಿದರೆ ನೀರು ಹಾಕುವ ಕೆಲಸ ಇವರು ಮಾಡೇ ಮಾಡುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ,— ಅದೇ ಪ್ರಕಾರ ಬೇರೆ ಪಟ್ಟಣಗಳಲ್ಲಿ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ಈ ಕೆಲಸಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕಾಗುತ್ತದೆ. ಇವೊತ್ತು ನಮ್ಮಲ್ಲಿ ಹೋಲ್‌ಸೇಲ್ ಮಾರ್ಕೆಟ್ಸ್ ಏನಿವೆ. try to shift them out. ಇದರಿಂದ ಏನೂ ತೊಂದರೆ ಆಗುವುದಿಲ್ಲ. ಟ್ರಾಫಿಕ್ ಕಡಿಮೆ ಆಗುತ್ತದೆ. ಯಶವಂತಪುರದ ಹೊರಗೆ ಕೆಲಸ ಮಾಡಿ ಹೋಗಬಹುದು ಆದ್ದರಿಂದ try to shift out the wholesale markets. ಈಗಾಗಲೇ ಕೆಲವು ಕಡೆ ಮಾಡಿದ್ದೇವೆ. ಅದರ ಸಲುವಾಗಿ ಬೆಂಗಳೂರು ಸಿಟಿಯ ಜನರ ಹಿತದೃಷ್ಟಿಯಿಂದ ನೀವು ಈ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತು ಈ ಕಾವೇರಿ ಥರ್ಡ್ ಸ್ಟೇಜ್ ಎಂದು ಮಾಡಿದ್ದೇವೆ. ಸಾಧಾರಣ ಥರ್ಡ್ ಸ್ಟೇಜ್ ಸ್ಕೀಮ್ ಮುಗಿಯಬೇಕಾದರೆ ೨೫೦ ಕೋಟಿ ರೂಪಾಯಿ ಅಥವಾ ೩೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಾವು ಇದ್ದಾಗ I remember, we have finalised most of the tenders. ಇವೊತ್ತು ಬಜೆಟ್ ಪ್ರಾವಿಷನ್ ಏನು? ಕಳೆದ ವರ್ಷ ೧೯೮೯-೯೦ಕ್ಕೆ ಐದು ಕೋಟಿ ರೂಪಾಯಿ, ಐದೂವರೆ ಕೋಟಿ ರೂಪಾಯಿ ಇಡಲಾಗಿತ್ತು. ಈ ರೀತಿ ಆದರೆ ಯಾವ ಪ್ರಕಾರ ಕಾವೇರಿ ನೀರು ಬೆಂಗಳೂರು ಸಿಟಿಗೆ ಬರಬೇಕು. ಯಾವ ಪ್ರಕಾರ ಕೆಲಸ ಮಾಡಲಿಕ್ಕೆ ಸಾಧ್ಯ. It is impossible if you go with this speed. It will take another 10 years.

೪-೫೦ ಪಿ.ಎಂ

೫ ಅಥವಾ ೬ ಕೋಟಿ ಪ್ರೊವಿಜನ್ ಇಷ್ಟೊಂದು ಇಂಪಾರ್ಟೆಂಟ್ ಸ್ಕೀಂಗೆ ಇದೆ. ಅದರ ಸಲುವಾಗಿ ದಯಮಾಡಿ ಈ ಕಾವೇರಿ ೩ನೇ ಸ್ಟೇಜಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು. ಆ ನೀರು ಬೆಂಗಳೂರಿನ ಜನತೆಗೆ ಮುಟ್ಟಬೇಕಾದರೆ ತಾವು ತಮ್ಮ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಇದಕ್ಕೆ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ. ೧೯೮೯-೯೦ರಲ್ಲಿ ೬ ಕೋಟಿ ಚಿಲ್ಲರೆ ಪ್ರೊವಿಜನ್ ಮಾಡಿ ಅದರಲ್ಲಿ ೫ ಕೋಟಿ ರಿಲೀಸ್ ಮಾಡಿದಿರಿ. ಅದರಲ್ಲಿ ಸಹ ನಿಮ್ಮ ಸರ್ಕಾರ ಇದ್ದಾಗ ಒಂದೂವರೆ ಕೋಟಿ ಹಿಡಿದುಕೊಂಡಿರಿ, ಹೀಗಾಗಿ ಇವತ್ತು ಇದರ ಎಲ್ಲ ಕೆಲಸವೂ ಸ್ಟ್ಯಾಂಡ್‌ಸ್ಟಿಲ್ ಆಗಿದೆ. ಮತ್ತೊಂದು ವಿಚಾರವೇನೆಂದರೆ ಈ ಬೆಂಗಳೂರು ಮೆಟ್ರೊಪಾಲಿಟನ್ ರೀಜನ್ ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿದ್ದಾರೆ, ಅದಕ್ಕೆ ಹಲ್ಲು ಇಲ್ಲ, ಚಾಲನೆ ಇಲ್ಲ, ಅಧಿಕಾರವೂ ಇಲ್ಲ, ಏನೇನೂ ಇಲ್ಲ ಅದಕ್ಕೆ ಯಾವ ಅಧಿಕಾರಿಯೂ ಬೇಡ ನಿಮಗೆ. ಯಾರು ಜನತಾದಳದ ಗವರ್ನಮೆಂಟಿಗೆ ಕ್ಲೋಸ್ ಇದ್ದಾರೋ ಅವರನ್ನು ಪೋಸ್ಟ್ ಮಾಡುವಂಥ ಕೆಲಸ ನೀವು ಮಾಡಿದಿರಿ, ಅದು ಬಿಟ್ಟು ಮತ್ತೆ ಯಾವ ಕೆಲಸವೂ ಇಲ್ಲ. ನಾನು ಮಿನಿಸ್ಟರ್ ಇದ್ದಾಗ ಆರ್ಡರ್ ಮಾಡಿದ್ದೇನೆ. I had given powers to the Commissioner to coordinate all these works. ಇವತ್ತು ಬೆಂಗಳೂರು ಸಿಟಿಯಲ್ಲಿ ಏನಾಗುತ್ತಿದೆ, ರಸ್ತೆ ಕೆಲಸ ನಡೆಯುತ್ತಿದೆ. ಕೆ.ಇ.ಬಿ ಯವರು ಪೋಲ್ ಹಾಕಲಿಕ್ಕೆ ಡಿಗ್ ಮಾಡುತ್ತಾ ಇದ್ದಾರೆ. ಪಿ.ಡಬ್ಲ್ಯೂ.ಡಿ. ಯವರು ಒಂದು ಕಡೆ ಡಿಗ್ ಮಾಡುತ್ತಾ ಇದ್ದಾರೆ. ಮುಂದೆ ರಸ್ತೆಯ ಕೆಲಸ ನಡೆಯುತ್ತಿದೆ, ಹಿಂದೆ ಡಿಗಿಂಗ್ ನಡೆಯುತ್ತಿದೆ. ಆದ್ದರಿಂದ ಕೋ-ಆರ್ಡಿನೇಷನ್ ತರಬೇಕು, ಅದಕ್ಕಾಗಿ ಈ ಸಂಸ್ಥೆ ಇರುವುದು ಬೆಂಗಳೂರು ಸಿಟಿಯ ಪ್ಲಾನ್ಡ್ ಗ್ರೋತ್ ಆಗಬೇಕು. ಬೆಂಗಳೂರು ಸಿಟಿಯ ಪ್ಲಾನ್ಡ್ ಗ್ರೋತ್ ಆಗುವಾಗ ಬೇರೆ ಬೇರೆ ಇಲಾಖೆಯಲ್ಲಿ ಅಂದರೆ ಅದು ಸ್ಲಂ ಬೋರ್ಡ್ ಇರಬಹುದು, ಕೆ.ಇ.ಬಿ. ಇರಬಹುದು, ವಾಟರ್ ಸಪ್ಲೈ ಬೋರ್ಡ್ ಇರಬಹುದು, ಬಿ.ಡಿ.ಎ. ಇರಬಹುದು, ಬೆಂಗಳೂರು ಸಿಟಿ ಕಾರ್ಪೊರೇಷನ್ ಇರಬಹುದು-ಇವರಲ್ಲಿ ಕೋಆರ್ಡಿನೇಷನ್ ಆಗಬೇಕು. Without coordinate, no work can be taken up. ನನಗೆ ನೆನಪು ಇದೆ. ನಾನು ಸರ್ಕಾರದಿಂದ ಆದೇಶ ಮಾಡಿ ಪ್ರತಿ ತಿಂಗಳು ಇವರು ಸಭೆ ಸೇರಬೇಕು. ಸೀನಿಯರ್ ಆಫೀಸರ್ಸ್ ಮೀಟಿಂಗಿಗೆ ಅಟೆಂಡ್ ಮಾಡಬೇಕು ಎಂದು ಮಾಡಿದ್ದೆ ಆದರೆ ಈಗ ಏನಾಗಿದೆ ಎಷ್ಟು ಸಾರಿ ಭೇಟಿಯಾಗಿದ್ದಾರೆ. ಏನು ಮಾಡಿದ್ದಾರೆ ಎಂದು ಗೊತ್ತಿಲ್ಲ. ಆದುದರಿಂದ ಇದಕ್ಕೆ ಸ್ವಲ್ಪ ಹೆಚ್ಚು ಅಧಿಕಾರ ಕೊಡಿ. ಪ್ರತಿವರ್ಷ ೧೦ ಲಕ್ಷ ೨೦ ಲಕ್ಷ ಫಂಡ್ ಕೊಡುತ್ತೇವೆ, ಅದು ಸಂಬಳ ಕೊಡಲಿಕ್ಕೆ ಅಷ್ಟೆ. ಯಾರು ಸೆಕ್ರೆಟರಿ ಇದ್ದಾರೆ ಅವರಿಗೆ ಒಬ್ಬ ಪೀವನ್ ಇರಬಹುದು ಅಷ್ಟೆ. ಅಲ್ಲಿ ಟೈಪ್‌ರೈಟರ್ ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ.—ನೀವು ಹೆಚ್.ಯು.ಡಿ. ಮಿನಿಸ್ಟರಾಗಿದ್ದಾಗ ಕೂಡ ಬಹುದಾಗಿತ್ತಲ್ಲ.

ಶ್ರೀ ಆರ್.ವಿ. ದೇಶಪಾಂಡೆ.—ಅದನ್ನೇ ನಾನು ಹೇಳುತ್ತಾ ಇದ್ದೇನೆ. ನಾನು ೬ ತಿಂಗಳು ಮಂತ್ರಿ ಇದ್ದೆ. But I have done. I have passed the order. ನಾನು ಆರ್ಡರ್ ಮಾಡಿದ್ದೇನೆ, ಗವರ್ನಮೆಂಟ್ ಆರ್ಡರ್ ಇಷ್ಯೂ ಮಾಡಿಸಿದ್ದೇನೆ. and I have vested powers with him to co-ordinate but I don't know how far they have been coordinated. ತಾವು ಈ ಬೆಂಗಳೂರು ಸಿಟಿಯ ಪ್ಲಾನ್ಡ್ ಗ್ರೋತ್ ಆಗುವ ದೃಷ್ಟಿಯಿಂದ ಕೆ.ಇ.ಬಿ. ಕೆಎಸ್‌ಆರ್‌ಟಿಸಿ, ಹೋಂ ಡಿಪಾರ್ಟ್‌ಮೆಂಟ್. ಬಿ.ಡಿ.ಎ. ಕಾರ್ಪೋರೇಷನ್, ಸ್ಲಂಬೋರ್ಡ್ ಇವನ್ನು ಒಂದು ರೂಫ್ ಕೆಳಗೆ ತಂದು ಇರತಕ್ಕ ಸಮಸ್ಯೆಗಳ ಬಗ್ಗೆ ಪ್ರತಿ ತಿಂಗಳೂ ಎಲ್ಲ ಅಧಿಕಾರಿಗಳು ಡಿಸ್ಕಸ್ ಮಾಡಬೇಕು. ಇದರಿಂದ ಸಮಸ್ಯೆಗಳು ಸಾಲ್ವ್ ಆದರೆ ಬೆಂಗಳೂರು ಸಿಟಿ ಪ್ಲಾನ್ಡ್ ಗ್ರೋತ್ ಆಗುತ್ತದೆ, ಎಷ್ಟೋ ಪ್ರಾಬ್ಲಮ್ಸ್‌ನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ಬೆಂಗಳೂರು ಅರ್ಬನ್ ಟ್ರಾನ್ಸ್‌ಪೋರ್ಟ್ ಪ್ರಾಜೆಕ್ಟ್ ಎಂದು ಮಾಡಿದೆವು. ಅದು ೨೦೦ ಕೋಟಿ ಪ್ರಾಜೆಕ್ಟ್. It was posed for world Bank assistance. ಇದು ವರ್ಲ್ಡ್ ಬ್ಯಾಂಕ್‌ನಲ್ಲಿ ಏನಾಗಿದೆಯೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟನ್ನು ನಾನು ಓದಿಲ್ಲ. ವರ್ಲ್ಡ್ ಬ್ಯಾಂಕ್ ಟೀಂ ಬಂದು ಹೋದರೂ ಏನೂ. ಮತ್ತೊಂದು ಏನೂ ಇಲ್ಲ. ಸಬ್‌ವೇಸ್, ರಿಂಗ್ ರೋಡ್ಸ್, ಫ್ಲೈಓವರ್ಸ್–ಹೀಗೆ ಬೆಂಗಳೂರು ಸಿಟಿಯ ಎಲ್ಲಾ ಪ್ರಾಬ್ಲಮ್ಸ್‌ನ್ನು ಬಗೆಹರಿಸುವ ಸಲುವಾಗಿ ನಾವು ಆ ಸ್ಕೀಮನ್ನು ತಯಾರಮಾಡಿದ್ದೇವೆ. ಈಗ ಆ ಸ್ಕೀಂ ಯಾವ ಸ್ಟೇಜಿನಲ್ಲಿದೆ, ಏನಾಗಿದೆ ಎನ್ನುವುದರ ಬಗ್ಗೆ ತಾವು ಸ್ವಲ್ಪ ಬೆಳಕನ್ನು ಚೆಲ್ಲಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮ ಕಡೆ ಕೇಳಿಕೊಳ್ಳುತ್ತಾ ಇದ್ದೇನೆ.

ಅದೇ ಪ್ರಕಾರ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ಸ್. ಇದು ಕೇವಲ ವಸತಿ ಇಲಾಖೆಗೆ ಬರುವುದಿಲ್ಲ. ಇದು ಕಂದಾಯ ಇಲಾಖೆ ಮತ್ತು ವಸತಿ ಇಲಾಖೆಯ ಸಮಸ್ಯೆ. ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ಸ್ ಬೆಂಗಳೂರಿನಲ್ಲಿ ಅಷ್ಟೇ ಅಲ್ಲ, ಬೇರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿದ್ದಾರೆ. ನಾವು ಅಧಿಕಾರದಲ್ಲಿದ್ದಾಗ ಈ ಒಂದು ಕಟಾಫ್ ಡೇಟ್ ನಿಗದಿ ಮಾಡಿ ಇದನ್ನೆಲ್ಲಾ ರೆಗ್ಯುಲರೈಸ್ ಮಾಡಬೇಕೆಂದು ಡಿಸಿಷನ್ ತೆಗೆದುಕೊಂಡು ಆಜ್ಞೆ ಮಾಡಿದೆವು ಮತ್ತು ಬೆನಿಫಿಷರೀಸ್ ಎಷ್ಟು ಹಣ ತುಂಬಬೇಕೆಂದು ನಿಗದಿ ಮಾಡಿದ್ದೆವು. ಆದರೆ ಇವತ್ತು ಏನಾಗಿದೆ, ಅರ್ಬನ್ ಸೀಲಿಂಗ್ ಆಕ್ಟ್ ಉಲ್ಲಂಘನೆಯಾಗಿದೆ, ಲ್ಯಾಂಡ್‌ರೆವಿನ್ಯೂ ಆಕ್ಟ್ ಉಲ್ಲಂಘನೆ ಆಗಿದೆ, ಫ್ರಾಗ್ಮೆಂಟೇಷನ್ ಆಕ್ಟ್ ಉಲ್ಲಂಘನೆಯಾಗಿದೆ. ಹೀಗೆ ೭–೮ ಕಾಯಿದೆಗಳ ಉಲ್ಲಂಘನೆಯಾಗಿ ಇವತ್ತು ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಎಲ್ಲವನ್ನು ಒಬ್ಬನೇ ಅಧಿಕಾರಿಯ ಕೆಳಗೆ ಬರುವಂತೆ ಕಾಯಿದೆ ಮಾಡಿ ಅಧಿಕಾರ ಕೊಟ್ಟರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ಡಿಸಿಷನ್ ತೆಗೆದುಕೊಂಡಿದ್ದೆವು. ಇದಕ್ಕೆ ಸಂಬಂಧಪಟ್ಟಂತೆ ಒಂದು ಫೈಲು ಕೂಡ ಇದೆ. ಎಷ್ಟೋ ಜನರು ತಮ್ಮ ಕಟ್ಟಡಗಳನ್ನು ರೆಗ್ಯುಲರೈಸ್ ಮಾಡಿಕೊಡಿ, ಹಣ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ನೀವು ನಗರಾಭಿವೃದ್ಧಿ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತಿದ್ದೀರಿ. ಹಾಗೇ ಎನ್.ಆರ್.ಐ ಮತ್ತು ಗಗನಚುಂಬಿ ಕಟ್ಟಡದ ಬಗ್ಗೆಯೂ ಬೆಳಕು ಚೆಲ್ಲಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಏಕೆಂದರೆ ಜನರು ಇದನ್ನು ಮರೆತುಬಿಟ್ಟಿದ್ದಾರೆ

ಶ್ರೀ ಆರ್.ವಿ. ದೇಶಪಾಂಡೆ.—ನಾನು ಮಂತ್ರಿಯಾಗಿದ್ದಾಗ ಇದರ ಬಗ್ಗೆ ಆ ಕಡೆ ನಿಂತು ಅರ್ಧ ತಾಸು ಉತ್ತರ ಕೊಟ್ಟಿದ್ದೇನೆ. ಈ ಕಡೆಯಿಂದಲೂ ½ ತಾಸು ಉತ್ತರ ಕೊಡುತ್ತೇನೆ ಆದರೆ Because it is under judicial scrutiny. I will not say about it. ಯಾರಿಗೂ ಭೂಮಿ ಅಲಾಟ್ ಮಾಡಿಲ್ಲ ಬೇಕಾದರೆ ತಾವು ರೆಕಾರ್ಡ್ಸ್ ತೆಗೆದು ನೋಡಬಹುದು. ನಾನು ಮೆರಿಟ್ಸ್ ಬಗ್ಗೆ ಹೋಗುವುದಿಲ್ಲ ನಾನು ಆಗಸ್ಟ್ ೯೯ರಲ್ಲಿ ಮಂತ್ರಿಯಾಗಿದ್ದೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಉತ್ತರ ಕೊಟ್ಟಿದ್ದೇನೆ. ಆದರೆ ರಿಪೋರ್ಟ್ ಬಂದಮೇಲೆ ತಮಗೇ ಗೊತ್ತಾಗುತ್ತದೆ. ಯಾರು ಯಾರು ಇದಕ್ಕೆ ಜವಾಬ್ದಾರರು ಎಂದು ಇವತ್ತು ಅನಾಥರೈಸ್ಡ್ ಕನ್‌ಸ್ಟ್ರಕ್ಷನ್‌ನಲ್ಲಿ ಎಷ್ಟೋ ಕಾಯಿದೆಗಳು ಉಲ್ಲಂಘನೆಯಾಗಿವೆ, ಈ ಸಮಸ್ಯೆ ಬಗೆಹರಿಸಬೇಕಾದರೆ, ಒಬ್ಬ ಅಧಿಕಾರಿಗೆ ಈ ಎಲ್ಲಾ ಕಾಯಿದೆಗಳ ಕೆಳಗೆ ಕ್ರಮ ತೆಗೆದುಕೊಳ್ಳಲು ಅಧಿಕಾರ ಕೊಡಬೇಕಾಗುತ್ತದೆ. ಈ ಒಂದು ಜ್ವಲಂತ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಅರ್ಬನ್

ವೇಕೆಂಟ್ ಲ್ಯಾಂಡ್ ಟ್ಯಾಕ್ಸ್ ಬಗ್ಗೆ ಬಜೆಟ್ ಭಾಷಣದಲ್ಲಿ ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ ಈ ಆಕ್ಟನ್ನು ಇಂಟರ್‌ಡ್ಯೂಸ್ ಮಾಡುತ್ತೇವೆಂದು ಹೇಳಿದ್ದರೆ. ನಾವು ಅಧಿಕಾರದಲ್ಲಿ ಇದ್ದಾಗಲೂ ಸಹ ಅಂದರೆ ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಅರ್ಬನ್ ವೇಕೆಂಟ್ ಲ್ಯಾಂಡ್ ಟ್ಯಾಕ್ಸ್ ಪ್ರೊಪೋಸ್ ಮಾಡುತ್ತೇವೆಂದು ಹೇಳಿದ್ದರು. ಇದರಿಂದ ಸುಮಾರು ೨೦ ರಿಂದ ೨೨ ಕೋಟಿ ರೂಪಾಯಿ ಆದಾಯ ಬರಬಹುದೆಂದು ಅಧಿಕಾರಿಗಳು ಲೆಕ್ಕ ಹಾಕಿದ್ದರು, ಆದರೆ ಅಷ್ಟು ಹಣ ಬರಲಿಕ್ಕೆ ಸಾಧ್ಯವಿಲ್ಲ. ಇದರಿಂದ ಜನಗಳಿಗೆ ಕಿರುಕುಳ ಆಗುವುದರ ಜೊತೆಗೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ರೆವಿನ್ಯೂ ಬರುವುದಕ್ಕೆ ಸಾಧ್ಯವಿಲ್ಲ. ಒಂದು ಸ್ಕ್ವೇರ್ ಮೀಟರ್‌ಗೆ ಮೂರು ರೂಪಾಯಿ ಟ್ಯಾಕ್ಸ್ ಲೆವಿ ಮಾಡುತ್ತೇವೆ. ನಾನು ಬಹಳ ಗೌರವದಿಂದ, ವಿನಯದಿಂದ ಈ ಬಗ್ಗೆ ಹೇಳುತ್ತಿದ್ದೇನೆ. ಏನೆಂದರೆ ಈ ಒಂದು ತಿದ್ದುಪಡಿ ತರುವುದರಿಂದ ಹೆಚ್ಚಿನ ಆದಾಯ ಬರುತ್ತದೆನ್ನುವ ವಿಶ್ವಾಸ ನನಗಿಲ್ಲ. ಇದರಿಂದ ಸರ್ಕಾರಕ್ಕೂ ಕೆಟ್ಟ ಹೆಸರು ಬರಬಹುದು. ಸಾಮಾನ್ಯ ಜನರಿಗೂ ತೊಂದರೆ ಆಗಬಹುದು. ಬೆಂಗಳೂರು ದಾಂಡೇಲಿ, ಬೆಳಗಾಂ ಹೀಗೆ ಎಲ್ಲ ಕಡೆ ಒಂದೇ ರೀತಿಯ ಟ್ಯಾಕ್ಸ್ ಹಾಕಿದರೆ ಪರಿಸ್ಥಿತಿ ಏನಾಗುತ್ತದೆ. ಬೆಂಗಳೂರಿನಲ್ಲಿ ೩ ರೂಪಾಯಿ ಮಾಡಿದರೆ ದಾಂಡೇಲಿಯಲ್ಲಿ ಒಂದು ರೂಪಾಯಿ ಹಾಗೂ ಬೆಳಗಾಂನಲ್ಲಿ ಒಂದೂಕಾಲು ರೂಪಾಯಿ ಮಾಡಬೇಕಾಗುತ್ತದೆ, ಇಡೀ ರಾಜ್ಯಕ್ಕೆ ಒಂದೇ ರೀತಿಯ ಯೂನಿಫಾರಂ ಟ್ಯಾಕ್ಸ್ ಹಾಕುವುದರಿಂದ ಬಹಳ ದೊಡ್ಡ ಅನ್ಯಾಯವಾಗುತ್ತದೆ. ನಮಗೆ ಗೊತ್ತಿರುವಂತೆ ೧೫x೨೦, ೨೦x೩೦, ೩೦x೪೦, ಅಳತೆಯ ಸೈಟುಗಳನ್ನು ಕೊಳ್ಳುವವರು ಯಾರು ? ನರಸಿಂಹಮೂರ್ತಿಯವರು ಆಗಲೀ ದೇಶಪಾಂಡೆ ಅವರಾಗಲೀ ತೆಗೆದುಕೊಳ್ಳುವುದಿಲ್ಲ. ಬಡವರು, ಕಡು ಬಡವರು ತೆಗೆದುಕೊಳ್ಳುತ್ತಾರೆ. ಅವರ ಮೇಲೆ ಟ್ಯಾಕ್ಸ್ ಹಾಕಿದರೆ ಏನಾಗಬಹುದು ? I urge through the Speaker to exempt these categories. First of all, don't impose this tax. ೧೫x೨೦ ೨೦x೩೦, ೩೦x೪೦ ಟೋಟಲಾಗಿ ಇವುಗಳಿಗೆ ಎಕ್ಸಮ್ಷನ್ ಮಾಡಿ. ಮತ್ತು ೪೦x೬೦ ಮತ್ತು ೫೦x೮೦ ಅಳತೆಯ ಸೈಟುಗಳ ಮೇಲೆ ನೇರವಾಗಿ ಟ್ಯಾಕ್ಸ್ ಹಾಕಲಿಕ್ಕೆ ಆಗುವುದಿಲ್ಲ. ತಮಗೆ ಗೊತ್ತಿದೆ, ಸೈಟುಗಳನ್ನು ತೆಗೆದುಕೊಂಡನಂತರ ಮನೆ ಕಟ್ಟಲಿಕ್ಕೆ ಅವರಿಗೆ ಸ್ವಲ್ಪ ಟೈಂ ಕೊಡಬೇಕಾಗುತ್ತದೆ.

